ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಕಡಣಿಯ ಕಲ್ಲಪ್ಪ

ಶ್ರೀಮತಿ ಸರ್ವಮಂಗಳಾದೇವಿ ಕಿ. ಬಾಂದೇಕರ

ಕನ್ನಡ ಪುಸ್ತಕ ಪ್ರಾಧಿಕಾರ

# ಕಡಣಿಯ ಕಲ್ಲಪ್ಪ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ. ಕರೀಗೌಡ ಬೀಚನಹಳ್ಳಿ

# ಕಡಣಿಯ ಕಲ್ಲಪ್ಪ

ಶ್ರೀಮತಿ ಸರ್ವಮಂಗಳಾದೇವಿ ಕಿ. ಬಾಂದೇಕರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦ ೦೦೨

**KADANIYA KALLAPPA** A Monograph on Kadaniya Kallappa in kannada Written by: Smt . Sarvamangala ki. Bandekar M.A., Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 100
Copies : 1000
Price : ₹ 60.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೧೦೦
ಪ್ರತಿಗಳು : ೧೦೦೦
ಬೆಲೆ : ₹ ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ


ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ. ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ಮಾತು

ನಾನು ಗುಲಬರ್ಗಾ ವಿಶ್ವ ವಿದ್ಯಾಲಯದಲ್ಲಿ ೧೯೮೭, ೧೯೮೮ರಲ್ಲಿ ಎಂ.ಎ., ವಿದ್ಯಾರ್ಥಿಯಾಗಿದ್ದಾಗ ಜಾನಪದ ಕಲೆಗಳನ್ನು ಗುರುತಿಸುವುದು, ಕಲಾವಿದರ ಮಾಹಿತಿ ಸಂಗ್ರಹಿಸುವ ಕೆಲಸ ತುಂಬ ಭರದಿಂದ ನಡೆದಿತ್ತು. ನಾನು ಜಾನಪದ ಸಾಹಿತ್ಯದ ವಿದ್ಯಾರ್ಥಿನಿ ಅಲ್ಲದಿದ್ದರೂ ಜಾನಪದ ಕಲೆ–ಸಾಹಿತ್ಯದ ಕಡೆಗೆ ತುಂಬ ಒಲವಿತ್ತು. ನನ್ನ ಗುರುಗಳಾದ ಡಾ.ಎಂ.ಎಸ್. ಲಠ್ಠೆ. ಡಾ ಎಂ.ಜಿ. ಬಿರಾದರ ಜಾನಪದ ಕಲೆ, ಸಾಹಿತ್ಯ ಸಂಗ್ರಹದಲ್ಲಿ ತುಂಬ ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದರು. ಆಗ ನಾನು ಅವರು ಸಂಗ್ರಹಿಸಿದ ಜಾನಪದ ಕವಿಗಳ, 'ಗೀಗೀ', 'ಲಾವಣಿ', ಹಾಡುಗಾರರ ಚರಿತ್ರೆಗಳನ್ನು ತುಂಬ ಆಸಕ್ತಿಯಿಂದ ಓದಿ ತಿಳಿದುಕೊಳ್ಳುತ್ತಿದ್ದೆ. ಗುಲಬರ್ಗಾ ಜಿಲ್ಲೆಯಲ್ಲಿ ಆಗಿ ಹೋದ ಗೀಗೀ ಹಾಡುಗಾರರ ಜೊತೆಗೆ ವಿಜಾಪುರ –ಗುಲಬರ್ಗಾ ಜಿಲ್ಲೆ ಗಡಿಯ ಪ್ರದೇಶದಲ್ಲಿದ್ದ ಕಡಣಿ ಕಲ್ಲಪ್ಪನ ಚರಿತ್ರೆ, ಕಲ್ಲಪ್ಪ ರಚಿಸಿದ ಗೀಗೀ ಹಾಡು ಕೇಳಿ ತುಂಬ ಪ್ರಭಾವಿತಳಾದೆ. ಹಳ್ಳಿಯ ಕಲೆ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸಲು ಅವರು ಮಾಡಿದ ಪ್ರಯತ್ನ ದಾಖಲಿಸುವ ಮನಸ್ಸು ನನಗಾಯಿತು. ಅದರಿಂದ ಶಿಷ್ಟ ಸಾಹಿತ್ಯದೊಡನೆ ಜಾನಪದ ಸಾಹಿತ್ಯದ ಕಡೆಗೂ ನನ್ನ ಒಲವು ಹರಿಯಿತು. ಅಂದಿನಿಂದ ಶಿಷ್ಟ ಸಾಹಿತ್ಯದೊಡನೆ ಜಾನಪದ ಸಾಹಿತ್ಯ ಕುರಿತು ಬರೆಯ ತೊಡಗಿದೆ.

ಉತ್ತರ ಕರ್ನಾಟಕದಲ್ಲಿ ಗೀಗೀ ಹಾಡಿನಲ್ಲಿ ತುಂಬ ಹೆಸರು ಮಾಡಿದ ಕಡಣಿಯ ಕಲ್ಲಪ್ಪನ "ಜೀವನ ಸಾಧನೆ" ಕುರಿತು ಬರೆದು ಕೊಡಬೇಕೆಂದು ಕರ್ನಾಟಕದ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪತ್ರ ಬಂದಿತು. ಆಗ ನಾನು ಆ ಹಿಂದಿನ ದಿನಗಳನ್ನು ನೆನೆಸಿಕೊಂಡು ನನ್ನಲ್ಲಿ ಆಗ ಚೂರು– ಪಾರು ಸಂಗ್ರಹಿಸಿ ಕೊಂಡಿದ್ದ ಮಾಹಿತಿಗೆ ಇನ್ನಷ್ಟು ವಿಷಯ ಸಂಗ್ರಹಿಸಿ ನಮ್ಮ ತಂದೆ ಶ್ರೀ.ಎ.ಕೆ. ರಾಮೇಶ್ವರರ ಸಹಕಾರ ಪಡೆದು ಈ ಕೃತಿ ರಚಿಸಿಕೊಡಲು ಮುಂದಾದೆ.

ಕನ್ನಡ ಪುಸ್ತಕ ಪ್ರಾಧಿಕಾರ **ಕನ್ನಡ ಕಟ್ಟಿದವರು** ಮಾಲಿಕೆಯಲ್ಲಿ ಕಡಣಿ ಕಲ್ಲಪ್ಪನ ಹೆಸರು ಸೇರಿಸಿ ಕಲ್ಲಪ್ಪನ ಸಾಹಿತ್ಯದ ಬಗ್ಗೆ ಆಸಕ್ತಿ ಇದ್ದ ನನ್ನ ಕಡೆಯಿಂದ ಈ ಪುಸ್ತಕ ಬರೆಯಿಸಿ ಪ್ರಕಟಿಸುವ ಕಾರ್ಯ ಕೈಕೊಂಡು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ, ಖ್ಯಾತ ಕನ್ನಡ ಕವಿಗಳೂ ಡಾ.ಸಿದ್ಧಲಿಂಗಯ್ಯನವರಿಗೂ ಆಡಳಿತಾಧಿಕಾರಿ

ಶ್ರೀ ಬಿ.ಎಚ್ ಮಲ್ಲಿಕಾರ್ಜುನವರಿಗೂ ಈ ಕಾರ್ಯ ನನಗೆ ಒಪ್ಪಿಸಿ ಕೊಟ್ಟು ಮಾರ್ಗದರ್ಶನ ಮಾಡಿದ ಡಾ. ಎಚ್.ಟಿ. ಪೋತೆ ಪ್ರೋಫೆಸರ್ ಅವರಿಗೂ ಸಂಗ್ರಹ ಕಾರ್ಯದಲ್ಲಿ ನೆರವಾದ ಶ್ರೀ ಹ.ಮ. ಪೂಜಾರ ಶ್ರೀ, ಪ್ರಕಾಶ ಪಾಟೀಲ, ಬೈಲೂರಿ ಭೀಮಣ್ಣ ಕ್ಷತ್ರಿ, ಕಡಣಿಯ ಊರ ಹಿರಿಯರಾದ ಶ್ರೀ ದುಂಡಪ್ಪ. ಶಿವಲಿಂಗಪ್ಪ ಬಾಳಸಂಗಿ, ಶ್ರೀ ವ್ಹಿ.ಜಿ. ಪಾಟೀಲ ಶ್ರೀಹಣಮಂತರಾಯ ಸಿದ್ರಾಮಪ್ಪ ಕಳಸಗೊಂಡ ಶ್ರೀ ಕಮಲಾಕರ ಕತ್ತಿ ಮುಂತಾದ ಮಹನಿಯರನ್ನು ಇಲ್ಲಿ ನೆನೆಯದೆ ಇರಲಾರೆ.

ಶ್ರೀಮತಿ. ಸರ್ವಮಂಗಳಾದೇವಿ. ಕಿ. ಬಾಂದೇಕರ

# ಪರಿವಿಡಿ


| | | |
|---|---|---|
| ೧. | ಲಾವಣಿ ಅಥವಾ ಗೀಗೀ ಹಾಡಿನ ಹಿನ್ನೆಲೆ | ೩ |
| ೨. | ಕ್ಷತ್ರಿ ಕಲ್ಲಪ್ಪನ ಜನನ – ಬಾಲ್ಯ | ೮ |
| ೩. | ಲಾವಣಿಗೆ ಹಾಡಿಗೆ ಹೆಸರಾದ ವಿಜಾಪುರ ಜಿಲ್ಲೆಯ ಪರಂಪರೆ | ೧೨ |
| ೪. | ಮೊದಲನೇ ತುತ್ತಿಗೆ ಹರಳು ಬಂದಿತು | ೧೫ |
| ೫. | ಸಮಾಜ ಸುಧಾರಣೆಗಾಗಿ ಗೀಗೀ ಹಾಡು | ೧೯ |
| ೬. | ಶರಣರ ಚರಿತ್ರೆಗಳನ್ನು ಹೆಣೆದು ಹಾಡಿದರು | ೩೧ |
| ೭. | ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದ ಕಡಣಿಯ ಕಲ್ಲಪ್ಪ | ೪೦ |
| ೮. | ಗೀಗೀ ಹಾಡಿಗೆ ಸುಗ್ಗಿಯಕಾಲ | ೪೭ |
| ೯. | ಹೆಣ್ಣು ಮಕ್ಕಳ ಮೋಜು ಮಜಾವಕ್ಕೆ ಕಡಿವಾಣ | ೫೪ |
| ೧೦. | ಕಲ್ಲಪ್ಪನ ದೃಷ್ಟಿ, ಲಾವಣಿ ಹಾಡಿನ ಸೃಷ್ಟಿ | ೫೮ |
| ೧೧. | ಶ್ರಿಂಗಾರ ರಸ ಲಾವಣಿಗೆ ಬಂಗಾರ ವಿದ್ದಂತೆ | ೬೦ |
| ೧೨. | ಸಮಾಜದಲ್ಲಿ ಕಡಣಿಯ ಕಲ್ಲಪ್ಪನ ಸ್ಥಾನ ಮಾನ | ೬೨ |
| ೧೩. | ಬಡತನದ ಬವಣೆ: ಶೂನ್ಯ ಸಂಪಾದನೆ | ೬೬ |
| ೧೪. | ಶರಣರನ್ನು ಮರಣದಲ್ಲಿ ಕಾಣು | ೭೦ |
| ೧೫. | ಗ್ರಂಥ ಋಣ | ೭೩ |
| ೧೬. | ಅನುಬಂಧ ೧ ರಲ್ಲಿ ಕಡಣಿ ಕಲ್ಲಪ್ಪ ರಚಿಸಿದ ಲಾವಣಿ ಹಾಡುಗಳು | ೭೫ |

ಗೀಗೀ ಹಾಡುಗಾರ ಮತ್ತು ಕವಿ



ಕಡಣಿ ಕಲ್ಲಪ್ಪ
ಜನನ ೧೯೧೦ - ಮರಣ ೧೯೭೫

# ಲಾವಣಿ ಅಥವಾ ಗೀಗೀ ಹಾಡಿನ ಹಿನ್ನೆಲೆ

ಕನ್ನಡ ನಾಡಿನ ಗಂಡುಮೆಟ್ಟಿನ ನೆಲದಲ್ಲಿ ತನನ ಎಂದು ಹರಿದು ಬಂದ "ಲಾವಣಿ ಅಥವಾ ಗೀಗೀ ಹಾಡು ಮುಖ್ಯವಾಗಿ ವೀರ ರಸವನ್ನು ಮೈಗೂಡಿಸಿಕೊಂಡು ಬಂದ ಒಂದು ಉತ್ತಮ ಗೀತ ಪ್ರಕಾರವೆಂದು ಹೇಳಬಹುದು. ಮೊಟ್ಟ ಮೊದಲು ಇದು ಮರಾಠಾ ಪೇಶ್ವೆಯವರ ಕಾಲದಲ್ಲಿ ಹುಟ್ಟಿ ಆ ಮೇಲೆ ಮಹಾರಾಷ್ಟ್ರದಿಂದ ಕರ್ನಾಟಕದಲ್ಲಿ ವೀರ ರಸವನ್ನು ಉಕ್ಕಿಸಲು, ಲಾವಣ್ಯವನ್ನು ಬಿಂಬಿಸಲು ಕನ್ನಡ ನಾಡಿನಲ್ಲಿ ಪ್ರವಹಿಸಿತು. ಈ ಗೀತ ಪ್ರಕಾರದ ಲಾವಣಿ ಅಥವಾ ಗೀಗೀ ಹಾಡುಗಳನ್ನು ರಚಿಸಿ ಡಪ್ಪು ನುಡಿಸಿ ತುಂತುನಿ ನಾದ, ತಾಳ ವಾದ್ಯಗಳೊಂದಿಗೆ ಅತ್ಯಂತ ರಮ್ಯವಾಗಿ ಹಾಡಿ ಜನಮನವನ್ನು ಸೆಳೆದವರು ನಮ್ಮ ಜಾನಪದರು. ಶ್ರೀಸಾಮಾನ್ಯರು, ಅನಕ್ಷರಸ್ಥರು ಎಂದು ಹೇಳಬಹುದು. ಇಂತಹ ಜನರನ್ನು ಕುರಿತೇ ಕವಿರಾಜ ಮಾರ್ಗಕಾರ "ಕುರಿತೋದದೆಯಿಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್" ಎಂದು ಅವರ ಬೆನ್ನು ತಟ್ಟಿ ಹುರಿದುಂಬಿಸಿರಬಹುದು. ಇಂತಹ ಪರಿಣಿತ ಮತಿಗಳು ಅಂದು ಜನ ಸಾಮಾನ್ಯರ ಮಧ್ಯದಲ್ಲಿ ಎದ್ದು ಕಾಣುತ್ತಿರುವುದನ್ನು ಸಹಿಸಿಕೊಳ್ಳದ ಮಧುರ ಕವಿ.

"ಪಂಡಿತರುಂ ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂಡುಚಿಯ ಬೀದಿವರೆಯ ಬೀರನ ಕಥೆಯೇ"

ಎಂದು ಹಾಸ್ಯ ಮಾಡಿರಬಹುದು. ಇಂತಹ ಹಾಸ್ಯ – ಅಪಹಾಸ್ಯಗಳಿಗೆ ಕಿವಿಗೊಡದೆ ಜನಮನವನ್ನು ಆಕರ್ಷಿಸಿ ಜನರ ಮಧ್ಯದಲ್ಲಿ ಹುಟ್ಟಿದ ಹಾಡು ಜನ ಜಾಗೃತಿ ಗೊಳಿಸುವಲ್ಲಿ ಅಗ್ರ ಪಾತ್ರ ವಹಿಸಿತು.

ಲವಣ ಲಾವಣ್ಯ ಇತ್ಯಾದಿ ಮೂಲಗಳಿಂದ ಹುಟ್ಟಿ ಬಂದ ಈ ಲಾವಣಿ ಸಾಹಿತ್ಯ ೧೬೫೦ ರ ಆಸುಪಾಸಿನಲ್ಲಿ ಬಾಳಿದ ಗುಣಚಂದ್ರನು ತನ್ನ ಛಂದಸಾರದಲ್ಲಿ

"ಲಘುಗಳ ಮಿಳಿತವ ಮಾಡಿ

ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ
ಪ್ರಾಸನು ಕೊನೆಯಲಿ ಕೂಡಿ
ಪಾದ ಮಿತಿಯ ಬೀಸಾಡಿ
ಲಾವಣಿ ಕೃತಿಗಳ ಪಾಡಿ".

ಎಂದು ಲಾವಳಿ, ಲಾವಣಿಯ ಗುಣ ಲಕ್ಷಣಗಳನ್ನು ವಿವರಿಸಿದ್ದಾನೆ.

ಇಂದು ಪ್ರಚಲಿತವಿರುವ ಈ ಲಾವಣಿ, ಲಾವಳಿ ಪದದಿಂದ ಹುಟ್ಟಿದೆಯೆಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಡಾ॥ ಎಂ.ಎಂ. ಕಲಬುರ್ಗಿಯವರು ಲಾವಳೀ ಪದದಿಂದಲೇ ಲಾವಣಿ ಹುಟ್ಟಿದೆಯೆಂದು ಹೇಳುತ್ತಾರೆ.

ಈ ಲಾವಣೀ ಪದಕ್ಕೆ ಆಶ್ರಯ ನೀಡಿದ ಗಂಡುಮೆಟ್ಟಿನ ತಾಣ ಕರ್ನಾಟಕ. ಅದರಲ್ಲಿಯೂ ಉತ್ತರ ಕರ್ನಾಟಕ ಬೆಳಗಾವಿ, ವಿಜಾಪೂರ, ಕಲಬುರ್ಗಿ, ಬೀದರ ಜಿಲ್ಲೆಗಳು ಲಾವಣಿ ಹಾಡಿಗೆ ತವರು ಮನೆ ಎಂದು ಹೇಳಬಹುದು.

ಬ್ರಿಟಿಷರು ಭಾರತದಲ್ಲಿ ಕಾಲಿರಿಸಿ ಸಣ್ಣ ದೊಡ್ಡ ಸಂಸ್ಥಾನಗಳನ್ನು ಕಬಳಿಸುತ್ತಿರುವ ಕಾಲದಲ್ಲಿ ಈ ಲಾವಣಿ ಸಾಹಿತ್ಯ ಜನರಲ್ಲಿದ್ದ ವೀರಶ್ರಿಯನ್ನು ಜಾಗೃತಗೊಳಿಸಲು ಸ್ವಾಭಿಮಾನವನ್ನು ಬಡಿದೆಬ್ಬಿಸಲು, ಆತ್ಮಾಭಿಮಾನವನ್ನು ಕುದುರಿಸಲು ಹುಟ್ಟಿ ಬಂದ "ಕಥನ ಗೀತೆ" ಈ "ಲಾವಣಿ". ಈ ಲಾವಣಿಯಲ್ಲಿ ಎರಡು ಪ್ರಕಾರ. ಮೊದಲನೆಯ ಪ್ರಕಾರ ಒಬ್ಬ ವ್ಯಕ್ತಿ ಟೊಂಕಕ್ಕೆ ವಸ್ತ್ರ ಸುತ್ತಿ ತಲೆಯ ಮೇಲೆ ಆಕರ್ಷಕ ರುಮಾಲು ಸುತ್ತಿ ಕಾಲಲ್ಲಿ ಗೆಜ್ಜೆ ಕಟ್ಟಿ ಸಣ್ಣ ಸಣ್ಣ ಹೆಜ್ಜೆಗಳನ್ನು ಕಲಾತ್ಮಕವಾಗಿ ಹಾಕಿ ಚಿಟಿಕೆ ಹೊಡೆದು ಹಾಡುತ್ತಾನೆ. ಈ ಪ್ರಕಾರದ ಹಾಡುಗಾರಿಕೆಗೆ ಬಯಲ ಲಾವಣಿ ಎಂದು ಕರೆಯುತ್ತಾರೆ.

ಇನ್ನು ಎರಡನೆಯ ಪ್ರಕಾರ ಲಾವಣಿ ಎಂದರೆ ಪ್ರಮುಖ ಹಾಡುಗಾರ ಮುಂದೆ ಇದ್ದು ಡಪ್ಪು ಬಾರಿಸಿ ಹಾಡಿದರೆ ಅವನ ಹಿಂದೆ ಇದ್ದ ಇಬ್ಬರಲ್ಲಿ ಒಬ್ಬರು ತುಂತುನಿ ಬಾರಿಸಿದರೆ ಇನ್ನೊಬ್ಬ ತಾಳ ಕಟೆಯುತ್ತಾನೆ. ಈ ತಾಳ ಲಯದಲ್ಲಿ ತುಂಬ ರಮ್ಯವಾಗಿ ಹರಿದು ಬರುವ ಈ ಕಲೆ ಜನಮನವನ್ನು ಆಕರ್ಷಿಸಿತು. ಈ ಕಲೆ, ಹಾಡುಗಾರಿಕೆಗೆ, "ಗೀಗೀ ಮೇಳ" ಎಂದು ತುಂಬ ಅಭಿಮಾನದಿಂದ ಕರೆಯಲಾಯಿತು.

ಈ ಗೀಗೀ ಹಾಡುಗಳಲ್ಲಿ ಎರಡು ಪ್ರಕಾರ ಒಂದು 'ಹರದೇಶಿ' ಇನ್ನೊಂದು 'ನಾಗೇಶಿ'. ಹರದೇಶಿಗೆ 'ತುರಾ' ಎಂದೂ 'ನಾಗೇಶಿ'ಗೆ 'ಕಲ್ಗಿ' ಎಂದು ಕರೆಯುತ್ತಾರೆ. ಈ 'ಕಲ್ಗಿ' 'ತುರಾ' ಕಲೆಗೆ ಮಹಾರಾಷ್ಟ್ರದಲ್ಲಿ 'ವಾಗ್ಯಾ – ಮುರುಳಿ' ಎಂದೂ ಶಿವ, ಶಕ್ತಿ ಎಂದು ಇಂದಿಗೂ ಪ್ರಸಿದ್ಧ.

ಈ ಮೇಳಗಳು ಸಮಾಜದಲ್ಲಿ ತಮ್ಮ ತಮ್ಮ ಛಾಪ ಮೂಡಿಸಲು ಸ್ಪರ್ಧೆಗಿಳಿಯುತ್ತ ಸವಾಲು – ಜವಾಬು ಹಾಡುಗಳನ್ನು ಹಾಡುತ್ತಾರೆ. ಗಂಡಿನ ಪಕ್ಷ ವಹಿಸಿ ಹಾಡುವ ಮೇಳಕ್ಕೆ 'ಹರದೇಶಿ' 'ತುರಾ' ಎಂದು ಹೆಣ್ಣಿನ ಪಕ್ಷ ವಹಿಸಿ ಹಾಡುವವರಿಗೆ 'ನಾಗೇಶಿ' 'ಕಲ್ಗಿ' ಎದು ಕರೆಯುತ್ತಾರೆ. ಇವರು ಸ್ಪರ್ಧೆಗಿಳಿದರೆ ಒಬ್ಬರನ್ನೊಬ್ಬರು ಸೋಲಿಸಲು ಹವಣಿಸುತ್ತಾರೆ. ಸೋತರೆ ಸಮಾಜದಲ್ಲಿ ಕೂಡಿದ ಸಭೆಯಲ್ಲಿ ಮುಖ ಭಂಗವಾಗುತ್ತದೆ ಎಂದು ಈ ಎರಡೂ ಮೇಳಗಳು ಸಂದರ್ಭಕ್ಕನುಸರಿಸಿ ಹಾಡುಗಳನ್ನು ಕಟ್ಟಿ ಸವಾಲಿಗೆ ಜವಾಬು ಕೊಟ್ಟು ಮತ್ತೊಂದು ಹೊಸ ಹೊಸ ಸವಾಲು ಹಾಕಿ ಅಟ್ಟದ ಮೇಲಿಂದ ಇಳಿದು ಕೆಳಗೆ ಬರುತ್ತಾರೆ.

ಅಟ್ಟ ಏರಿ ಬರುವ ಮೇಳ ಹೊಸ ಸವಾಲು ಸ್ವೀಕರಿಸಿ ತಾಳ ಕಟೆಯುತ್ತ ತುಂತುನಿ ನಾದದಲ್ಲಿ ಡಪ್ಪಿನ ಮೇಲೆ ಕೈಹಾಕಿ ಸಭೆಯ ಚಿತ್ತವನ್ನು ತನ್ನತ್ತ ಸೆಳೆಯುತ್ತ ಸವಾಲಿಗೆ ಜವಾಬು ಕೊಟ್ಟು ಸಭಿಕರನ್ನು ನಗೆಯ ಕಡಲಲ್ಲಿ ತೇಲಿಸಿ ತಾನು ಹರ್ಷ ಪಟ್ಟು 'ತನನ' ಎಂದು ಕುಣಿಯುತ್ತಾನೆ. ಮೊದಮೊದಲು ಹೆಣ್ಣಿನ ಪರ ಹಾಡುವವರು ಗಂಡಸರೇ ಇದ್ದರು. ಗಂಡಸರ ಪರ ಹಾಡಲು ಗಂಡಸರೇ ಇದ್ದರು. ಬರಬರುತ್ತ ಹೆಣ್ಣಿನ ಪರ ಹಾಡುವವರು 'ಹೆಣ್ಣು' ಮಕ್ಕಳೇ ಡಪ್ಪು ಹಿಡಿದು "ಸವಾಲು–ಜವಾಬು" ಹಾಡಲು ಟೊಂಕ ಕಟ್ಟಿ ನಿಂತರು. ಆಗ ಈ ಗೀಗೀ ಮೇಳಕ್ಕೆ ಇನ್ನುಷ್ಟು ಮಜಾ ಬಂದಿತು.

ಈ ಗೀಗೀ ಹಾಡುಗಾರರು ಹರದೇಶಿ ಪರ ಹಾಡುವವರು. ಗಣೇಶನ ಸ್ತುತಿಯೊಂದಿಗೆ ತನ್ನ ಹಾಡು ಪ್ರಾರಂಭಿಸುತ್ತಿದ್ದ. ಈ ಸ್ತುತಿ ಪದಕ್ಕೆ 'ಸಖಿ ಇಲ್ಲವೆ ಘನ್ನ' ಎಂದು ಕರೆಯಲಾಗುತ್ತದೆ. ಈ 'ಸಖಿ' ಹಾಡುತ್ತ ತಾನು ಮುಂದೆ ಹಾಡಬೇಕಾದ ಹಾಡಿನ ಜಾಡಿಗೆ ಇಳಿದು ವಿಸ್ತರಿಸಿ ಹಾಡಿ, ಹಾಡಿನ ಕೊನೆಯಲ್ಲಿ 'ಖ್ಯಾಲಿ' ಎಂಬ ಇನ್ನೊಂದು ಹಾಡು ಹಾಡಿ, ಹಾಡಿನ ತನ್ನ ಕಥನ ಗೀತ ಮುಗಿಸುತ್ತಾರೆ. ತಾವು ಹಾಡುವ 'ಪಲ್ಲವಿ' 'ಅನುಪಲ್ಲವಿ' ಚೌಕಗಳಿಂದ ಸುದೀರ್ಘವಾಗಿರುತ್ತದೆ. ಉದಾಹರಣೆಗೆ :

"ಮಾಲಗಾರಣ್ಣನ ಮಾತು ಕೇಳಿರಿ
ಮಾಡಿದಾನ ತ್ಯಾಟ ।
ಈ ದೇಹದೊಳಗೊಂದು ಬಾವಿತೋಡ್ಸಿದಾನ'.
ಆತ್ಮ ರಾಮ ನಾಟ ॥"

ಈ ಪಲ್ಲವಿ ಮೇಲಿಂದ ಈ ಗೀಗೀ ಹಾಡಿನ ಚೌಕು ನಮಗೆ ಹೊಳೆಯುತ್ತದೆ. ಒಂದೊಂದು ಚೌಕಗಳಲ್ಲಿ ದೇಹದ ಅವಯವಕ್ಕೂ ಬಾವಿಗೂ ಹೋಲಿಕೆ ನೀಡಿ

ಪದ್ಯ ರಚಿಸಿದ್ದು ಕಂಡು ಬರುತ್ತದೆ. ಈ ಚೌಕುಗಳ ಹಾಡಿನ ಜಾಡಿನಲ್ಲಿ ಮುಂದುವರಿದು ಹಾಡುವಾಗ ಏರು, ಇಳುವು, ಚಾಲ ದಿದುಬಿ, ದುಡುಕಿ, ಕೂಡ ಪಲ್ಲಗಳಿಂದ ರೂಪಿತವಾಗಿರುತ್ತದೆ ; ಒಂದು ಹಾಡಿನಲ್ಲಿ ವಸ್ತು ವ್ಯಾಪ್ತಿಗೆ ಅನುಗುಣವಾಗಿ ಕನಿಷ್ಠ ಮೂರು ನಾಲ್ಕು ಹೆಚ್ಚೆಂದರೆ, ಏಳು ಎಂಟು ಚೌಕಗಳಿರುತ್ತದೆ.

ಈ ಲಾವಣಿ ಹಾಡುಗಳಲ್ಲಿ ವೀರರಸ ಪ್ರಧಾನವಾಗಿದ್ದರೂ ಹೆಣ್ಣಿನ ರೂಪ ಲಾವಣ್ಯ ಚಿತ್ರಿಸುವಾಗ ಶೃಂಗಾರ ರಸ ಒಡಮೂಡಿ ಬರುತ್ತದೆ. ರೌದ್ರರಸ ಪ್ರಧಾನವಾಗಿದ್ದರೂ ಶರಣರನ್ನು, ಸಂತರನ್ನು, ಸಜ್ಜನರನ್ನು ಸೌಮ್ಯ ರಸ, ಶಾಂತಿ, ರಸ ಅಲ್ಲಲ್ಲಿ ಉಕ್ಕಿ ಬಂದು ಮನುಷ್ಯನನ್ನು ಆನಂದ ಸಾಗರಕ್ಕೆ ಕರೆದೊಯ್ಯುತ್ತದೆ. ಸಮಾಜದ ಹುಳುಕನ್ನು ಎತ್ತಿ ತೋರಿಸುವಾಗ ಹಾಸ್ಯ, ವಿಡಂಬನೆ ತನ್ನಷ್ಟಕ್ಕೆ ತಾನೇ ಗೀತೆಗಳಲ್ಲಿ ಹರಿದು ಬಂದು ಜನಮನವನ್ನು ತಟ್ಟುತ್ತದೆ. ಸಮಾಜದಲ್ಲಿ ನಡೆದ ಅನ್ಯಾಯಕ್ಕೆ ಆಸ್ಪದ ಸಿಕ್ಕು ಒಳ್ಳೆಯವರಿಗೆ ಕೇಡುಕುಂಟಾಗುತ್ತಿರುವಾಗ ಭೀಬತ್ಸ ರಸ ಹಣಿಕೆ ಹಾಕಿ ಮನಸ್ಸಿಗೆ ಬೇಸರವನ್ನುಂಟು ಮಾಡುತ್ತದೆ.

ಹೀಗೆ ಈ ಲಾವಣಿ ಅಥವಾ ಗೀಗೀ ಹಾಡುಗಳಲ್ಲಿ ನವರಸಗಳು ತನ್ನಷ್ಟಕ್ಕೆ ತಾನೇ ಸಹಜವಾಗಿ ಹರಿದು ಬಂದು ಏರು, ಇಳುವಿನಲ್ಲಿ ಪ್ರವಹಿಸಿ ಅಂತ್ಯ ಪ್ರಾಸಗಳ ಚಮತ್ಕಾರಗಳಿಂದ ಮನುಷ್ಯನ ಮನಸ್ಸನ್ನು ಸೂರೆಗೊಳ್ಳುತ್ತವೆ. ಇಂತಹ ಲಾವಣಿ ಅಥವಾ ಗೀಗೀ ಹಾಡುಗಳನ್ನು ಮೊದಲು ಸಂಗ್ರಹಿಸಿ, ಪ್ರಕಟಿಸಿದ ಕೀರ್ತಿ ಫ್ಲೀಟರ್ ಅವರಿಗೆ ಸಲ್ಲುತ್ತದೆ. ಈ ಗೀತೆಗಳನ್ನು ಫ್ಲೀಟರ್ ಅವರು 'ಇಂಡಿಯನ್ ಎಂಟಕೂರಿ" ಪತ್ರಿಕೆಯಲ್ಲಿ ಪ್ರಕಟಿಸಿ ಜನರ ಗಮನವನ್ನು ಸೆಳೆದರು. ಇದು ನಡೆದದ್ದು ೧೮೫೭ ರ (1857)ರ ಪ್ರಥಮ ಸ್ವಾತಂತ್ರ್ಯ ಯುದ್ಧದ ನಂತರ. ೧೮೮೫ (1885) ರಲ್ಲಿ ಪ್ರಾರಂಭವಾಯಿತು ಎಂದು ಹೇಳಬಹುದು. ಆಗ ಬ್ರಿಟಿಷರು "ಭಾರತದಲ್ಲಿ ನಮ್ಮದು ಸೂರ್ಯ ಮುಳುಗದ ಸಾಮ್ರಾಜ್ಯ" ವೆಂದು ಬಲವಾಗಿ ನಂಬಿಕೊಂಡ ಕಾಲ.

ಭಾರತ ದೇಶ ಅತ್ಯಂತ ಕಷ್ಟ ಕಾಲದಲ್ಲಿದ್ದಾಗ ನಮ್ಮ ಗೀಗೀ ಹಾಡಿನ ಜನಪದ ಕವಿಗಳು, ಹಾಡುಗಾರರು ಡಪ್ಪು ನುಡಿಸಿ ತುಂತುನಿ ಬಾರಿಸಿ ತಾಳ ಕಟೆದು ಜಾತ್ರೆ ಉರುಸು ಉತ್ಸವಗಳಂತಹ ಸಮಾರಂಭಗಳಲ್ಲಿ ಈ ಗೀಗೀ ಹಾಡುಗಳನ್ನು ಹಾಡಿ ಜನ ಜಾಗೃತಿಗೊಳಿಸಿದರು. ಈ ದಿಸೆಯಲ್ಲಿ ಹುಟ್ಟಿ ಬಂದ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮ, ಮುಂಡರಗಿ ಭೀಮರಾಯ, ನರಗುಂದ ಬಾಬಾಸಾಹೇಬ, ಹಲಗಲಿಯ ಬೇಡರು, ಸಿಂಧೂರ ಲಕ್ಷ್ಮಣ, ಸುರಪುರ ವೆಂಕಟಪ್ಪ ನಾಯಕ ಮುಂತಾದ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಅತ್ಯಂತ ಆಕರ್ಷಕವಾಗಿ ಕಥನ ಗೀತೆಗಳು ವೀರರಸ ತುಂಬಿಕೊಂಡು ಹೊರಬಂದವು.

'ಸಂಗಾ–ಬಾಳ್ಯಾ' ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ ಸಾಮಾಜಿಕ ಕಳಕಳಿಯನ್ನು ಬಿಂಬಿಸುವ ಕಥನ ಗೀತೆಗಳು ಹೊರಬಂದು ಜನರನ್ನು ಬಡಿದೆಬ್ಬಿಸಿದವು. ಈ ಸಂದರ್ಭದಲ್ಲಿ ದೊಡ್ಡಾಟ, ಸಣ್ಣಾಟಗಳಿಗಿಂತ "ಗೀಗೀ ಮೇಳ"ದ ಹಾಡುಗಾರಿಕೆ ತುಂಬ ಜನಪ್ರಿಯವಾಗಿತ್ತು. ಬೆಳಗಾವಿ, ವಿಜಾಪೂರ, ಕಲಬುರ್ಗಿ, ಬೀದರ ರಾಯಚೂರ ಜಿಲ್ಲೆಗಳಲ್ಲಿ ಈ ಕಲೆ ಹುಲುಸಾಗಿ ಬೆಳೆದು ಬಂದಿತು.

ಈ "ಗೀಗೀ ಮೇಳ"ಗಳು ಸಂಸ್ಥಾನಿಕರು, ದೇಸಾಯಿ ದೇಶಗತಿ ರಾಜ, ಮಹಾರಾಜರ ಕಾಲದಲ್ಲಿ ಹುಟ್ಟಿ ಜನ ಮನ್ನಣೆಯನ್ನು ಪಡೆದು ಗಾಂಧೀಜಿಯವರು ಹೂಡಿದ ಸ್ವಾತಂತ್ರ್ಯ ಚಳುವಳಿಯಲ್ಲಿ ವ್ಯಾಪಕ ಪ್ರಚಾರ ಪಡೆದು, ಸ್ವಾತಂತ್ರ್ಯ ನಂತರ ದೇಶಾಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ದೇಶಭಕ್ತರನ್ನು ಕುರಿತು ಹಲವಾರು ಯೋಜನೆಗಳನ್ನು ಕುರಿತು ಹಾಡು ಕಟ್ಟಿ ಹಾಡುತ್ತ ಬಂದ ನಮ್ಮ ಗೀಗೀ ಹಾಡುಗಾರ ೧೯೭೫ ವರೆಗೂ ತಮ್ಮ ಶಕ್ತಿ ಸಾಮರ್ಥ್ಯ ಕಸರತ್ತುಗಳನ್ನು ಮುಂದುವರಿಸಿ ಈ ಕಲೆಯ ಬೆಳವಣಿಗೆಗೆ ಶ್ರಮಿಸಿದರು. ಮುಂದೆ ಅಂತಹ ಸಮರ್ಥ ಜಾನಪದ ಕವಿಗಳು ಹಾಡುಗಾರರು ಇಲ್ಲದ್ದಕ್ಕೆ, ಸಮಾಜ ಹೊಸದಿಕ್ಕಿನತ್ತ ಮುಖ ಮಾಡಿ ಮುನ್ನಡೆದ ಪರಿಣಾಮದಿಂದಲೋ ಈ ಕಲೆ ಕ್ರಮೇಣ ಕರಗಿ ಹೋಯಿತು.ಈಗ ಅಲ್ಲೊಂದು ಇಲ್ಲೊಂದು ಗೀಗೀ ಮೇಳ ಇದ್ದರೆ ಹೆಸರಿಗೆ ಮಾತ್ರ, ಪ್ರಸಿದ್ಧ ಲಾವಣಿ ಹಾಡುಗಾರರು "ಗೀಗೀ ಮೇಳ" ಗಳು ಕಾಲಗರ್ಭದಲ್ಲಿ ಸಿಕ್ಕಿ ಕಣ್ಮರೆಯಾದವು.

■

# ಕ್ಷತ್ರಿ ಕಲ್ಲಪ್ಪನ ಜನನ - ಬಾಲ್ಯ

ಪಂಚನದಿಗಳ ಜಿಲ್ಲೆಯೆಂದು ಪ್ರಸಿದ್ಧವಾದ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಭೀಮಾನದಿ ದಂಡೆಗೆ ಹೊಂದಿಕೊಂಡ ಕಲಬುರ್ಗಿ ಜಿಲ್ಲೆಯ ಅಂದಿನ ಮೊಗಲಾಯಿ ಪ್ರಾಂತದ ಗಡಿ ಭಾಗದಲ್ಲಿ 'ಕಡಣಿ' ಎಂಬ ಒಂದು ಸುಸಂಸ್ಕೃತ ಗ್ರಾಮ. ವಿಜಾಪೂರಕ್ಕೂ ಬಹು ದೂರ. ಕೊನೆಯ ಹಳ್ಳಿ, ಕಲಬುರ್ಗಿ ಜಿಲ್ಲೆಗೂ ಅಷ್ಟೇ ಅಂತರದ ಮೇಲೆ ಇದ್ದ ಈ ಊರು ಒಕ್ಕಲುತನಕ್ಕೆ ಹೆಸರಾಗಿತ್ತು.

ಭೀಮಾ ನದಿಯ ಪರಿಸರದಲ್ಲಿದ್ದ ಇಲ್ಲಿಯ ಫಲವತ್ತಾದ ಭೂಮಿ, ದುಡಿದು ಉಣ್ಣುವವರಿಗೆ ಕಾಮಧೇನುವಾಗಿತ್ತು. ಇಲ್ಲಿಯ ಮೃದುವಾದ ಎರೆಯ ಮಣ್ಣಿನ ಕಸುವಾದ ಹೊಲಗಳು ತಮ್ಮ ಉಡಿಯಲ್ಲಿ ಉತ್ತಿ ಬೆಳೆಯುತ್ತಿರುವ ಮಣ್ಣಿನ ಮಕ್ಕಳ ಬೆವರಿಗೆ ಬೆಲೆ ತಂದು ಕೊಟ್ಟು ಸಂಪತ್ತಿನ ಆಗರವಾಗಿತ್ತು. ಇಂದಿಗೂ ಈ ಕಡಣಿಗ್ರಾಮ ಒಕ್ಕಲುತನಕ್ಕೂ ಹೆಸರಾಗಿದೆ. ಸಿರಿ-ಸಂಪತ್ತಿನ ಆಗರವಾಗಿದೆ. ಕಷ್ಟ ಸಹಿಷ್ಣುಗಳು ಬುದ್ಧಿ ಜೀವಿಗಳು, ವಿದ್ಯಾವಂತರು ಜಿಜ್ಞಾಸುಗಳು ಆಗಿರುವುದರಿಂದ ಕಡಣಿಗ್ರಾಮ ಸಣ್ಣ ಊರಾದಾರೂ ಕನ್ನಡಿಗರ ಕಣ್ಮಣಿಯಾಗಿ ಕಂಗೊಳಿಸುತ್ತಲಿದೆ. ಈ ಗ್ರಾಮದಲ್ಲಿ ಕ್ಷತ್ರಿಯ ಅಂದರೆ ಕಟಬರ ಮನೆತನದ ಗಂಗಣ್ಣಾ ಮತ್ತು ಲಕ್ಷ್ಮಿಬಾಯಿ ದಂಪತಿಗಳು. ಈ ದಂಪತಿಗಳು ಸಭ್ಯ ಗೃಹಸ್ಥರು. ತಮಗಿದ್ದ ಅಂಗೈ ಅಗಲ ಭೂಮಿಯಲ್ಲಿ ದುಡಿದು ಗ್ರಾಮದ ಜನರೊಡನೆ ಪ್ರೀತಿ ವಿಶ್ವಾಸದಿಂದ ಬಾಳಿ ಎಲ್ಲರಿಗೂ ಬೇಕಾಗಿದ್ದರು. ಇವರ ಪುಣ್ಯ ಗರ್ಭದಲ್ಲಿ ೧೯೧೦ರಲ್ಲಿ ಇಂದಿಗೆ ಒಂದು ನೂರು ವರ್ಷಗಳ ಹಿಂದೆ ಒಂದು ಗಂಡು ಮಗು ಜನಿಸಿತು. ಈ ತಂದೆ-ತಾಯಿಗಳು ಶಿಶುವಿಗೆ ಕಲ್ಲಪ್ಪ ಎಂದು ಹೆಸರಿಟ್ಟು ತಾವು ಈ ಮಗುವಿಗೆ 'ಕಲ್ಲಣ್ಣ' ಎಂದು ತುಂಬ ಅಕ್ಕರೆಯಿಂದ ಕರೆಯುತ್ತಿದ್ದರು.

ದುಂಡು ಮುಖ ವಿಶಾಲವಾದ ಹಣೆ, ತುಂಬಿದ ಗಲ್ಲ, ತಿದ್ದಿ ತೀಡಿದ ಗದ್ದ - ತುಟಿ ನೀಟಾದ ಮೂಗು ಸತ್ವವನ್ನು ತುಂಬಿಕೊಂಡು ಕಂಗೊಳಿಸುತ್ತಿದ್ದ ಕಣ್ಣುಗಳಿಂದ ಆಕರ್ಷಕವಾಗಿದ್ದ ಮಗು ಕಲ್ಲಣ್ಣನ ಮುದ್ದು ಮುಖ ನೋಡಿ ತಾಯಿ - ತಂದೆಗಳು ಅಕ್ಕರೆ ಪಡುತ್ತಿದ್ದರು.

"ಅಳುವ ಕಂದನ ತುಟಿಯು ಹವಳದ ಕುಡಿಹಾಂಗ
ಕಾಡಿ ಹುಬ್ಬು ಬೇವಿನೆಸಳಾಂಗ – ಕಣ್ಣೋಟ
ಶಿವನ ಕೈಯಲಗು ಹೊಳದಾಂಗ"

ಎಂದು ಮಗು ಕಲ್ಲಣ್ಣನನ್ನು ನೋಡಿ ಹಾಡಿಹರಸುತ್ತಿದ್ದರು. ತಾಯಿ–ತಂದೆಗಳು ಅಕ್ಕರೆ ಪಡುತ್ತಿದ್ದರು.

ಸಣ್ಣ ಹಳ್ಳಿ ಕಡಣಿ ಗ್ರಾಮದ ಸುತ್ತಲೂ ಗಿಡ, ಮರ ಬಳ್ಳಿಗಳಿಂದ ಚೆಲುವಾಗಿ ಕಾಣುತ್ತಿತ್ತು. ಅಂಥ ಒಂದು ಅರಳಿ ಮರದ ನೆರಳಲ್ಲಿ ಆಡುವ ಮಕ್ಕಳಲ್ಲಿ ಆಡುತ್ತಿದ್ದ ಕಲ್ಲಣ್ಣನನ್ನು

"ಅಳಗಲ್ಲಿ ಮಾಗಾಯಿ ಬೆರಳಲ್ಲಿ ಹೊನ್ನುಂಗ್ರ
ಅರಳಿ ಮರದ ನೆರಳಲ್ಲಿ – ಆಡುವ
ತರಳ ನೀನ್ಯಾರ ಮಗನಯ್ಯಾ".

ಎಂದು ಅರಳಿ ಮರದ ನೆರಳಲ್ಲಿ ಆಡುವ ಮಗು ಕಲ್ಲಣ್ಣನನ್ನು ಕಂಡು ಜನರು ಈ ಬಾಲಕನಿಗೆ ಈ ಮಗು ಯಾರ ಮಗು? ಎಂದು ಬೆರಗಾಗಿ ಬೆರಳು ಕಚ್ಚಿಕೊಳ್ಳುತ್ತಿದ್ದರು. ಅಷ್ಟು ಮುದ್ದಾದ ಮಗು ಕಲ್ಲಣ್ಣ.

ಬಾಲಕ ಕಲ್ಲಪ್ಪ ದಿನೇ ದಿನೇ ಬೆಳೆದು ಬಿದಿಗೆ ಚಂದ್ರನಂತೆ ಕಾಣ ತೊಡಗಿದ. ತಂದೆ ಗಂಗಣ್ಣ ಕ್ಷತ್ರಿ ತನ್ನ ಮಗ ಕಲ್ಲಪ್ಪನಿಗೆ ಊರಲ್ಲಿ ನಡೆಯುತ್ತಿದ್ದ ಗಾಂವಟಿ ಶಾಲೆಗೆ ಸೇರಿಸಿದ. ಎಲ್ಲ ಬಾಲಕರೊಡನೆ ಕಲ್ಲಪ್ಪ ಅಕ್ಷರಾಭ್ಯಾಸ ಮಾಡಿದ. ಆಗ ಬಾಲಕ ಕಲ್ಲಪ್ಪನಿಗೆ ಎಂಟು ವರ್ಷ. ಮೂರನೆಯ ತರಗತಿಯಲ್ಲಿ ಓದುತ್ತಿದ್ದ. ಕಲ್ಲಪ್ಪನಿಗೆ ಶಾಲೆ ಕಲಿಸುವ ಮಾಸ್ತರ 'ಹುಸೇನ ಪಟೇಲ', ಸಣ್ಣ ವಯಸ್ಸಿನಲ್ಲಿಯೇ ಕಲ್ಲಪ್ಪನ ಹೃದಯದಲ್ಲಿ ಕವನ ಕಟ್ಟುವ ಕಲೆ ಸೆಲೆ ಒಡೆಯಿತು. ಕಂಠದಲ್ಲಿ ಸಂಗೀತ ಶಾರದೆ ಕುಣಿಯ ತೊಡಗಿದಳು. ಊರಲ್ಲಿ ನಡೆಯುತ್ತಿದ್ದ ದೊಡ್ಡಾಟ, ಸಣ್ಣಾಟ ; ಗೀಗೀ ಮೇಳ ನಡೆದಲ್ಲಿ ಮುಂದೆ ಕುಳಿತು ಹಾಡು ಕೇಳುತ್ತಿದ್ದ. ಖಾಸಗಿ ಶಾಲೆಯಲ್ಲಿ ಓದುತ್ತಿದ್ದ ಬಾಲಕ ಕಲ್ಲಪ್ಪ ಮೂರನೆಯ ತರಗತಿಯವರೆಗೆ ಓದಿ ಮುಂದೆ ಕಲಿಯುವುದನ್ನು ನಿಲ್ಲಿಸಿ ತಂದೆಯ ಕೈ ಬಾಯಲ್ಲಿ ಕೆಲಸ ಮಾಡತೊಡಗಿದ.

ಕಡಣಿಯ ಕಲ್ಲಪ್ಪ ಕಿಶೋರಾವಸ್ಥೆಗೆ ಬರುತ್ತಿದ್ದಂತೆ ಅವನ ಒಲವು–ನಿಲುವು "ಗೀಗೀ" ಹಾಡಿನ ಕಡೆಗೆ ಹರಿಯುತ್ತಿತ್ತು. ಅವನ ಮನಸ್ಸು ಹೊಸ ಹೊಸ ವಿಷಯ ತಿಳಿದುಕೊಳ್ಳಲು ಹವಣಿಸುತ್ತಿತ್ತು. ಅಲ್ಲಲ್ಲಿ ನಡೆಯುವ ಪುರಾಣ, ಪುಣ್ಯಕಥೆ ಕೇಳಲು ಧಾವಿಸಿ ಹೋಗುತ್ತಿದ್ದ. ಆಟ, ನಾಟಕ ನೋಡಿ ಕಥಾ ಸಾರಾಂಶ

ತಿಳಿದುಕೊಂಡು ತನ್ನಷ್ಟಕ್ಕೆ ತಾನೇ ಗುಣು ಗುಣು ಗುಟ್ಟುತ್ತಿದ್ದ. ಹಾಡು ಕಟ್ಟಿ ದನಿತೆಗೆದು ಹಾಡಲು ತವಕಿಸುತ್ತಿದ್ದ. ರಾತ್ರಿ ಅಲ್ಲಲ್ಲಿ ನಡೆಯುವ ಗೀಗೀ ಮೇಳುಗಳ ಹಾಡು ಕೇಳಲು ತಪ್ಪದೇ ಹೋಗಿ ಹಾಡುಗಾರರನ್ನು ಪರಿಚಯ ಮಾಡಿಕೊಳ್ಳುತ್ತಿದ್ದ. ಅವನ ಈ ಹಾಡಿನ ಗುಂಗಿಗೆ ಕಡಣಿ ಗ್ರಾಮದ ರುಕ್ಮಣ್ಣಪ್ಪ ನಾವಿ ಇನ್ನಷ್ಟು ನೀರೆರೆದು ಹುರಿದುಂಬಿಸುತ್ತಿದ್ದ. 'ಗೀಗೀ ಮೇಳ' ನಡೆದಲ್ಲಿ ಇವರಿಬ್ಬರೂ ಕೂಡಿ ಹೋಗಿ ಹಾಡಿನ ಗತ್ತು ಗಮ್ಮತ್ತು ತಿಳಿದುಕೊಂಡು ಹಾಡಿನ ಪಲ್ಲವಿ ಏರು-ಇಳುವು ಚೌಕುಗಳನ್ನು ಕಂಡು ಹಿಡಿದು ಪ್ರಾಸ, ತಾಳ, ಲಯಗಳನ್ನು ಗುರುತಿಸಿ ಡಪ್ಪು ನುಡಿಸಲು ಕಲಿತುಕೊಂಡ.

ಅಂದಿನ ಸಾಮಾಜಿಕ ಜೀವನದ ಏರು-ಪೇರುಗಳನ್ನು ಸಮಾಜದಲ್ಲಿ ನಡೆಯುವ ಅನ್ಯಾಯ-ಅತ್ಯಾಚಾರಗಳನ್ನು ನೋಡಿ ಕನಲಿ ಕಿಡಿ-ಕಿಡಿಯಾಗುತ್ತಿದ. ದುಡ್ಡಿಲ್ಲದವರ ಧಿಮಾಕು ನೋಡಿ ವಿಡಂಬಿಸುತ್ತಿದ್ದ. ತಿಲ್ಲಾಕ ಅನ್ನ ಇರದಿದ್ದರೂ ತಲೆ ಮೇಲೆ ಜುಟ್ಟಾ ಬಿಟ್ಟು ಜೈನಿ ಮಾಡುವ ಹುಡುಗರಿಗೆ ಹೊಲ, ನೆಲ, ಜಲವಿದ್ದರೂ ಆ ಕಡೆಗೆ ಲಕ್ಷ ಕೊಡದೆ ಚಹಾದ ಅಂಗಡಿಯಲ್ಲಿ ಕುಳಿತು ಚಹಾ ಕುಡಿದು ಹರಟೆ ಹೊಡೆದು ಬೀಡಿ ಸೇದಿ ದಿನಗಳೆಯುವ ರೈತರಿಗೆ, ಎದೆ ಸೀಳಿದರೂ ಒಂದು ಅಕ್ಷರ ಕಾಣದ, ಎಲ್ಲ ಬಲ್ಲವರಂತೆ ನಟಿಸುವ ದೀಡ ಪಂಡಿತರಿಗೆ, ಮನ್ಯಾಗ ಗಂಡ ಇದ್ದರೂ ಅವನ ಕೂಡ ಮನಸ್ಸು ಕೊಟ್ಟು ಬಾಳೆ ಮಾಡದೆ ತಿರುಗುವ ಹೆಂಗಸರಿಗೆ ಪಾಠ ಕಲಿಸಲು "ಗೀಗೀ ಮೇಳ"ವನ್ನು ಕಟ್ಟಿದ. ರುಕ್ಮಣ್ಣಪ್ಪ ನಾವಿ ಕಲ್ಲಪ್ಪನ ಬೆನ್ನ ಹಿಂದೆ ಇದ್ದು ಸಹಕಾರ ನೀಡಿದ.

ಕಡಣಿ ಕಲ್ಲಪ್ಪ ಡಪ್ಪಿನ ಮೇಲೆ ಕೈ ಹಾಕಿ ಹಾಡಿಗೆ ಅಣಿಯಾಗುತ್ತಿರುವಾಗ ಕನ್ನಡ ನಾಡಿನಲ್ಲಿ ಏಕೆ ಭಾರತದಲ್ಲಿಯೇ ಗೀಗೀ ಹಾಡಿನ ಸುಗ್ಗಿಯ ಕಾಲವೆಂದು ಹೇಳಬಹುದು. ವೀರ ರಸ ಪ್ರಧಾನವಾದ ಗೀಗೀ ಹಾಡು ಮಹಾತ್ಮಾ ಗಾಂಧೀಜಿಯವರು ಹೂಡಿದ ಭಾರತದ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ತಂದುಕೊಟ್ಟಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಚಳುವಳಿಯ ಎಳೆಗಳನ್ನು 'ಹಿಡಿದು ಕಟ್ಟಿದ ಹಾಡು ಯುವ ಜನರ ಎದೆಯಲ್ಲಿ ಸ್ವಾಭಿಮಾನದ ಕಿಡಿಯನ್ನು ಹೊತ್ತಿಸಿತು. ಪ್ರಾರಂಭದಲ್ಲಿ ಕಡಣಿಯ ಕಲ್ಲಪ್ಪ ಗ್ರಾಮದೇವತೆ "ಭೋಗೇಶ್ವರ" ಅಂಕಿತ ಇಟ್ಟುಕೊಂಡು ಹಾಡುಗಳನ್ನು ರಚಿಸುತ್ತಲಿದ್ದ. ಬರುಬರುತ್ತ ತನ್ನ ಗೀಗೀ ಹಾಡಿಗೆ "ಕಣ್ಣಿ ಕಲ್ಲಪ್ಪ" ಎಂದು ಅಂಕಿತ ಇಟ್ಟು ಹಾಡು ಕಟ್ಟಿ ಕನ್ನಡ ನಾಡಿನಲ್ಲಿ "ಕಣ್ಣಿ ಕಲ್ಲಪ್ಪ" ಎಂದು ಹೆಸರಾದ.

ಕಣ್ಣಿ ಕಲ್ಲಪ್ಪನ ಕಡಣಿ ಗ್ರಾಮದಿಂದ ಸುಮಾರು ಆರೇಳು ಕಿ.ಮೀ. ಅಂತರದಲ್ಲಿ ಒಂದು ದೊಡ್ಡ ಊರು ವ್ಯಾಪಾರದ ಕೇಂದರ 'ಎಳಮೇಲಿ'. ಈ ಎಳಮೇಲಿಗೆ 'ಆಲಮೇಲ' ಎಂದೂ ಕರೆಯುತ್ತಾರೆ. ಆಲಮೇಲ ಗ್ರಾಮದಲ್ಲಿ ಅತ್ಯಂತ ಪ್ರಸಿದ್ಧ ಗೀಗೀ ಹಾಡುಗಾರ ಭೀಮು, ಬಸವಯ್ಯನವರು. ಇವರು ಹರದೇಶಿ ಪಂಗಡಕ್ಕೆ ಸೇರಿದ ಹಾಡುಗಾರರು. ಕಡಣಿಯ ಕಲ್ಲಪ್ಪ ಈ ಭೀಮ–ಬಸವಯ್ಯನವರ ಶಿಷ್ಯ ಪರಂಪರೆಗೆ ಬಂದು ಸೇರಿದವನು. ಭೀಮ ಬಸವಯ್ಯನವರ ಪರಮ ಶಿಷ್ಯ. ಕಡಣಿಯ ಕಲ್ಲಪ್ಪ ಅವರ ದಟ್ಟ ಪ್ರಭಾವಕ್ಕೆ ಒಳಗಾಗಿ ಹರದೇಶಿ ಹಾಡುಗಾರನೆಂದು ಬೆಳಕಿಗೆ ಬಂದ. ಆ ಕಾಲದಲ್ಲಿ ಕಡಣಿಯ ಕಲ್ಲಪ್ಪನ ಕೈ ಹಿಡಿಯುವವರು ಯಾರು ಇದ್ದಿಲ್ಲವೆಂದು ಹೇಳಬಹುದು.

■

# ಲಾವಣಿ ಹಾಡಿಗೆ ಹೆಸರಾದ ವಿಜಾಪೂರ ಜಿಲ್ಲೆಯ ಪರಂಪರೆ

ಕನ್ನಡ ನಾಡಿನಲ್ಲಿ ಗೀಗೀ ಅಥವಾ ಲಾವಣೀ ಹಾಡಿನ ಪ್ರಾರಂಭದ ಕಾಲದಲ್ಲಿ ವಿಜಾಪೂರ ಜಿಲ್ಲಾ ಜಮಖಂಡಿ ತಾಲೂಕು ತೇರದಾಳ ಗ್ರಾಮದ ನ್ಯಾಮಣ್ಣ, ಗೋಪಾಳ ದುರದುಂಡಿ, ತೇರದಾಳ ತುಕಾರಾಮ, ಜನವಾಡದ ನಾನಾಸಾಹೇಬ, ಬೈಲು ಹೊಂಗಲದ ಅಪ್ಪು, ಮುದ್ದೇಬಿಹಾಳ ತಾಲೂಕಿನ ಒಡ್ಡೊಡಗಿ ಗ್ರಾಮದ ಇಬ್ರಾಹಿಮಶಾ ಇವರೆಲ್ಲರೂ ಮೊದಲನೆಯ ಹಂತದಲ್ಲಿ ಕಾಣಿಸಿಕೊಂಡರೆ, ಎರಡನೆಯ ಘಟ್ಟದಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬಂದ ದೇಶ ಭಕ್ತರಿಂದ ನಡೆದ ದೇಶದ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಸಿಂದಗಿ ತಾಲೂಕಿನ ಬೀಬೀ ಇಂಗಳಗಿ ಮಲ್ಹಾಹಸನ, ಕಲಬುರ್ಗಿಯ ಜಿಲ್ಲೆಯ ಸುರಪುರ ತಾಲೂಕಿನ ಪೇಠಅಮ್ಮಾಪುರ ಹಣುಮಂತಪ್ಪ, ಆಲ್ದಾಳ ಯಂಕಪ್ಪ, ಸಿಂದಗಿ ತಾಲೂಕಿನ ಆಲಗೂರು ಖಾಸೀಮ ಸಾಬ, ಕೊರಳ್ಳಿ ಚಂದ್ರಾಮ, ಚಾಂದಕೋಟಿಯ ನಬಿಸಾಬ, ಹಗರಿ ಬಡೇಸಾಬ, ಬೀಬೀ ಇಂಗಳಗಿ, ಲಾಳೇಸಾ ಇಮಾಮಸಾ, ಕಲಬುರ್ಗಿಯ ಜಿಲ್ಲೆಯ ಅಫಜಲಪೂರ ತಾಲೂಕಿನ ಶಿರವಾಳ ಗ್ರಾಮದ ನನ್ನಾಸಾಬ ಮುಂತಾದವರು ಗೀಗೀ ಮೇಳ ಕಟ್ಟಿ ಹಾಡುತ್ತಿದ್ದರು. ಇವರು ಭಾರತದಲ್ಲಿ ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಜನ ಜೀವನದ ಸ್ಥಿತಿ-ಗತಿಗಳನ್ನು ಕುರಿತು ಹಾಡಿ ಜನ ಜಾಗೃತಿಗೊಳಿಸುತ್ತಿದ್ದರು. ಆ ಕಾಲದಲ್ಲಿ ಈ ಎಲ್ಲ ಗೀಗೀ ಹಾಡುಗಾರರು ಕೇವಲ ತಾವು ಬದುಕಲೆಂದು ಮೇಳ ಕಟ್ಟಿ ಹಾಡಲಿಲ್ಲ. ಜನ ಬದುಕಲೆಂದು "ಗೀಗೀ ಮೇಳ" ಕಟ್ಟಿ, ಜಾತ್ರೆ ಉರುಸು, ಖಾಂಡ ಉತ್ಸವಗಳಂತಹ ಸಂದರ್ಭದಲ್ಲಿ ಹಾಡಿ ಜನ ಜಾಗೃತಿಗೊಳಿಸುತ್ತಿದ್ದರು.

ಇನ್ನು ಮೂರನೆಯ ತಲೆಮಾರಿನಲ್ಲಿ ಅಂದರೆ ಇಪ್ಪತ್ತನೆ ಶತಮಾನದಲ್ಲಿ ಕಾಣಿಸಿಕೊಂಡವರು ಸಿಂದಗಿ ತಾಲೂಕಿನ ಚಾಂದಕೋಟೆ ಅಣ್ಣಪ್ಪಗೌಡ. ಬನಹಟ್ಟಿ ಮಲ್ಲಣ್ಣ ಇವರ ಹೆಸರು ಗಟ್ಟಿಯಾಗಿ ಕೇಳಿ ಬರುತ್ತವೆ.

ಇದೇ ಸಮಯದಲ್ಲಿ ಗೀಗೀ ಹಾಡಿನಲ್ಲಿ ಹೆಸರು ಮಾಡಿದ ಸಾರವಾಡದ ಹಸನಸಾಬ ಸನದಿ, ಕೊರಳ್ಳಿಯ ಮೌಲಾಲಿ, ಹಲಸಂಗಿಯ ಖಾಜಾಬಾಯಿ, ಹದರಿಯ ಬಡೇಸಾಬ, ಕಲಬುರ್ಗಿ ಜಿಲ್ಲೆಯ ಸಾವಳಗಿ ಮಹಮ್ಮದ ಸಾಬ,

ಮಹಾಗಾಂವದ ಮೋದಿನ ಸಾಬ ಮುಂತಾದವರು ಈ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಆಗ ಬ್ರಿಟಿಷರು ಭಾರತ ದೇಶವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು "ಭಾರತದಲ್ಲಿ ನಮ್ಮದು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ರಾಜ್ಯಭಾರ ಮಾಡುತ್ತಿದ್ದರು" ಆಗ ನಮ್ಮ ದೇಶಕ್ಕೆ ಬ್ರಿಟಿಷ ಭಾರತವೆಂದು ಕರೆಯುತ್ತಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯರು ದೈನ್ಯತೆಯಿಂದ ನರಳುತ್ತಿದ್ದರು. ಭಾರತೀಯರಲ್ಲಿದ್ದ ರಾಷ್ಟ್ರೀಯ ಮನೋಭಾವನೆ ಕಮರಿ ಹೋಗಿತ್ತು, ಸ್ವಾಭಿಮಾನ ಉಡುಗಿ ಹೋಗಿತ್ತು. ಆತ್ಮಾಭಿಮಾನ ಶೂನ್ಯವಾಗಿತ್ತು. ಆ ಕಾಲದಲ್ಲಿ ಉಳ್ಳವರು, ಸ್ಥಿತಿವಂತರು, ಸ್ವಾರ್ಥ ಸಾಧನೆಯಲ್ಲಿ ತೊಡಗಿ ಭೋಗವಿಲಾಸಗಳಿಗೆ ಮಾರು ಹೋಗಿದ್ದರು. ಬ್ರಿಟಿಷರು ನೀಡುತ್ತಿದ್ದ "ರಾವ ಸಾಹೇಬ" "ರಾವ ಬಹಾದ್ದೂರ" ಪ್ರಶಸ್ತಿಗಳ ಗೋಣಿ ಚೀಲದಲ್ಲಿ ತಮ್ಮನ್ನು ತಾವೇ ಮುಚ್ಚಿಕೊಂಡಿದ್ದರು. ದೀನ-ದಲಿತರು, ಬಡ-ಬಗ್ಗರು, ಕೈಲಾಗದವರು, ಅಂಗವಿಕಲರು ದಾಸ್ಯದ ಬಲೆಯಲ್ಲಿ ಸಿಲುಕಿ ವಿಲಿ ವಿಲಿ ಒದ್ದಾಡುತ್ತಿದ್ದರು.

ಬ್ರಿಟಿಷ ಭಾರತದಲ್ಲಿ ಕನ್ನಡ ನಾಡು ಹರಿದು ಹಂಚಿ ಹೋಗಿತ್ತು. ಯಾರನ್ನು ಗುರುತಿಸುವಂತಿಲ್ಲ. ನಾನು ನಮ್ಮವರು, ತಾನು ತನ್ನವರೂ ಎಂಬ ಭಾವನೆ ಮರೆಯಾಗಿತ್ತು. ಪ್ರೀತಿ ವಿಶ್ವಾಸ ಕಳೆದು ಹೋಗಿತ್ತು. ಮೋಸ-ವಂಚನೆ, ಚಾಡಿ-ಚುಗಲಿ, ಲಂಚಗುಳಿತನ, ಕಾಲು ಹಿಡಿದು ಜಗ್ಗುವ ದುಷ್ಟ ಪ್ರವೃತ್ತಿ, ಮುಂದೆ ಹೊಗಳಿ ಹಿಂದೆ ಆಡಿಕೊಳ್ಳುವ ಹಂದಿಯಂತಹ ಜನರು ಸಂದಿ ಗೊಂದಿಗಳಲ್ಲಿ ಸಿಗುತ್ತಿದ್ದರು. ಬಡವ ಬಲ್ಲಿದರ ನಡುವೆ ದೊಡ್ಡ ಕಂದಕವೇ ಬಿದ್ದಿತ್ತು. ಅಲ್ಲಲ್ಲಿ ಜಾತಿ ಜಾತಿಗಳು ತಿಕ್ಕಿ ಬೆಂಕಿ ಹೊತ್ತಿ ಉರಿಯುತ್ತ ಸಮಾಜವನ್ನು ಸುಟ್ಟು ಕರಕು ಮಾಡುತ್ತ, ಜಾತೀಯತೆಯ ದಟ್ಟ ಹೊಗೆಯೇ ಹಬ್ಬಿತ್ತು. ದೇಶದ ತುಂಬ ಅಸಮಾನತೆ ತಾಂಡವ ನೃತ್ಯ ನಡೆಸಿತ್ತು. ಅಜ್ಞಾನ, ಅನಕ್ಷರತೆ, ಅನಾರೋಗ್ಯದಿಂದ ಜನ ಬಳಲುತ್ತಿದ್ದರು. ಉಳ್ಳವರ ಜಿಪುಣತನ, ಬುದ್ಧಿಜೀವಿಗಳ ನಿಪುಣತನ, ಮಧ್ಯಮ ವರ್ಗದ ಶ್ಯಾಣೇತನದಿಂದ ಸಮಾಜ ಜಿಡ್ಡುಗಟ್ಟಿದ ಹೊಂಡದಂತಾಗಿತ್ತು. ಇಂತಹ ದುರ್ದೆಶೆಯಲ್ಲಿ ನಾವು ಭಾರತೀಯರು, ನಾವು ಕನ್ನಡಿಗರು ನಮ್ಮಲ್ಲಿ ದೇಶಾಭಿಮಾನ, ಭಾಷಾಭಿಮಾನ ಇರಬೇಕು. ನಾವು ಮನುಷ್ಯರು, ಮನುಷ್ಯರಂತೆ ಬಾಳಬೇಕು ಎಂಬ ಆತ್ಮಾಭಿಮಾನ ಮೂಡಿಸಲು ಅಂದು 'ಲಾವಣಿ' ಹಾಡು ಹುಟ್ಟಿ ಬಂದಿತು. ಒಬ್ಬ ಕಲಾವಿದ ಒಂದು ಚಿಟಿಕೆ ಬಾರಿಸಿ, ಇನ್ನೊಂದು ಕೈಯಲ್ಲಿದ್ದ "ಲಟಿಗಿ" ಹೊಡೆದು ಕಾಲಲ್ಲಿ ಗೆಜ್ಜೆ ಕಟ್ಟಿ, ಟೊಂಕಕ್ಕೆ ಸೆಲ್ಲೆಸುತ್ತಿ ದನಿ ಎತ್ತಿ ಹಾಡಿ ಜನ, ಮನ ಸೂರೆಗೊಳ್ಳುತ್ತಿದ್ದ. ಬರುಬರುತ್ತ ಈ ಲಾವಣಿ ಹಾಡನ್ನೇ 'ಗೀಗೀ ಮೇಳ' ಕಟ್ಟಿ

ಡಪ್ಪು ನುಡಿಸಿ ಹಾತೊಡಗಿದರು. ಹಿಮ್ಮೇಳಿನಲ್ಲಿದ್ದ ಒಬ್ಬರು ತುಂತುನಿ ನುಡಿಸಿ, ಇನ್ನೊಬ್ಬ ತಾಳ ಕಟೆದು ಮೇಳಕ್ಕೆ ಮೆರಗು ತಂದು ಕೊಡುತ್ತಿದ್ದರು. ಇದೇ 'ಗೀಗೀ ಮೇಳ'ವೆಂದು ಕನ್ನಡ ನಾಡಿನಲ್ಲಿ ಪ್ರಸಿದ್ಧವಾಯಿತು.

ಈ ಗೀಗೀ ಮೇಳದಲ್ಲಿ ಸವಾಲು-ಜವಾಬು ನಡೆಯುತ್ತಿತ್ತು. ಒಂದು ಮೇಳ ಹೆಣ್ಣು ಹೆಚ್ಚೆಂದು ವಾದಿಸಿದರೆ ಇನ್ನೊಂದು ಗಂಡು ಹೆಚ್ಚೆಂದು ಪ್ರತಿಪಾದಿಸುತ್ತಿತ್ತು. ಹೆಣ್ಣಿನ ಪರ ಹಾಡುವ ಮೇಳಕ್ಕೆ 'ನಾಗೇಶಿ' ಎಂದು, ಗಂಡು ಹೆಚ್ಚೆಂದು ವಾದಿಸುವುದಕ್ಕೆ 'ಹರದೇಶಿ' ಎಂದು ಕರೆಯಲಾಯಿತು. ಕಡಣಿ ಕಲ್ಲಪ್ಪ 'ಹರದೇಶಿ' ಹಾಡುಗಾರ. ಅವನು ರಚಿಸಿ ಹಾಡಿದ ಒಂದು 'ಸಖಿ' ಗೀತೆ ಹೀಗಿದೆ.

"ಬಾ ಬಾರೋ ಗಣಪತಿ, ಮಾಡುವೆ ನಿನ್ನ ಸ್ತುತಿ
ಕೊಡು ಎನಗೆ ಮತಿ, ಬೇಡುವೆ ಬಾಯಿ ತೆರೆದು
ಬಡವನ ಅರ್ಜಿ ಬಂತು ಬರೆದು ಹಾ ಜೀ ಜೀSSS"

ವರುಷಕೊಮ್ಮೆ ಗಣೇಶ ಚೌತಿ
ಆ ದಿವಸ ನೀ ಬರತಿ । ಬೆಳಗುವೆನು ಆರತಿ
ಬಾರೋ ಗೌರಿ ಕಂದ
ಹಣಿ ಮ್ಯಾಲ ಹಚ್ಚಿದ್ಯೊ ಶ್ರೀ ಗಂಧ
ಹಾ ಜೀ ಜೀ SS.

ಕಾಸ ಕಡಣಿ ನಿನ್ನ ವಸ್ತಿ
ಕಲ್ಲಪ್ಪ ಇರುವಂತ ಬಸ್ತಿ
ಸದಾ ತಿರಗಾಂವ ಗಸ್ತಿ
ತಾನು ಪ್ರೀತಿ ದಿಂದ
ಸಾಕ್ಷಾತ್‌ನೋ ಪಾರ್ವತಿ ಕಂದ ಹಾ ಜೀ ಜೀ".

ಎಂದು ಪರಮೇಶ್ವರ ಪುತ್ರ ಗಣಪತಿ ಸ್ತೋತ್ರ ಮಾಡಿ ಹಾಡಲು ಪ್ರಾರಂಭ ಮಾಡಿದ.

■

# ಮೊದಲನೆಯ ತುತ್ತಿಗೆ ಹರಳು ಬಂದಿತು

ಕಡಣಿಯ ಕಲ್ಲಪ್ಪ ತಾನು ಕೇಳಿ ಮೆಚ್ಚಿಕೊಂಡ ಕೆಲವು ಹಾಡುಗಳನ್ನು ರೂಢಿ ಮಾಡಿಕೊಂಡ. ಅಷ್ಟರಲ್ಲಿ ಸ್ವತ: ತಾನೇ ಕೆಲವು ಹಾಡುಗಳನ್ನು ರಚಿಸಿ ಹಾಡಲೂ ಸಿದ್ಧತೆ ಮಾಡಿಕೊಂಡಿದ್ದ. ತಂತುನಿ ಬಾರಿಸಲು ತನ್ನ ಸಂಗಡವೇ ಇದ್ದ ಶಾಬುದ್ದೀನ ಮೋಟಗಿ, ತಾಳು ಕಟೆದು ಗೀಗೀ ಮೇಳಕ್ಕೆ ಸ್ಫೂರ್ತಿ ನೀಡುತ್ತಿದ್ದ ಕಲ್ಲಪ್ಪ ಬಡಗೇರಿ ಈ ಮೂವರು ಒಮ್ಮನಸ್ಸಿನಿಂದ ಈ 'ಗೀಗೀ ಮೇಳ' ಕಟ್ಟಿದರು. ರುಕ್ಮಣ್ಣಪ್ಪ ನಾವಿ ಮಾರ್ಗ ದರ್ಶನ ಈ ಮೇಳಕ್ಕೆ ಸದಾ ಇರುತ್ತಿತ್ತು.

ಹೀಗೆ ಸುಸುಜ್ಜಿತವಾಗಿ ಸಿದ್ಧತೆಗೊಂಡ ಈ ಗೀಗೀಮೇಳ ಎಲ್ಲಿಗಾದರೂ ಹೋಗಿ ಹಾಡಕ್ಕಿ ಮಾಡಬೇಕೆಂದು ಹವಣಿಸತೊಡಗಿತು. ಹೊಸ ಹುರುಪು – ಹುಮ್ಮಸ್ಸಿನಿಂದ ಕೂಡಿದ ಈ ಮೇಳಕ್ಕೆ ರುಕ್ಮಣ್ಣಪ್ಪ ನಾವಿ ವೇದಿಕೆ ಒದಗಿಸಿ ಕೊಡಲು ಪ್ರಯತ್ನಿಸುತ್ತಿದ್ದ.

ಅಷ್ಟರಲ್ಲಿ ಅಕ್ಕಲ ಕೋಟ ತಾಲೂಕಿನ ಬಾಸಲಗಾಂವ ಗ್ರಾಮದಲ್ಲಿ ಬಸವೇಶ್ವರ ಜಾತ್ರೆ ನಡೆದಿತ್ತು ಕಡಣಿಯ ಗ್ರಾಮದ ಸಾಯಬಣ್ಣಾ ತಳವಾರ ಅವರ ಅಳಿಯ ಗುರುಪಾದಪ್ಪ ಧೂಳಪ್ಪ ಕೊಟಗೇನವರ ಬಾಸಲಗಾಂವ ಬಸವೇಶ್ವರ ಜಾತ್ರಾ ಕಮಿಟಿಯಲ್ಲಿದ್ದ ಒಬ್ಬ ಪ್ರತಿಷ್ಠಿತ ವ್ಯಕ್ತಿ ಹೇಗೂ ನಮ್ಮೂರ ವ್ಯಕ್ತಿಯ ಅಳಿಯನೇ ಜಾತ್ರಾ ಕಮಿಟಿಯ ಮುಖಂಡರಲ್ಲಿ ಒಬ್ಬ, ನಮಗೆ ಜಾತ್ರೆಯಲ್ಲಿ ಹಾಡುವ ಅವಕಾಶ ಸಿಕ್ಕೇ ಸಿಗುತ್ತದೆ ಎಂದು ಬಲವಾಗಿ ಭಾವಿಸಿಕೊಂಡು ಬಾಸಲಗಾಂವ ಬಸವೇಶ್ವರ ಜಾತ್ರೆಗೆ ಹೊರಟರು. ಜೊತೆಯಲ್ಲಿ ರುಕ್ಮಣ್ಣಪ್ಪ ನಾವಿ ಅವರೂ ಇದ್ದರು.

ಜಾತ್ರೆ ತುಂಬ ವಿಜೃಂಬಣೆಯಿಂದ ಜರುಗಿತ್ತು. ಸುತ್ತ ಮುತ್ತಲಿನ ಹಳ್ಳಿಯ ಜನರು ಆಗಮಿಸಿದ್ದರು. ವೀಳ್ಯೆ ಸ್ವೀಕರಿಸಿ ಹಾಡಲೆಂದು ನಾಗೇಶಿ – ಹರದೇಶಿ ತಂಡದವರು ಆಗಮಿಸಿದ್ದರು. ಇನ್ನೇನು ಹಾಡಕ್ಕೆ ಚಾಲು ಆಗುತ್ತಿದ್ದ ಸಮಯದಲ್ಲಿ ಕಡಣಿ ಕಲ್ಲಪ್ಪನ ಗೀಗೀ ಮೇಳದ ಹಿರಿಯ ರುಕ್ಮಣ್ಣಪ್ಪ ಕಡಣಿದಯಿಂದ ಕಲ್ಲಪ್ಪನ ಗೀಗೀ ಮೇಳ ಬಂದಿದೆ. ನಡುವೆ ಒಂದು ಸಂದು ನೋಡಿ ಒಂದೇ ಒಂದು ಪದ 'ಹಾಡಲು ಅವಕಾಶ ಕಲ್ಪಿಸಿ ಕೊಡಬೇಕೆಂದು ತಮ್ಮ ಊರಿನ ಬೀಗ ಗುರುಪಾದಪ್ಪ ಕೊಟಗೇನವರಿಗೆ ಕೇಳಿದ.

"ನೀವು ನಮ್ಮ ಮಾವನ ಊರು ಕಡಣಿಯ ಗ್ರಾಮದವರು ನಿಜ. ಬಸವಣ್ಣಪ್ಪನ ಜಾತ್ರೆಗೆ ಬಂದಿದ್ದೀರಿ. ಊಟ ಮಾಡಿ ಜಾತ್ರೆ ನೋಡಿ ಹೋಗಿರಿ. ಕೇವಲ ರೊಟ್ಟಿಗಾಗಿ ಹಾಡುವ ಮೇಳಗಳಿಗೆ ಇಲ್ಲಿ ಅವಕಾಶ ಇಲ್ಲ." ಎಂದು ಸ್ಪಷ್ಟವಾಗಿ ಹೇಳಿದ. ಹೀಗೆ ತಮ್ಮನ್ನು ತಾತ್ಸಾರದಿಂದ ಕಂಡು ಹೀಯಾಳಿಸಿ ಮಾತನಾಡಿದ್ದಕ್ಕೆ "ಮೊದಲಿನ ತುತ್ತಿಗೆ ಹಳ್ಳ ಬಂದಿತು" ಎಂದು ಕಡಣಿಯ ಮೇಳದವರು ಮನದಲ್ಲಿ ನೊಂದು ಕೊಂಡರು. ಅಲ್ಲಿ ಒಂದು ಕ್ಷಣ ನಿಲ್ಲದೆ ಅಂದು ರಾತ್ರಿ ಅಕ್ಕಲಕೋಟಕ್ಕೆ ಬಂದರು. ಅಲ್ಲಿ ಲೋಕಪ್ಪನ ಖಾನಾವಳಿ ತುಂಬ ಪ್ರಸಿದ್ಧಿ ಪಡೆದಿತ್ತು. ಲೋಕಪ್ಪನ ಖಾನಾವಳಿಯಲ್ಲಿ ಊಟ ಮಾಡಿದರು. ಆಗ ಖಾನಾವಳಿಯಲ್ಲಿ ಕುಳಿತಿದ್ದ ಲೋಕಪ್ಪ "ನೀವು ಯಾರು? ಎಲ್ಲಿಂದ ಬಂದಿರಿ ಏಕೆ ಬಂದಿರಿ?" ಎಂದು ಕೇಳಿದ ಆಗ ರುಕ್ಮಣ್ಣಪ್ಪ ನಾವಿ ಅವರು "ಯಜಮಾನರೇ, ನಾವು ಸಿಂದಗಿ ತಾಲೂಕು ಕಡಣಿ ಗ್ರಾಮದವರು. ಇಲ್ಲಿ ಬಾಸಲಗಾಂವ ಬಸವಣ್ಣಪ್ಪನ ಜಾತ್ರೆಗೆ ಬಂದಿದ್ದೆವು ಇವರು ನಮ್ಮ ಗ್ರಾಮದ ಕಲ್ಲಪ್ಪ ಗೀಗೀ ಹಾಡುಗಾರ ಹೊಸದಾಗಿ 'ಗೀಗೀ ಮೇಳ' ಸಿದ್ಧವಾಗಿದೆ. ಜಾತ್ರೆಯಲ್ಲಿ ಹಾಡಕ್ಕಿ ಮಾಡಲು ಅವಕಾಶ ಸಿಗಬಹುದೆಂದು ಬಂದಿದ್ದೆವು. ಅಂತಹ ಅವಕಾಶ ನಮ್ಮ ಮೇಳದವರಿಗೆ ಸಿಗಲಿಲ್ಲ. ಅಲ್ಲಿ ಕಾಲ ಕಳೆಯುವುದಕ್ಕಿಂತ ಹೊರಟು ಇಲ್ಲಿಗೆ ಬಂದಿದ್ದೇವೆ" ಎಂದು ಹೇಳಿದ. ಆಗ ಲೋಕಪ್ಪನವರು ನಮ್ಮದೇ ಖಾನಾವಳಿ ಇದ್ದಂತೆ ಅಡತಿ ಅಂಗಡಿಯೂ ಇದೆ. ನಾಳೆ ರಾತ್ರಿ ಅಡತಿಯ ಅಂಗಳದಲ್ಲಿ ನಿಮ್ಮ ಹಾಡಕಿಗೆ ಏರ್ಪಾಡು ಮಾಡುತ್ತೇನೆ .ಇಂದು ಇಲ್ಲೇ ಇರಬೇಕು ಎಂದು ಹೇಳಿ ಕಡಣಿಯ ಕಲ್ಲಪ್ಪನಿಗೆ ಹಾಡಕ್ಕಿ ಹಾಡುವ ಏರ್ಪಾಡು ಮಾಡಿ ತನಗೆ ಬೇಕಾದ ಸ್ನೇಹಿತರಿಗೂ, ಹಿತೈಸಿಗಳಿಗೂ ಹೇಳಿ ಕಳಿಸಿದ. ಅಕ್ಕಲ ಕೋಟದ ಜನರೊಡನೆ ಸುತ್ತಲಿನ ಕೆಲವು ಹಳ್ಳಿಯ ಜನರೂ ಬಂದರು. ಹಾಗೇ ಬಂದವರಲ್ಲಿ ಬಾಸಲಗಾಂವ ಗ್ರಾಮದ ಗುರುಪಾದಪ್ಪ ಕೊಟಗೇನ ಅವರು ಒಬ್ಬರು.

ರಾತ್ರಿ ಊಟ ಆದ ಮೇಲೆ ಕಡಣಿಯ ಕಲ್ಲಪ್ಪನ ಹಾಡಕ್ಕಿ ಪ್ರಾರಂಭವಾದವು. ಜನ ಕಿಕ್ಕಿರಿದು ಸೇರಿದ್ದರು. ಕಡಣಿಯ ಕಲ್ಲಪ್ಪನ ಹಾಡು ಕೇಳಿ ಜನ ಮೂಕ ವಿಸ್ಮಯರಾದರು. ಹಾಡಕ್ಕಿ ಕೇಳಿದ ಜನರು ಒಂದಾಣೆ ಎರಡಾಣೆ ಬಹುಮಾನ ಕೊಟ್ಟರು. ಹಾಡು ಮುಗಿದ ನಂತರ ಆ ಎಲ್ಲ ಹಣ ಕೂಡಿಸಿ ಎಣಿಸಿ ನೋಡಿದರೆ ಐವತ್ತು ರೂಗಳಿಗೂ ಮಿಕ್ಕಿತ್ತು. ಇಂತಹ ದೊಡ್ಡ ಮೊತ್ತದ ಆಯೇರಿ ಕಡಣಿಯ ಕಲ್ಲಪ್ಪನ ಹಾಡುಗಾರಿಕೆಗೆ ಸಾಕ್ಷಿಯಾಗಿತ್ತು.

ಈ ವಿಷಯ ತಿಳಿದ ಬಾಸಲಗಾಂವದ ಈ ಮುಧಾರಿ ಗುರುಪಾದಪ್ಪ ಧೂಳಪ್ಪ ಕೊಟಗೇನವರ ಕಡಣಿಯ ಕಲ್ಲಪ್ಪನ ಹತ್ತಿರ ಬಂದು ನಿಮ್ಮ ಅಂತರಂಗದ ಸತ್ವ ತಿಳಿದುಕೊಳ್ಳದೆ "ರೊಟ್ಟಿಗೆ ಬಂದ ಮೇಳ" ಎಂದು ಮೂದಲಿಸಿ ಮಾತಾಡಿದ್ದು

ತಪ್ಪಾಯಿತು. ಕ್ಷಮಿಸಿರಿ. ನಾಳೆ ನಮ್ಮ ಬಸವಣ್ಣಪ್ಪನ ಹರಿ ಜಾತ್ರೆ ಇದೆ ನಾಳೆ ನಮ್ಮ ಊರಿಗೆ ಬರಬೇಕೆಂದು ಕೇಳಿಕೊಂಡ.

ನಮ್ಮ ಊರ ಸಾಯಬಣ್ಣಾ ತಳವಾರನ ಅಳಿಯನೇ ಜಾತ್ರಾ ಕಮೀಟಿಯ ಮುಖಂಡರಲ್ಲಿ ಒಬ್ಬನೆಂದು ಸುದ್ದಿ ಕೇಳಿ ನಿಮ್ಮ ಜಾತ್ರೆಗೆ ಬಂದಿದ್ದೆವು. ನಮ್ಮ ಊರ ಅಭಿಮಾನವನ್ನೂ ನೀವು ಹಿಡಿಯಲಿಲ್ಲ. ನಮ್ಮನ್ನು ಲೆಕ್ಕಕ್ಕೆ ತೆಗೆದು ಕೊಳ್ಳಲ್ಲಿಲ್ಲ "ರೊಟ್ಟಿ ಮೇಳ" ಎಂದು ಹಿಯಾಳಿಸಿ ಮಾತನಾಡಿದ್ದು ನಮಗೆ ತುಂಬಾ ಪೆಟ್ಟಾಗಿದೆ. ಮುಂದಿನ ವರ್ಷ ಬದುಕಿದ್ದರೆ ವೀಳ್ಯೆ ಕೊಟ್ಟರೆ ಬರುತ್ತೇನೆ. ಈಗ ಬರೂದಿಲ್ಲ ಎಂದು ಕಲ್ಲಪ್ಪನೂ ಖಂಡ ತುಂಡವಾಗಿಯೇ ಹೇಳಿದ.

ಆಕಸ್ಮಿಕವಾಗಿ ಆಗಮಿಸಿದ ನಮಗೆ ಹಾಡಕಿ ಮಾಡಲು ಅವಕಾಶ ಕಲ್ಪಿಸಿ ಕೊಟ್ಟ ಲೋಕಪ್ಪ ನವರಿಗೆ ಅನಂತ ಕೃತಜ್ಞತೆಗಳನ್ನೂ ಹೇಳಿ 'ಹೋಟಗಿ' ಗ್ರಾಮಕ್ಕೆ ಬಂದರು.

ಹೊಟಗಿ ಗ್ರಾಮದಲ್ಲಿ ಬಾಲತಪಸ್ವಿ ಚೆನ್ನವೀರಸ್ವಾಮಿಗಳ ಜಾತ್ರಾ ಮಹೋತ್ಸವ ತುಂಬ ವಿಜೃಂಬನೆಯಿಂದ ಜರುಗಿತ್ತು ಹೊಟಗಿ ಮಠಕ್ಕೆ ಬರುವ ಮೂರು ದಾರಿಗಳಿಂದಲೂ ಜನರು ಇರುವೆಯಂತೆ ಸಾಲುಗಟ್ಟಿ ಹರಿದು ಬರುತ್ತಿದ್ದರು ಜಾತ್ರೆಗೆ ಬಂದ ಜನರ ಗದ್ದಲ, ಗಲಾಟೆ, ಗಡಿಬಿಡಿ ಹೇಳ ತೀರದಷ್ಟು,

ಈ ಜಾತ್ರೆಗೆ ಹಾಡಕ್ಕಿ ಮಾಡಲು ಬಂದ ಗೀಗೀ ಮೇಳಗಳು 'ಹಾಡಕಿ' ಮಾಡಲು ಹಾತೊರೆಯುತ್ತಿದ್ದವು. ಒಂದೆರೆಡು ಮೇಳಗಳು ಹಾಡಾಕಿ ಮಾಡಿದರು ಜನರ ಗದ್ದಲ ಕಡಿಮೆಯಾಗಲಿಲ್ಲ. ಶಾಂತಿ ಶಾಂತಿ ಎಂದು ಜನರು ಕೂಗಾಡ ತೊಡಗಿದರು. ಹಾಡ ಕೇಳಲು ಸ್ವಾಮಿಗಳು ಜನರ ಮಧ್ಯದಲ್ಲಿಯೇ ಕುಳಿತಿದ್ದರು. ಶ್ರೀಗಳು ತಾವೆ ಎದ್ದು ನಿಂತು " ಯಾರು ತಮ್ಮ ಹಾಡಕ್ಕಿ ಮೂಲಕ ಜನರನ್ನು ಶಾಂತಗೊಳಿಸುತ್ತಾರೋ ಅವರಿಗೆ ಐವತ್ತು ರೂ. ಭಕ್ಷೀಸು ನೀಡಲಾಗುವದು ಎಂದು ಸಾರಿದರು.

ಗೀಗೀ ಮೇಳದ ಗುಂಪಿನಲ್ಲಿ ಕುಳಿತಿದ್ದ ಕಡಣಿಯ ಕಲ್ಲಪ್ಪ ದಿಗ್ಗನೆ ಎದ್ದು ಹಾಡಲು ಮುಂದೆ ಬಂದ. ತಲೆಯ ಮೇಲೆ ಜರದ ರುಮಾಲು, ಮೈಯಲ್ಲಿ ಕರೀ ಬಣ್ಣದ ಕೋಟು, ಬಿಳಿಯ ಧೋತರ, ಬೆರಳಿಗುಂಗುರ ಎತ್ತರದ ಆಳು ಮೀಸೆಯ ಮೇಲೆ ಕೈ ಎಳೆದು ಡಪ್ಪ ಬಾರಿಸಿ ಜನ ಸಾಗರದತ್ತ ದೃಷ್ಟಿ ಚಾಚಿದ. ತುಂತುನಿ ಬಾರಿಸುತ್ತದ್ದ ಶಾಬುದ್ದೀನ ಆಲಮೇಲ ಮೆಲ್ಲಗೆ ಹೆಜ್ಜೆ ಹಾಕಿ ಜನಮನವನ್ನ ಸೆಳೆದ. ಬಡಗೇರಿ ಕಲ್ಲಪ್ಪ ದನಿ ಎತ್ತಿ ಸೂರು ಹಿಡಿದು ಹಾಡಲು ಪ್ರಾರಂಭಿಸುತ್ತಲೇ ಜನ ಹೆಪ್ಪು ಹಾಕಿದಂತೆ ಗಪ್ಪು ಕುಳಿತು ಹಾಡು ಕೇಳಿದರು. ಜನರ ಗದ್ದಲ ಗಲಾಟೆ

ನಿಲ್ಲಿಸಿ ಕಲ್ಲಪ್ಪನ ಗೀಗೀ ಮೇಳಕ್ಕೆ ಚುರುಮುರಿ ಹಾರಿಸಿ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿದರು. ಹಾಡು ಹಾಡಿದ ಕಡಣಿಯ ಕಲ್ಲಪ್ಪನ ಮನಸ್ಸು ಅರಳಿತು. ಹೃದಯ ಹಗುರಾಯಿತು. ಕಡಣಿಯ ಕಲ್ಲಪ್ಪನ ಗೀಗೀ ಹಾಡಿಗೆ ಮೆಚ್ಚಿ ಕೊಂಡು ಹೊಟಗಿಯ ಶ್ರೀ ಮಠದ ಶ್ರೀಗಳು ಕಲ್ಲಪ್ಪನಿಗೆ ಕೈತುಂಬ ಬಹುಮಾನ ನೀಡಿ ಪ್ರತಿ ವರ್ಷ ಬಂದು ಹಾಡಕ್ಕಿ ಮಾಡಬೇಕೆಂದು ವೀಳ್ಯ ಕೊಟ್ಟು ಆಶೀರ್ವದಿಸಿದರು. ಹೊಟಗಿ ಮಠದ ಶ್ರೀಗಳ ಆಶೀರ್ವಾದ ಪಡೆದು ಕಡಣಿಯ ಕಲ್ಲಪ್ಪ ಪ್ರತಿ ವರ್ಷ ಜಾತ್ರೆಗೆ ಬಂದು ಪೂಜ್ಯ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಪಾತ್ರನಾದ. ಕ್ಷತ್ರಿಯ ಕುಲದ, ಕಟಬರ ಜಾತ್ರಿಗೆ ಸೇರಿದ ಕಡಣಿಯ ಕಲ್ಲಪ್ಪ ಬಾಲ ತಪಸ್ವಿ ಚನ್ನವೀರ ಮಹಾಸ್ವಾಮಿಗಳಿಂದ ಲಿಂಗ ದೀಕ್ಷೆ ಪಡೆದು ಲಿಂಗಾಂಗ ಸಾಮರಸ್ಯ ಪಡೆದು ಕಲಬುರ್ಗಿಯ ಶರಣ ಬಸಪ್ಪ, ಕಲ್ಯಾಣದ ಬಸವಣ್ಣನವರಂತಹ ಶಿವಶರಣರ ಮೇಲೆ ಗೀಗೀ ಹಾಡು ರಚಿಸಿ ಹಾಡಿ ಜನಮನವನ್ನೂ ಸೂರೆಗೊಂಡ.

■

# ಸಮಾಜ ಸುಧಾರಣೆಗಾಗಿ ಗೀಗೀ ಹಾಡು

೧೯೨೦ರಲ್ಲಿ ಭಾರತದಲ್ಲಿ ಬ್ರಿಟಿಷರ ವಿರುದ್ಧ ಗಾಂಧೀಜಿಯವರು ಹೂಡಿದ ಅಸಹಕಾರ ಚಳುವಳಿಯ ಬಿರುಗಾಳಿ ಎಲ್ಲ ಕಡೆಗೂ ಹಬ್ಬಿತ್ತು. ಒಂದು ಕಡೆ ದಿನದಿನಕ್ಕೂ ರಂಗೇರುತ್ತ ಹೊರಟ ಭಾರತ ಸ್ವಾತಂತ್ರ್ಯ ಆಂದೋಲನ, ಇನ್ನೊಂದು ಕಡೆ ಬ್ರಿಟಿಷರ ನಿರಂಕುಶ ಪ್ರಭು ಪ್ರಭುತ್ವ ಇದರಿಂದ ಜನ ಸಾಮಾನ್ಯರ ಬಾಳು ನುಜ್ಜು ಗುಜ್ಜಾಗಿತ್ತು.

ಭಾರತದಲ್ಲಿ ಇಸ್ಟ್ ಇಂಡಿಯಾ ಕಂಪನಿ ರಾಜ್ಯಭಾರ ಮಾಡುತ್ತ ಸಣ್ಣ-ಪುಟ್ಟ ಸಂಸ್ಥಾನಿಕರನ್ನು ಬಗ್ಗು ಬಡಿಯುತ್ತ ಕ್ರಮೇಣ ಭಾರತದಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಇದು ನಮಗೆ "ಏಸು ಸ್ವಾಮಿ ಕೊಟ್ಟ ಕೊಡುಗೆ" ಎಂದು ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

೧೮೫೭ ಭಾರತೀಯರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತದಲ್ಲಿ ಭಾರತೀಯರ ಸ್ಥಿತಿ-ಗತಿ ತೀರಾ ಅವನತಿಯ, ಶೋಚನಿಯ ದಾರಿ' ಹಿಡಿದು ಅಳಿಗಾಲದ ಹಂತಕ್ಕೆ ಬಂದು ತಲುಪಿತ್ತು. ಯಾವ ಭಾರತೀಯನ ಮನೆಯಲ್ಲಿ ತನ್ನ ಪ್ರಾಣರಕ್ಷಣೆಗಾಗಿ ಒಂದೇ ಒಂದು ಆಯುಧ ಇಟ್ಟುಕೊಂಡಿರಲಿಲ್ಲ. "ವಿಲಾಯಿತಿಯಿಂದ ಕಳುವ್ಯಾರ ಕಂಪನಿ ಸರಕಾರ ಎಲ್ಲ ಜನರ ಜೋರು ಮಾಡಿ ತರಬೇಕು ಹತಿಯಾರ" ಎಂಬ ಕಾನೂನಿನ ಮೂಲಕ ಆಯುಧಗಳನ್ನು ಕಸಿದುಕೊಂಡಿದ್ದರು. ಮನೆಯಲ್ಲಿ ಒಂದು ಹಾವು ಬಂದರೆ ಅದನ್ನು ಹೊಡೆದೋಡಿಸಲು ಚುಚ್ಚಿ ಕೊಲ್ಲಲು ಯಾರ ಹತ್ತಿರವೂ ಒಂದು 'ಭರ್ಚಿ' ಇಲ್ಲದಂತೆ ಆಗಿತ್ತು. ತೋಳ ಚಿರತೆಗಳಂತಹ ಕ್ರೂರ ಪ್ರಾಣಿಗಳು ಊರಲ್ಲಿ ತೂರಿ ಬಂದರೆ ಕಲ್ಲು ಹಾಕಿ ಹೊಡೆದು ಓಡಿಸೇನಂದರೆ ಒಂದು 'ಕವಣಿ' ಇರಲಿಲ್ಲ. ಬೇಟೆ ನಾಯಿಗಳನ್ನು ಸಾಕಲು ಸರಕಾರದ ಪರವಾನಿಗೆ ಬೇಕಾಗುತ್ತಿತ್ತು.

ಮಕ್ಕಳಿಲ್ಲದ ಮನೆಗೆ ದತ್ತಕ ಪುತ್ರನನ್ನು ತೆಗೆದುಕೊಳ್ಳುವ ಪದ್ಧತಿ ರದ್ದಾಗಿತ್ತು. ಪ್ರಕೃತಿಯ ಏರುಪೇರುಗಳಿಂದುಂಟಾಗುತ್ತಿರುವ 'ನೆರೆಹಾವಳಿ' ಬರಗಾಲ, ಭೂಕಂಪಗಳಂತಹ ದುಸ್ಥಿತಿಯಲ್ಲಿ ಲಾಭ ಪಡೆದು ಜನರ ಭವಣೆಯನ್ನು ನಿವಾರಿಸಿ

ತುಟಿಚಪ್ಪರಿಸುವ ಮೂಲಕ ದುಸ್ಥಿತಿಗೆ ಎಳೆಯುತ್ತಿತ್ತು. ಪ್ಲೇಗದಂತಹ ಮಹಾಮಾರಿ ಬೇನೆ ಹಬ್ಬಿ ಓಣಿಯಲ್ಲಿ ಹೆಣದರಾಶಿ ಬಿದ್ದರೆ ಕೇಳುವರಿರಲಿಲ್ಲ.

ವಿದ್ಯಾವಂತ ಯುವಕರು ಪೋಲಿಸ ಪೇದೆಗಳಾಗಿ, ಸೈನಿಕರಾಗಿ, ಕಾರಕೂನರಾಗಿ, ಕಚೇರಿಗಳಲ್ಲಿ ಸಿಪಾಯಿಗಳಾಗಿ ಊರಲ್ಲಿ ಓಲೆಕಾರರಾಗಿ ಗ್ಯಾಂಗಮನ್‌ಗಳಾಗಿ ಅಂಚೆಯ ಕಚೇರಿಗಳಲ್ಲಿ ಪೋಸ್ಟಮನ್ನರಾಗಿ ಸರಕಾರಕ್ಕೆ ನಿಷ್ಠರಾಗಿ ಕಾರ್ಯನಿರ್ವ ಹಿಸುತ್ತಿದ್ದರು.

ಭಾರತ ಕೃಷಿ ಪ್ರಧಾನವಾದ ದೇಶ ಮೈಮುರಿದು ದುಡಿದರೆ ರೈತ ಕೃಷಿ ಋಷಿ, ಇಲ್ಲವಾದರೆ ರೈತ ಮಣ್ಣುಮಸಿ. ರೈತರ ದುಡಿಮೆಗೆ ಆದ್ಯತೆ ನೀಡದೆ ಅದೇ ಆಗ ಭಾರತಕ್ಕೆ ಕಾಲು ಹಾಕಿದ ಚಹಾದ ಚಟ, ಪ್ರಾಚೀನ ಕಾಲದಿಂದ ನಡೆದುಕೊಂಡ ಬಂದ ಜೂಜಿನಾಟಕ್ಕೆ ಮಾರುಹೋಗಿ ಚುಟ್ಟಾ ಸೇದಿ ತಮ್ಮ ಮೈ ತಾವೇ ಸುಟ್ಟುಕೊಳ್ಳುತ್ತಿದ್ದರು. ಪರಸ್ಪರರಲ್ಲಿ ಸಹಕಾರ ಮನೋಭಾವ ಉಡುಗಿ ಹೋಗಿತ್ತು. 'ಸಾಲ'ದ ಬಾಧೆಯಿಂದ ಬಳಲುವವರ ಸಂಖ್ಯೆ ಹೆಚ್ಚಾಗಿತ್ತು. ಹೊಲಗಳಿಗೆ ಕರಿಕಿ ಹತ್ತಿ ಪಡಾಬಿದ್ದು ಬೆಳೆಯದಂತಾಗಿದ್ದವು. ಹೊಲಗಳಿಗೆ ಬಿರಾಡು ಕೊಡುವುದಾಗದ್ದಕ್ಕೆ ಸಣ್ಣ ರೈತರು ಊರು ಬಿಟ್ಟು ಓಡಿ ಹೋಗುತ್ತಿದ್ದರು. ಇಂತಹ ಪರಿಸ್ಥಿತಿಯನ್ನು ಅರಿತು ಗೀಗೀ ಹಾಡುಗಾರ ಪದಕಟ್ಟಿ ಹಾಡಿ ಎಚ್ಚರಿಸುವ ರೀತಿ ಮನಮೋಹಕವಾಗಿದೆ.

"ಚ್ಯಾದ ಚಟ, ಜೂಜಿನಾಟ, ಮೋಜಿನಿ ರವಿ
ಇವು ಮೂರು ಹಾಳು ಮಾಡಿ ಬಿಟ್ಟಾವಪ್ಪ
ನಮ್ಮ ಒಕ್ಕಲುತಾನ ।
ಒಳಗುಟ್ಟ ತಿಳಿಯಲೊಲ್ಲದು ಯಾಕಣ್ಣ
ಒಕ್ಕಲುತನದುದ್ಯೋಗಿದು
ರೊಕ್ಕ ಮಾಡು ಟಂಕಸಾಲಿ
ಲೆಕ್ಕ ಹಾಕಿ ನೋಡ ತಮ್ಮ ದೂರತನ".

ಎಂದು ನಮ್ಮ ದೇಶಿಯ ಲಾವಣಿಕಾರ ಹಾಡಿ ರೈತ ಸಮೂಹವನ್ನೆ ಎಚ್ಚರಿಸುತ್ತಿದ್ದ.

ದಾನ-ಧರ್ಮದ ಕಡೆಗೆ ಯಾರ ಮನಸ್ಸು ಇರಲಿಲ್ಲ. "ಕಾಯಕ - ದಾಸೋಹ" ತತ್ವ ಹೇಳಿಕೊಟ್ಟ ಮಹಾನ್ ದಾರ್ಶನಿಕ ಬಸವಣ್ಣನವರು ಸಂದೇಶ ಬಹುಜನರು ಮರೆತ್ತಿದ್ದರು. ಅಷ್ಟಾವರ್ಣ, ಪಂಚಾಚಾರ ಷಟಸ್ಥಲ ಬಿತ್ತಿ ಬೆಳೆದ ಈ ದೇಶದಲ್ಲಿ ದಾರಿದ್ರ್ಯದ ದಟ್ಟ ಹೊಗೆಯಾಡುತ್ತಿತ್ತು. ಸಾವಿರಕೊಬ್ಬ ಸಜ್ಜನ, ಲಕ್ಷಕೊಬ್ಬ ಸಂತ, ಕೋಟಿಕೊಬ್ಬ ಶರಣನಂತೆ ಉಳಿದುಕೊಂಡಿದ್ದ ಮಹಾತ್ಮರು ಬೀರುವ ಬೆಳಕಿನ

ಕಿರಣ ಹಿಡಿದುಕೊಂಡು ನಮ್ಮ ಜಾನಪದರು ಗೀಗೀ ಹಾಡಕಟ್ಟಿ ಹಾಡಿ ಜನಮನವನ್ನು ಜಾಗೃತಗೊಳಿಸುತ್ತಿದ್ದರು. ಅಂತಹರಲ್ಲಿ ಎದ್ದು ಕಾಣುವ ದೊಡ್ಡ ಹೆಸರು ಕಡಣಿಕಲ್ಲಪ್ಪನವರದು.

ಇಲ್ಲಿ ಕಡಣಿ ಕಲ್ಲಪ್ಪನವರು ಅಷ್ಟಾವರ್ಣ ತತ್ವ ಅಳವಡಿಸಿ ಸಮಾಜ ಸುಧಾರಣೆಗಾಗಿ ಕಟ್ಟಿ ಹಾಡಿದ ಗೀಗೀ ಹಾಡು ಆ ಕಾಲಕ್ಕಷ್ಟೆ ಅಲ್ಲ ಸಾರ್ವಕಾಲಕ್ಕೂ ಸತ್ಯ ಸ್ತುತ್ಯವಾದ 'ಗೀಗೀ' ಅಥವಾ ಲಾವಣಿ ಹಾಡು "ಲಿಂಗಶೆಟ್ಟಿ ಕಥನ ಗೀತೆ" ಎಂದು ಹೇಳಬಹುದು.

"ಪರಮೇಶ್ವರನ ಪಂಚಮುಖದಿಂದ
ಅಷ್ಟಾವರ್ಣ ತಯಾರಾದು
ಸೃಷ್ಟಿಯೊಳಗ ಶ್ರೇಷ್ಠ ದಿನಸಂತ
ಬರೆದು ಇಟ್ಟಿದ್ದರು
ಅದು ತಿಳಿಸುವುದಕ್ಕ ಬಸವಣ್ಣನವರು
ತಮ್ಮ ವೀರಶೈವ ಧರ್ಮದವರಿಗೆ ಹೇಳಿದರು
ವೇದ ಸಮ್ಮತದಿಂದ ತಮ್ಮ ಧರ್ಮದವರಿಗೆ
ಬೋಧಾ ಹೇಳಿದರು
ಅಂಗಕ್ಕೆ ಸಮಾನವಾದ ಲಿಂಗ ಕಟ್ಟಿದರು
ಈಗಿನ ದೀಡಶ್ಯಾಣ್ಯಾರು ಹುಟ್ಟಿ
'ಲಿಂಗ' ಬಿಚ್ಚಿ ಇಟ್ಟಿದರು" ಹಾ ಜೀ ಜೀ"sss

ವೀರಶೈವರೂ ಲಿಂಗಾಯತರು ಎಂದು ಹೇಳಿಕೊಳ್ಳುವವರು ತಮ್ಮ ಧರ್ಮದ ಕುರುವಾಗಿ ಧರಿಸುತ್ತಿದ್ದ "ಇಷ್ಟಲಿಂಗ"ದ ಮಹಿಮೆಯನ್ನು ಮರೆತು ಅದನ್ನು ಬಿಚ್ಚಿ ಮನೆಯಲ್ಲಿದ್ದ ಗೂಟಕ್ಕೆ ತೂಗು ಹಾಕಿದ್ದರು. ಲಿಂಗಾಂಗ ಸಾಮರಸ್ಯ ಕುರುಹಾಗಿ ಬಂದ ಇಷ್ಟಲಿಂಗ ಗೂಟದ ವಸ್ತು ಆದುದನ್ನು ಕವಿ ಕಣ್ಣಾರೆ ಕಂಡು ಈಗಿನ ದೀಡಶ್ಯಾಣ್ಯಾರು ಹುಟ್ಟಿ ಲಿಂಗಾ ಬಿಚ್ಚಿ ಇಟ್ಟಿದರು" ಎಂದು ಗೇಲಿ ಮಾಡಿ ಜನರನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸಿದ್ದಾನೆ.

ಬ್ರಿಟಿಷ್ ಭಾರತದಲ್ಲಿ ಜನರು ತಮ್ಮ ಕುಲ ಛಲಗಳನ್ನು ಜಾತಿ-ಮತಗಳನ್ನು, ಆಚಾರ-ವಿಚಾರಗಳನ್ನು ಬಿಟ್ಟು ಮನ ಬಂದಂತೆ ನಡೆದುಕೊಳ್ಳುತ್ತಿದ್ದರು. ಯಾರು ಏನು ಹೇಳಿದರೂ ಅವರ ಮಾತನ್ನು ಕೇಳುತ್ತಿದ್ದಿಲ್ಲ. ಇಂಥವರಿಗೆ ಕವಿ "ದೀಡಶ್ಯಾಣ್ಯಾರು" ಎಂದು ಮೂದಲಿಸಿದ್ದಾನೆ.

ಮೂರ್ಖರನ್ನು ತಿದ್ದಿ ದಾರಿಗೆ ತರಬಹುದು, ಶತಮೂರ್ಖರನ್ನು ತಿದ್ದಿ ಸನ್ಮಾರ್ಗಕ್ಕೆ ತರುವುದು ತುಂಬ ದುಸ್ತರ. ಇಂತಹ ಶತಮೂರ್ಖರಲ್ಲಿ ಒಬ್ಬ

"ಲಿಂಗಶೆಟ್ಟಿ". ಈ "ಲಿಂಗಶೆಟ್ಟಿ" ಎಂಬ ಕಥನ ಕವನ ಹೆಣೆದು ಒಂದು ಕುಟುಂಬದಲ್ಲಿದ್ದ ಭವಣಿಯನ್ನು ಬಯಲಿಗೆಳೆದು ಭೂಮಿ–ಆಕಾಶ ಒಂದಾಗುವಂತೆ ಡಪ್ಪು ಬಾರಿಸಿ ಮನುಷ್ಯನ ಎದೆ ಸೀಳಿ ಅಲ್ಲಿ 'ಆಚಾರ–ವಿಚಾರ' ಎಂಬ ಬೀಜ ಬಿತ್ತಲು ಪ್ರಯತ್ನಿಸುತ್ತಾನೆ.

"ಸಂಸಾರ ಬಂಧನದಲ್ಲಿ ಸಿಲುಕಿ ಸರ್ವ ಎಲ್ಲ ಮರೆತರೆ
ಎರಡರೇ ಇರಲಿ ಅಂತ ಮನಕ ತಿಳಿದಾರು
ಕಡೆಗೆ ಒಂದರೇ ಇದ್ದರೆ ಮುಂದ ಹಾದಿಗೆ ಬಂದಾರು"

ಸಂಸಾರ ಬಂಧನದಲ್ಲಿ ಸಿಲುಕಿ ಆಚಾರ–ವಿಚಾರ ಮರೆತರೂ "ನಾನು ಇದು ನನ್ನ ಧರ್ಮ ಎಂಬ ಅಭಿಮಾನ ಒಂದು ಇದ್ದರೆ ಮುಂದೆ ಈ ಮನುಷ್ಯ ತನ್ನಷ್ಟಕ್ಕೆ ತಾನೇ ದಾರಿಗೆ ಬಂದಾನು?" ಎಂಬ ಆಶಯ ವ್ಯಕ್ತಪಡಿಸುತ್ತಾನೆ 'ಗುರು–ಲಿಂಗ'. ಇವು ಎರಡು ಹಿಡಿದುಕೊಂಡು ಹೋದರೆ 'ಜಂಗಮ' ಸೇವೆಗೆ ಸಹಜವಾಗಿ ಇಳಿದು ಬರುತ್ತಾನೆ. ಮೊದಲು ಈ ಮನುಷ್ಯ "ಇಷ್ಟಲಿಂಗ" ಧಾರಣ ಮಾಡಿದರೆ ಮುಂದೆ ಲಿಂಗಾಂಗ ಸಾಮರಸ್ಯ ಬಂದೇ ಬರುತ್ತದೆ. ಅದಕ್ಕಾಗಿ ಲಿಂಗವಂತರಿಗೆ ಲಿಂಗ ಒಂದು ಇದ್ದರೆ "ಮುಂದೆ ಹಾದಿಗೆ ಬಂದಾರು" ಎಂದು ಉದ್ಗಾರವೆತ್ತುತ್ತಾನೆ. ಶರಣ ಕವಿ ಕಡಣಿ ಕಲ್ಲಪ್ಪ.

"ಉಳಿದ ಏಳು ದಿನಸ ನಮ್ಮದು ಅಂತ
ಇಷ್ಟರs ತಿಳಿದಾರು
ವಿಭೂತಿ ಅಂದರೆ ಇದು ಎಂತಹ ಮಹತ್ವದ್ದಿರತೈತಿ
ಎಲ್ಲರಿಗೂ ಹೇಳತಿನಿ ಕೇಳಿರಿ ಬಲ್ಲವರು.
ಹುಬ್ಬಳ್ಳಿ ಪ್ರಾಂತದೊಳು
ಲಿಂಗ ಶೆಟ್ಟಿ ಒಳ್ಳೆ ಬೆಳೆದವರು
ಹುಟ್ಟಿದ ಕೂಡಲೆ ಅವರು ಅಷ್ಟಾವರಣ ಹಸನ ತೊಳೆದವರು
ಲಿಂಗ ವಿಭೂತಿ ಮಂತ್ರ–ತಂತ್ರ ಹುಟ್ಟಿದು ಹಿಡಿದು
ಗುರುತೇ ಇಲ್ಲ.
ಜಗಲಿ ಮ್ಯಾಲಿನ ದೇವರು ಮೊದಲೇ ಕಳದಾರೋ
ಬರೆ 'ಸತಿ–ಪತಿ' ಮಾತ್ರ ಬಾಳ ಸುಖದಿಂದ ಉಳದಿದ್ರು"

"ಗೀಗೀ ಹಾಡಿನ ಮೇಳ" ಕಟ್ಟಿ ಸಮಾಜ ಸೇವೆಗೆ ಇಳಿದ ಕವಿ ಕಡಣಿ ಕಲ್ಲಪ್ಪ ಧರ್ಮ ಗುರುವಿನಂತೆ ಸಮಾಜಕ್ಕೆ ತಿಳಿ ಹೇಳಿ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ ಮಂತ್ರ ಪಾದೋದಕ ಪ್ರಸಾದ ಇವು ಅಷ್ಟಾವರ್ಣಗಳು. ಈ ಅಷ್ಟಾವರ್ಣ

ಗಳಲ್ಲಿ ಒಂದಾದ ವಿಭೂತಿ ಮಹಿಮೆಯನ್ನು ಸಹಜ ಸುಂದರವಾಗಿ ಹೇಳಿ ಲಿಂಗಶೆಟ್ಟಿಯ ಮನಕರಗಿಸಿ ಅವನಲ್ಲಿ ಲಿಂಗಾಂಗ ಸಾಮರಸ್ಯ ತಂದು ಕೊಡುತ್ತಾನೆ.

ಐದು ಚೌಕಗಳಲ್ಲಿ ಸುದೀರ್ಘವಾಗಿ ಮೂಡಿ ಬಂದ ಈ ಕಥನ ಗೀತೆ ಹಾಸ್ಯ, ವಿಡಂಬನೆ, ಬೀಭತ್ಸ, ಭಯ, ಭಕ್ತಿ ರಸಗಳಿಂದ ನಿಷ್ಠುರವಾದ ಸತ್ಯವನ್ನು ಪೋಣಿಸಿಕೊಂಡು ಬಂದು ಮನುಷ್ಯನಿಗೆ ನಿಜದ ನೆಲೆ ತೋರಿಸುತ್ತದೆ. ಈ 'ಲಿಂಗ ಶೆಟ್ಟಿ' ಕಥನ ಗೀತೆ ಅಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ; ಬರೆದು ಮುನ್ನುಡಿಯಾಗಿದೆ.

"ಗುರುಲಿಂಗ ಜಂಗಮ ಅಂದ್ರ
ಮನಸ್ಸಿಗೆ ಬಹಳ ತೊಂದ್ರ
ಯಾರರೇ ಮನಗೆ ಬಂದ್ರ
ಭಯಂಕರ ಸಿಟ್ಟ
ಐಗೊಳಿಗಿ ನೀಡವಲ್ಲ ಹಿಟ್ಟ"

ಈ ಕಥೆಯನ್ನು ಕಾವ್ಯದ ಮೂಲಕ ಪ್ರಾಸಬದ್ಧವಾಗಿ, ಲಯಬದ್ಧವಾಗಿ ಡಪ್ಪು ಬಾರಿಸುತ್ತ ತುಂತುನಿ ತಾಳಗಳ ಮಧ್ಯದಲ್ಲಿ ಅತ್ಯಂತ ರಮ್ಯವಾಗಿ ಹಾಡಿ ಜನಮನವನ್ನು ತನ್ನ ಕಡೆಗೆ ಸೆಳೆದುಕೊಂಡು ಹಾಡಿ ಅವರ ಮನವನ್ನು ಅರಳಿಸಲು ಪ್ರಯತ್ನಿಸುತ್ತಿದ್ದ.

'ಲಿಂಗಶೆಟ್ಟಿ ಹೊಲ-ಮನೆಗಳುಳ್ಳ ಓರ್ವ ಸ್ಥಿತಿವಂತ. ದೈವಭಕ್ತಳಾದ 'ಪತ್ನಿ' ಮನೆಯಲ್ಲಿ. ಕೊಡು ಕೊಳ್ಳುವಿಕೆಯಿಂದ, ದಾನಧರ್ಮಗಳಿಂದ, ತನಗೆ ಬೇಕಾಗುವ ತನ್ನ ಮನೆತನಕ್ಕೆ ಇರಬೇಕಾದ ಸಂಪತ್ತು ಉಳ್ಳವ. ಇಷ್ಟಿದ್ದರೂ ನಿರ್ದಯವಾಗಿ ನಡೆದುಕೊಳ್ಳುತ್ತಿದ್ದ. ಈ ಮನುಷ್ಯನ ಮನಸ್ಸು ಅರಿತುಕೊಂಡು "ಊರ ಜನರೆಲ್ಲ ಬಹಿಷ್ಕಾರ ಕೊಟ್ಟಿದ್ದು, ನೀತಿ ತಪ್ಪಿದ್ದರಿಂದ, ಜಾತಿ ಜನ ಅವನನ್ನು ಸಮಾಜದಿಂದ ಆರಿಸಿ ಇಟ್ಟಿದ್ರು" ಎಂದು ಡಪ್ಪು ಬಾರಿಸಿ ಕುಳಿತ ಸಮಾಜದ ಕಣ್ಣು ತೆರೆಸಿ ಹಾಡುತ್ತಿದ್ದ. ಹಾಡು ಕೇಳಿದವರು ದಾರಿಗೆ ಬರುವಂತೆ ದನಿ ಎತ್ತಿ ಹಾಡುತ್ತಿದ್ದ. ಕಡಣಿ ಕಲ್ಲಪ್ಪನಿಗೆ ಸಮಾಜ ಸುಧಾರಕ, ಸಮಾಜ ಸೇವಕ, ತತ್ವನಿಷ್ಠ, ಶರಣ ಕವಿ ಎಂದು ಜನರು ಕೊಂಡಾಡುತ್ತಿದ್ದರು.

ಮನುಷ್ಯನಾದವನು ಇಷ್ಟು ಕೃಪಣತನದಿಂದ ಬಾಳುವುದು ಬೇಡ, ದಯೆ, ಧರ್ಮ ಇಲ್ಲದವನು ಮನುಷ್ಯನೇ ಅಲ್ಲ ಎಂದು

"ಊರ ತುಂಬ ಹೇಳಿದರು ಮೀರಿನಿಂತ ಎಲ್ಲರಿಗೂ
ಯಾರ ಮಾತು ಕೇಳಲಿಲ್ಲ ಕಟ್ಟ ಕಡೆತನ
ಕೆಟ್ಟ ಕಾಡು ಕಾಲಕ್ಕ ಬರತಾವ ಇಂತಹ
ದಾರಿದ್ರ್ಯ ಗುಣ"

ಎಂದು ಹಾಡುತ್ತ ಕವಿ ಕಣ್ಣಿ ಕಲ್ಲಪ್ಪ ಇಂತಹವರನ್ನು ಕಂಡು ತನ್ನಷ್ಟಕ್ಕೆ ತಾನೇ ಮರಗುತ್ತಾನೆ. ಇಂತಹ ದರಿದ್ರರನ್ನೇ ದಾರಿಗೆ ತರುವುದಕ್ಕೆ 'ಆಟ, ನೋಟ, ಮಾಟ'ಗಳು ಹುಟ್ಟಿ ಬಂದಿವೆ ಎಂದು ಮುಂದುವರಿದು ಹಾಡುತ್ತಾನೆ.

"ಮುಂದ ಕೇಳ್ರಿ, ಒಂದು ದಿವಸ
ಕುಲದ ಗುರುವು ಮನಿಗೆ ಬಂದ.
ನೋಡ ಬೇಕಂತ ಶಿಷ್ಯನ ಮನೆತಾನ
ಅಗಸಿಗಿ ಬರುವರಾಗ ಹೇಳಿ ಬಿಟ್ರೋ
ಎಲ್ಲ ವರ್ತಮಾನ ಹಾ ಜೀ ಜೀ"ss

ಕುದುರೆಯ ಮೇಲೆ ಕುಳಿತು ಒಳ್ಳೆಯ ಠೀವಿಯಿಂದ ಊರ ಪ್ರವೇಶಿಸುತ್ತಿದ್ದರು. ಲಿಂಗ ಶೆಟ್ಟಿಯ ಕುಲಗುರುಗಳು, ಇವರನ್ನು ಕಾಣುತ್ತಲೇ ಅಗಸಿಯ ಮುಂದೆ ಕುಳಿತ ಊರ ಜನರು ಲಿಂಗ ಶೆಟ್ಟಿಯ ಕೃಪಣತನವನ್ನು ಹೇಳಿಯೇ ಬಿಟ್ಟರು.

"ಶಿಷ್ಯನ ಕೀರ್ತಿಯ ಕೇಳಿ
ಗುರುಮನಿಗೆ ಬಂದ"

ಮನೆಯಲ್ಲಿ 'ಲಿಂಗಶೆಟ್ಟಿ' ಇರಲಿಲ್ಲ. ದೈವ ಭಕ್ತಳಾದ ಅವನ ಧರ್ಮ ಪತ್ನಿ ಇದ್ದಳು. ಇವರು ನಮ್ಮ ಮನೆ "ಗುರು ಇದ್ಹಾಂಗ ಕಾಣಸ್ತಾರಂತ" ಭಕ್ತಿ ಭಯದಿಂದ ಗುರುಗಳನ್ನು ಬರಮಾಡಿಕೊಳ್ಳುತ್ತಾಳೆ. ಅವರು ಕುಳಿತುಕೊಳ್ಳಲು ಗದ್ದಗಿ ಹಾಕಿ ನಮಸ್ಕಾರ ಮಾಡಿ ಕುಳಿತುಕೊಳ್ಳಲು ಹೇಳುತ್ತಾಳೆ.

ಕವಿ ಕಡಣಿ ಕಲ್ಲಪ್ಪ ಹರದೇಶಿ ಪಕ್ಷದ ಹಾಡುಗಾರನಾದರೂ ಹೆಣ್ಣು ಮಕ್ಕಳನ್ನು ಅಷ್ಟೇ ಪ್ರೀತಿ ಅಂತಕರಣದಿಂದ ಕಾಣುತ್ತಿದ್ದ, ಅವರಲ್ಲಿರುವ ಶೀಲ, ಸದ್ಗುಣಗಳು ಕೆಡುತ್ತಿರುವ ಸಮಾಜಕ್ಕೆ ದಾರಿದೀಪವೆಂದು ಹೇಳುತ್ತಿದ್ದ.

ಗುರುಗಳು ಬಂದು ಮನೆಯಲ್ಲಿ ಕುಳಿತಿದ್ದರು ಮನೆಯ ಯಜಮಾನಿ ಗಂಡ ಬರುವ ದಾರಿಯನ್ನು ಕಾಯುತ್ತಿದ್ದಳು. ಅಷ್ಟರಲ್ಲಿ ಸಂಜೆ ಆಯಿತು, ಲಿಂಗಶೆಟ್ಟಿ ಮನೆಗೆ ಬರುತ್ತಾನೆ.

"ಅಂಗಳದಾಗ ಕಟ್ಟಿದಂತಹ
ಕುದುರಿ ನೋಡ್ಯಾನ
ಮನೆಗೆ ಯಾರು ಬಂದಾರಂತ
ತನ್ನ ಮಡದಿಗೆ ಕೇಳ್ಯಾನ"

ಆಗ ಮಡದಿ ಆ ಮನೆಯ ಒಡತಿ

"ಮಡದಿ ಹೇಳತಾಳ ಸ್ವಾಮಿ ಮನಿಗಿ
ಗುರು ಬಂದಾರ
ನಮ್ರದಿಂದ ಭೆಟ್ಟಿ ಆಗ್ರಿ ಹೋಗ್ರಿ ಆತನ".

ಎಂದು ಗಂಡನಿಗೆ ಅತ್ಯಂತ ವಿನಯದಿಂದ ಹೇಳುತ್ತಾಳೆ. 'ಗುರು' ಎಂಬ ಶಬ್ದ ಕೇಳುತ್ತಲೇ ಲಿಂಗ ಶೆಟ್ಟಿಗೆ ದಿಂಗ ಬಡಿದಂತಾಯ್ತು. ಗಡ ಗಡ ನಡುಗಿ

"ನಾ ಸುಮ್ಮನರೆ ಯಾಕೆ ಬಂದೆ ಕಾಣಾ ಕಾಣಾ
ಲಿಂಗ ವಿಭೂತಿ ಮಂತ್ರ ತಂತ್ರ
ಇಲ್ಲದೊಂದ ಕೇಳತಾನ
ಹೊಲದಾಗ ಯಾಕ ಕೂಡಲಿಲ್ಲ ಇವತ್ತು ಒಂದಿನ
ಹಿಡಿದು ಕಲ್ಲು ಕಟ್ಟಿದರೆ ಯಾರ
ಹೊರಬೇಕ ಸಾಯುತನ"

'ಲಿಂಗಶೆಟ್ಟಿ'ಯ ಪ್ರತಿಮೆಯನ್ನು ಮುಂದಿಟ್ಟು ಅಂದಿನ ಸಮಾಜದ ಸ್ಥಿತಿ-ಗತಿಯನ್ನು ಗೀಗೀ ಹಾಡಿನಲ್ಲಿ ಕಟ್ಟಿ ಜನರ ಮುಂದೆ ಹಾಡಿ ತೋರಿಸಿದ್ದಾನೆ. ಕವಿ ಕಣ್ಣಿ ಕಲ್ಲಪ್ಪನ ದೇಶಿಯ ಭಾಷೆ ಆಡುನುಡಿಯ ಸೊಗಸು "ಹಿಡಿದು ಕಲ್ಲು ಕಟ್ಟಿದರೆ ಯಾರ ಹೊರಬೇಕ ಸಾಯುತನ" ಅನ್ನುವ ಅವನ ಅಣಕು ಮಾತಿನ ವಿಡಂಬನೆಗೆ ಎಂಥವರು ತಲೆದೂಗಲೇ ಬೇಕು.

ಒಳ್ಳೆಯ ನಡೆನುಡಿಗಳಿಂದ ವಂಚಿತನಾದ, ಪ್ರೀತಿ, ದಯೆ ಅಂತಕರಣ ಕಳೆದುಕೊಂಡ ಮನುಷ್ಯ "ನಾ ಹೊಲದಾಗ ಹೋಗಿ ಕೂಡತೀನಿ ಇಂವಾ ಹೋಗತಾನ" ಎಂದು ಅವನಾಡಿದ ಮಾತು ಕೇಳಿ ಮರೆಯಲ್ಲಿ ನಿಂತು ಕೇಳಿದ ಗುರು

"ಅಡ್ಡ ನಿಂತು ಕೇಳುತಾನ ಎಲ್ಲಿ ಹೋಗತ್ಯೋ ಲಿಂಗಶೆಟ್ಟಿ
ಮನಿಗಿ ನಾ ಬಂದದ್ದು ಇಲ್ಲೇನೋ ಖೂನಾ
ನನಗ ಮಾನ್ಯಾಗ ಕೂಡ್ರಿಸಿ ಹೋಗುದೇನು
ದೊಡ್ಡಸ್ಥಾನ ಹಾ ಜೀ ಜೀ"sss

ಹೀಗೆ ಮನೆಯ ಗುರು ಜಾಡಿಸಿ ಮಾತನಾಡುತ್ತಾನೆ. ಗುರುವಿನ ಮಾತು ಮೀರಿ ಹೋಗುವ ಶಕ್ತಿ ಇಲ್ಲದ್ದಕ್ಕೆ ಲಿಂಗಶೆಟ್ಟಿ ಗುರುವಿಗೆ ಶರಣಾಗುತ್ತಾನೆ. ಅಷ್ಟರಲ್ಲಿ ಮನೆಯಲ್ಲಿ ಪ್ರಸಾದ ಸಿದ್ಧವಾಗಿರುತ್ತದೆ. ಇಬ್ಬರು ಕೂಡಿ ಊಟಕ್ಕೆ ಕೂಡ್ರುತ್ತಾರೆ.

ಗುರುಗಳು ವಚನ ಪಠಣ ಮಾಡುತ್ತಿರುವಾಗ ದಕ್ಷಿಣಕ್ಕಾಗಿ ಈ ಹಿಕಮತಿ ಇದ್ದಾಂಗ ಕಾಣಸ್ತಾದ ಎಂದು ಭಾವಿಸಿ ಲಿಂಗಶೆಟ್ಟಿ

"ಯಾಕ ಅನುಮಾನ ಮಾಡತೀರಿ ಗುರುವೆ
ಸಾಕಾಗುತಾನ ಊಟ ಮಾಡಿರಿ
ಬೇಕಾದರ ದಕ್ಷಿಣ ಕೊಡತೀನಿ
ಹಿಡಿರಿ ನೀವು ಮೊದಲ
ನಾ ನಿಷ್ಠುರ ಮನುಷ್ಯ ಎಂದಿಗೂ ಖರೆ
ಆಡ್ಡಾಂವ ಅಲ್ಲ ಬದಲ
ದುಡ್ಡಿನ ಅಡಚಣಿ ಅಂತು ಗುರುತೇ ಐತಿ
ಸದ್ದೆ ತಮಗೆಲ್ಲ.
ಒಮ್ಮೇ ನಿಮಗ ತೀರಸ್ತಿನಿ
ಮೊಮ್ಮಕ್ಕಳ ಲಗ್ನದಾಗ
ಹತ್ತು ರೂಪಾಯಿದು ಸುತ್ತುತ್ತೀನಿ
ಜರದ ರುಮಲು
ಏನ ಮಾಡುದೈತಿ ಇನ್ನು ನನಗ
ಮಕ್ಕಳಾಗಿಲ್ಲ, ಹಾ ಜೀ ಜೀ"sss

ಗೀಗೀ ಹಾಡು ಕೇಳುತ್ತ ಕುಳಿತವರೆಲ್ಲರೂ 'ಗುರು ಗುಗ್ಗರಗಳ್ಳ ಶಿಷ್ಯ ಹಗ್ಗರ ಗಳ್ಳ" ಎಂದು ಖೊಳ್ಳನೆ ನಕ್ಕಿರಬೇಕು. ಈ ಮಾತಿಗೆ ಗುರುಕೊಟ್ಟ ಉತ್ತರ ಅಷ್ಟೆ ಮಾರ್ಮಿಕವಾಗಿದೆ.

"ಇನ್ನು ಇವನಿಗೆ ಮಕ್ಕಳಾಗಿಲ್ಲ
ಮೊಮ್ಮಕ್ಕಳ ಲಗ್ನತಾನ ಹಾಕ್ಯಾನ ಜಾಲಾ
ಏನೋ ಲಿಂಗಶೆಟ್ಟಿ ನಿನ್ನ ಆಯೇರಿ ಜರೂರಿಲ್ಲ
ನೀ ಸಾವಿರ ರೂಪಾಯಿ ಕೊಟ್ಟರ ನನಗ ಬೇಕಾಗಿಲ್ಲ.
ಹೇಳಿದಾಂಗ ಕೇಳತೀನಿ ಅಂದ್ರ ಕುಂತ ಊಟಾ
ಮಾಡ್ತೀನಿ
ಇಲ್ಲಂದ್ರ ಎಡಿ ಸಹಿತ ಮುಟ್ಟುದಿಲ್ಲ
ನಾ ಶಾಪ ಕೊಟ್ಟರೆ ಮುಂದೆ ಮಕ್ಕಳು
ಹುಟ್ಟುದಿಲ್ಲ ಹಾ ಜೀ ಜೀ"sss

ಕಲ್ಲಪ್ಪ ತುಸು ಸಿಟ್ಟಿನ ದನಿ ತೆಗೆದು ಹಾಡುತ್ತಿದ್ದಾಗ ಹಾಡು ಕೇಳುತ್ತ ಕೂತ

ಜನರು ಭಯಭೀತರಾಗಿ ನಾವೂ ಸಹಿತ ಇಂಥ ತಪ್ಪು ಮಾಡಬಾರದೆಂದು ತಮ್ಮ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದರು. ಗುರುವಿನ ಮಾತು ಕೇಳಿ ಲಿಂಗಶೆಟ್ಟಿ "ಇವ ಶಾಪ ಕೊಟ್ಟರೆ ಮುಂದ ಮಕ್ಕಳು ಹುಟ್ಟುದಿಲ್ಲ" ಎಂದು ಅಂಜಿನಿಂತ ಲಿಂಗಶೆಟ್ಟಿಗೆ.

'ನಾ ಹೇಳಿದ ಮಾತು ಮನಸಿನ್ಯಾಗ
ಹಿಡಿಯೊ ಗಟ್ಟ್ಯಾಗಿ
ಮುಂಜಾನೆ, ಎದ್ದ ಕೂಡಲೆ ನೀನು ವಿಭೂತಿ
ಹಚ್ಚಿದವರ ಮಾರಿ ನೋಡಿ
ಬೇಕಾದ ಮಾಡ ಹೋಗೋ ನಿನ್ನ ಹೊಟ್ಟಿಗಿ
ಇದು ಬಿಟ್ಟಿ-ಅಂದ್ರ ಬರಲಾಕಿಲ್ಲ ನಿನ್ನ ಭೆಟ್ಟಿಗಿ"

ಎಂದು ಇನ್ನೂ ನಿಷ್ಠುರವಾಗಿ ಹೇಳಿದ. ಈ ಮಾತು ಕಳಿ

"ನನ್ನ ಪಾಲಕ ಬಂದೈತಿ ಗುರುವೆ
ನಾನು ಹೇಳಲ್ಯಾರಿಗೆ"

ಎಂದು ಅನುಮಾನಿಸುತ್ತ

"ಆದರ ಆಗೋಲ್ಯಾಕ ಅಂತ ಹೂಂ ಅಂದ
ಹನ್ನೆರಡು ಗಂಟು ಹಾಕಿ ಮಾರಿಗಿ
ವಚನ ತಗೊಂಡ ಮ್ಯಾಲ ಗುರು
ಊಟ ಉಪಚಾರ ಮುಗಿಸಿಕೊಂಡು
ಹೋಗಲಾಕ ತಯಾರಾದ ತನ್ನ ಊರಿಗಿ"

ಅತ್ಯಂತ ಬೇಸರ ಮಾಡಿಕೊಂಡ ಲಿಂಗಶೆಟ್ಟಿ ಗುರುಗಳನ್ನು ಕಳಿಸಿ ತನ್ನ "ಮನಿಗೆ ಬಂದ ಪೀಡಾ ಹೋಯಿತು" ಎಂದು ತುಸು ಹೊತ್ತು ಸುಮ್ಮನೆ ಕುಳಿತುಕೊಂಡ." ಆಗ ಬಿತ್ತುಣಿಕೆ ದಿನ ಇತ್ತು. ಹೊಲ ನಿಕಾಲ ಮಾಡಬೇಕೆಂದು ಜಲ್ದಿ ಹೋಗಿ ತಾನ ಮೂರ ತಾಸ ರಾತ್ರ್ಯಾಗ ಕೂತ ಎಚ್ಚರಕ್ಯಾಗಿ"

"ಹೊತ್ತ ಹೊಂಟರ ಹೊಲ ಉಳಿತಾದ
ಬೆದೆಯು ಕಳಿತಾದ
ಆದಿತ್ಯವಾರ ಬೆಳಿತಾದ ಬಂತು ಬುಲು ಘೋರ
ವಿಭೂತ್ತಿನವರು ಸಿಗವಲ್ಲರು ಯಾರ್ಯಾರ
ಅವನಕ ಮೊದಲ ಕುಂಬಾರ ಒಬ್ಬ ಎದ್ದಿದ್ದ
ಜಳಕಾ ಮಾಡಿದ್ದ, ವಿಭೂತಿ ಹಚ್ಚಿದ್ದ ಧರ್ಮ ಪ್ರಕಾರ
ಮಣ್ಣು ತರಲಾಕ ಹೋಗಿದ್ದ ಕುಂಬಾರ"

ಒಕ್ಕಲಗರಿಗೆ ಹೊಲದಲ್ಲಿ 'ತತಿ' ಇದ್ದಾಗಲೇ ಬಿತ್ತುವ ಕಾರ್ಯ ಮುಗಿಯಬೇಕು ಎಂಬ ಒಂದು ಶಾಸ್ತ್ರ. ಆ ನಿಯಮದ ಪ್ರಕಾರ 'ತತಿ' ಇರುವುದು ಇನ್ನೊಂದು ದಿವಸ ಉಳಿದಿತ್ತು. 'ತತಿ'ಯ ಕೊನೆಯ ದಿನವು ರವಿವಾರ ಬಂದಿತ್ತು. ಬಿತ್ತುವ ಕಾರ್ಯ ಆದಿತ್ಯವಾರ. ಆಯ್ತು ಹೋಯ್ತು ಎಂಬಂತಾಗಬಾರದು. ಅದಕ್ಕೂ ಮೊದಲೇ ಮುಗಿಯಬೇಕು ಎಂಬ ಆಲೋಚನೆಯಲ್ಲಿಯೇ ಲಿಂಗಶೆಟ್ಟಿ ಮಧ್ಯ ರಾತ್ರಿಯಲ್ಲಿಯೇ ಎಚ್ಚರಗೊಂಡು ಎದ್ದು ಕುಳಿತ. ಹೊಲಕ್ಕೆ ಬಿತ್ತಲು ಹೋಗಬೇಕೆಂದು ಹವಣಿಸುತ್ತಿದ್ದ. ಇಷ್ಟು ರಾತ್ರಿ ತನಗೆ ವಿಭೂತಿ ಹಚ್ಚಿದವರು ಯಾರು ಸಿಗಬೇಕು ಗುರು ನನಗೆ ಎಂತಹ ಇಕ್ಕಟ್ಟಿಗೆ ಸಿಲುಕಿಸಿದ ಎಂದು ತಳಮಳಿಸ ತೊಡಗಿದ.

ಜಗತ್ತಿಗೆ ಅನ್ನ ನೀಡುವ ರೈತನ ಈ ಆಲೋಚನೆ ಸಾರ್ಥಕವಾಗಬೇಕಲ್ಲವೆ? ಲಿಂಗಶೆಟ್ಟಿ ಎದ್ದು ಕೆಲಸಕ್ಕೆ ಅಣಿಯಾಗುವ "ಮೊದಲೆ ಕುಂಬಾರ ಎದ್ದಿದ್ದ, ಜಳಕಾ ಮಾಡಿದ್ದ, ವಿಭೂತಿ ಹಚ್ಚಿದ್ದ, ಧರ್ಮದ ಪ್ರಕಾರ" ಕಾಯಕದೊಳಗ ತೊಡಗಿದ್ದ. ಈ ಶ್ರಮ ಜೀವಿ ಕುಂಬಾರಣ್ಣನ ಹಣೆಯ ಮೇಲೆ ಇದ್ದ ವಿಭೂತಿ ನೋಡಿ ಸಂತಸಪಟ್ಟ. "ಊರ ಮುಂದ ಹಳ್ಳದಾಗ ಹಡ್ಡುತ್ತಿದ್ದ. ಸಿಕ್ಕಿತ್ತ ಒಂದು ನಾಲ್ಕು ಸಾವಿರದ ನಗದ ರೂಪಾಯಿ ಭರಪೂರ" ಎಂದು ಕುಂಬಾರನು ಸಂತಸದಲ್ಲಿದ್ದ. ಇಲ್ಲಿ ಕವಿ ತೋರಿಸಿದ ಚಮತ್ಕಾರಕ್ಕೆ ನಾವು ಮೆಚ್ಚಲೇಬೇಕು.

"ಅಡ್ಡ ನಿಂತು ಲಿಂಗಶೆಟ್ಟಿ ಹಣಿಕಿಹಾಕಿ ನೋಡುವುದರಾಗ ಸಂಶಯಕ್ಕಾಗಿ ನೋಡುತ್ತಾರಂತ ಕುಂಬಾರ ತಿಳಿದಾನು ಈಗ ಸಿಗಬಾರದಂತೆ ಮಾರಿ ಮ್ಯಾಲ ಕಂಬಳಿ ಎಳಿದಾನು".

"ಲಿಂಗಶೆಟ್ಟಿ ಅಂತಾನ ಆಗ
ಇಷ್ಟಾಕ ಮಾರಿ ಮುಚಗೋತಿ ಕುಂಬಾರ
ಮೊದಲೆ ಎಲ್ಲಾ ನೋಡಿನ ಹೋಗೋ ಅಂದಾನ."

ನಿನ್ನ ಹಣಿಮ್ಯಾಲ ಹಚ್ಚಿದ ವಿಭೂತಿ ನಾನು ಮೊದಲೇ ನೋಡಿದ್ದೇನೆ. ಅನ್ನುವ ಅರ್ಥ ಲಿಂಗಶೆಟ್ಟಿಯದು. ನನಗೆ ಸಿಕ್ಕ ಗಂಟು ಮೊದಲೇ ನಾನು ನೋಡಿದ್ದೇನೆ ಅನ್ನುವ ಅರ್ಥ ಕುಂಬಾರನದು. ಖರೇನ ಈ ಸುದ್ದಿ.

"ಊರಾಗ ಹೋಗಿ ಹೇಳಿಗೀಳ್ಯಾನು" ಅಂತ ಕುಂಬಾರ ದಿಗಲು ಬಿದ್ದು ಯಾರ ಮುಂದೆ ಹೇಳಬ್ಯಾಡ" ಎಂದು ತನಗೆ ಸಿಕ್ಕ ಹಣದ ಸುದ್ದಿ ಕೇಳಿ "ಅರದಾ ಹಂಚಿಕೊಡಲಾ" ಎಂದು ಹೇಳಿ ಅರ್ಧ ಹಣ ಎಣಿಸಿ ಅವನ ಪದರಾಗ ಹಾಕಿದ.

"ಆ ರೂಪಾಯಿ ನೋಡಿ ಲಿಂಗಶೆಟ್ಟಿ ತನ್ನ ಮನಕ
ತಿಳಿದಾನು. ಆ ರೂಪಾಯಿ ವೈದು ದೇವರ ಜಗಲಿ

ಮ್ಯಾಲ ಇಟ್ಟಾನೋ ಸಾಯುತಾನ ಆದರೂ ನಾನು
ಇಷ್ಟ ರೂಪಾಯಿ ಕಾಣುದಿಲ್ಲ
ವಿಭೂತಿ ಪುಣ್ಯದಿಂದ ಹಣ ಕಂಡೇನು !
ಸ್ವತಃ ನಾನೇ ಹಚ್ಚಿದರ ಸುಖ
ಎಷ್ಟು ಉಂಡೇನು."

ಎನ್ನುವ ಪವಿತ್ರ ಭಾವನೆ ಲಿಂಗಶೆಟ್ಟಿಯ ಹೃದಯದಲ್ಲಿ. ಈ ಪವಿತ್ರ ಭಾವನೆ ಮೊಳಕೆಯೊಡೆಯಿತು. ಶ್ರಮ ಸಂಸ್ಕೃತಿ, ಕೃಷಿ ಹಿನ್ನೆಲೆಯಲ್ಲಿ ಬೆಳೆದು ಬಂದ ಕಡಣಿ ಕಲ್ಲಪ್ಪ 'ಲಿಂಗಶೆಟ್ಟಿ'ಯೆಂಬ ಕಥನ ಕವನ ಹೆಣೆದು ಮನುಷ್ಯನಿಗೆ ಒಳ್ಳೆಯ ನಡೆ-ನುಡಿ ಅವಶ್ಯ. ದಾನ-ಧರ್ಮ ಇಲ್ಲದವ ಮನುಷ್ಯನೇ ಅಲ್ಲ. ಅದರಲ್ಲಿಯೂ ದಯೆ-ಧರ್ಮ ಮನುಷ್ಯನ ಜೀವನದ ತಳಹದಿ. ಇವುಗಳನ್ನು ಬಿಟ್ಟು ನಡೆಯಬಾರದೆಂದು ಕವಿ ಕಲ್ಲಪ್ಪ ಹಾಡಿ ಜನವನ್ನು ತಿದ್ದಲು ಪ್ರಯತ್ನಿಸಿದ.

ಇಂದು ಭಾರತದೇಶ ಇಂಗ್ಲಿಷರ ಕಪಿ ಮುಷ್ಟಿಯಲ್ಲಿ ಸಿಲುಕಿ ವಿಲಿವಿಲಿ ಒದ್ದಾಡುತ್ತಲಿದೆ. ಭಾರತೀಯರಾದ ನಾವು ನಮ್ಮ ತನವನ್ನು ಕಾಯ್ದುಕೊಂಡು ಕನ್ನಡ ನಾಡಿನ, ಭಾರತ ದೇಶದ ವಿಭೂತಿ ಪುರುಷ ಬಸವಣ್ಣನವರು ಅಂದು ಬೋಧಿಸದ ಅಷ್ಟಾವರ್ಣ ತತ್ವದಂತೆ ನಡೆಯುವುದು ಬಹಳ ಅವಶ್ಯಕತೆಯಿದೆ ಎಂದು ಹೇಳುತ್ತ

"ನಿಜಭಕ್ತಿ ಇರಲಿ ನಿಜವಾಗಿ
ವಚನಕ್ಕ ಸರಿಯಾಗಿ ನಡಿರಿ ಒಂದಾಗಿ
ನಿಮ್ಮ ಊರಾಗ ಹೇಳುದಕ ಬಂದಿವ್ರಿ ಇಲ್ಲಿಗೆ"
ಎಂದು ಹಾಡುತ್ತ

ಕಾಸ ಕಣ್ಣೆ ಗ್ರಾಮದಲ್ಲಿ
ಈಶನ ದಯದಿಂದ
ಕೂಸು ಕಲ್ಲಣ್ಣ ಬಂದು ಈ ಕಥೆ ಹಳಿದ
ಕಂದ ಹೈದರ ಈರಣ್ಣ ಬಂದು
ಈ ಕವಿ ಬರೆದ ಹಾಡ ಹಾಡಿದರು.

ಕಲ್ಲಪ್ಪ ಬರೆದ ಈ ಕಥನ ಕವನ ಇಂದಿಗೂ ಜನಪ್ರಿಯವಾಗಿದೆ.

ಕೆಳಸ್ತರದಿಂದ ಕ್ಷತ್ರಿಯ ಕುಲದಿಂದ ಬಂದ ಕಲ್ಲಪ್ಪ ದಕ್ಷಿಣ ಸೋಲ್ಲಾಪುರ ತಾಲೂಕಿನ ಹೊಟಗಿ ಶ್ರೀ ಮಠದ ಬಾಲತಪಸ್ವಿ, ಷ. ಬ್ರ. ಚೆನ್ನವೀರ ಶಿವಚಾರ್ಯ ಗುರುಗಳಿಂದ ಲಿಂಗ ದೀಕ್ಷೆ ಪಡೆದು ಗುರುಪುತ್ರನೆಂದು ಪ್ರೀತಿ ಗಳಿಸಿದ್ದರು.

ಅಲ್ಲದೆ ವೀರಶೈವ ತತ್ವವನ್ನು ಚೆನ್ನಾಗಿ ತಿಳಿದುಕೊಂಡು ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ನಡೆಯುತ್ತಿದ್ದರು. ಇವರು ಬರೆದ ಸೊಲ್ಲಾಪೂರದ ಸಿದ್ಧರಾಮೇಶ್ವರ. ಕಲಬುರ್ಗಿ ಶರಣ ಬಸವೇಶ್ವರ ವಾರದ ಮಲ್ಲಪ್ಪನವರ ಗೀಗೀ ಹಾಡುಗಳು ಇಂದಿಗೂ ಪುಟಕ್ಕಿಟ್ಟ ಚಿನ್ನದಂತೆ ಕಂಗೊಳಿಸುತ್ತಿವೆ. ಇಲ್ಲಿ ಸೊಲ್ಲಾಪುರ ಸಿದ್ಧರಾಮೇಶ್ವರರ ಕಥನ ಕವನ ಅಥವಾ ಗೀಗೀ ಹಾಡು ಉದಾಹರಿಸಲಾಗಿದೆ.
■

# ಶರಣರ ಚರಿತ್ರೆಗಳನ್ನು ಹೆಣೆದು ಹಾಡಿದರು

ಹನ್ನೆರಡನೆಯ ಶತಮಾನದಲ್ಲಿ ಸಮಾಜ ಸುಧಾರಣೆಗಾಗಿ ಶರಣರು ಕೈಕೊಂಡ ಆರ್ಥಿಕ ಸ್ವಾವಲಂಬನೆ, ಕಾಯಕ ನಿಷ್ಠೆ, ದಾಸೋಹ ಮನೋಭಾವನೆ, ಸಮಾಜದಲ್ಲಿ ಸಮಾನತೆ, ಸ್ವಾತಂತ್ರ್ಯ ಕೊರತೆ ಎದ್ದು ಕಾಣುತಿತ್ತು. ಸಮಾಜದಲ್ಲಿ ಬೀಡು ಬಿಟ್ಟಿದ್ದ ಅಂಧಾನುಕರಣೆ ಮೂಢ ನಂಬಿಕೆ, ಗೊಡ್ಡು ಆಚರಣೆ ಕಂದಾಚಾರ ಮೇಲು-ಕೀಳು ಬಡವ-ಬಲ್ಲಿದರೆಂಬ ತಾರ ತಮ್ಯ ಹಾಸುಗಟ್ಟಿತ್ತು. ಇವುಗಳನ್ನು ಹೊಡೆದೋಡಿಸಲು 'ಗೀಗೀ' ಹಾಡಿನ ಕಡಣಿಯ ಕಲಪ್ಪ, 'ಅಣ್ಣ – ಬಸವಣ್ಣ', 'ಹರಳಯ್ಯ' 'ಸೊನ್ನಲಗಿಯ ಸಿದ್ಧರಾಮೇಶ್ವರ', 'ದ್ವಿತೀಯ ಶುಭವೆಂದು ಪ್ರಖ್ಯಾತರಾದ ಕಲಬುರ್ಗಿಯ 'ಶರಣಬಸವೇಶ್ವರ' ಸೂಫಿ ಸಂತ ಖಾಜಾ ಬಂದೇ ನವಾಜರನ್ನು ಕುರಿತು ಗೀಗೀ ಹಾಡುಗಳನ್ನು ರಚಿಸಿ ಅವರು ಮಾಡಿದ ಸಮಾಜ ಸೇವೆ, ಅವರು ಬಿತ್ತಿದ ಶರಣ ತತ್ವ, ಅವರು ಬದುಕಿಗೆ ನೀಡಿದ ಮಹತ್ವ, ಮನುಷ್ಯ-ಮನುಷ್ಯರಲ್ಲಿರಬೇಕಾದ ಪ್ರೀತಿ, ರೀತಿ, ನೀತಿ ಸರಸ-ಸಜ್ಜನಿಕೆ ಮುಂತಾದ ಗುಣಗಳನ್ನು ಗೀಗೀ ಪದಗಳಲ್ಲಿ ಹೆಣೆದು ಜಾತ್ರೆ-ಉತ್ಸವ-ಹಬ್ಬ-ಹರಿದಿನ ಖಾಂಡ-ಉರುಸುಗಳಂತಹ ವಿಶೇಷ ಸಂದರ್ಭಗಳಲ್ಲಿ ಹಾಡಿ ಜನರಿಗೆ ಮನರಂಜನೆಯ ಮೂಲಕ ಬದುಕಿನ ಮಹತ್ವವನ್ನು ಜನರ ಹೃನ್ಮನಗಳಲ್ಲಿ ಬಿತ್ತಿ ಬೆಳೆಯಲು ಪ್ರಯತ್ನಿಸಿದ. ಈ ದಿಸೆಯಲ್ಲಿ ಮೂಡಿ ಬಂದ ಸೊನ್ನಲಿಯ "ಸಿದ್ಧರಾಮನ-ಕಥನ" ಕವನ ಅತ್ಯಂತ ಜನಪ್ರಿಯವಾಗಿದೆ. ಇಂದಿಗೂ ಈ ಗೀಗೀ ಹಾಡು ಕಡಣಿಯ ಕಲ್ಲನ ಶಿಷ್ಯರು, ಇತರ ಗೀಗೀ ಹಾಡುಗಾರರು, ಈ ಹಾಡನ್ನು ಹಾಡಿ ಜನಪ್ರಿಯತೆಯನ್ನು ಗಳಿಸಿಕೊಳ್ಳುತ್ತಿದ್ದಾರೆ. ಭಕ್ತಿರಸದಿಂದ ತುಂಬಿ ತುಳುಕುತ್ತಿರುವ ಈ ಹಾಡಿನ ಸ್ವಾರಸ್ಯವನ್ನು ಇಲ್ಲಿ ಉದಾಹರಿಸಲಾಗಿದೆ.

ಕಡಣಿಯ ಕಲ್ಲಪ್ಪ ಗೀಗೀ ಹಾಡಿಗೆ ಪ್ರಾರಂಭಿಸುವ ಮೊದಲು ಒಂದು 'ಸಖಿ' ಗೀತೆ ಹಾಡಿ ಜನಮನವನ್ನು ಸೆಳೆದು ತಾನು ಹಾಡ ಬೇಕಾದ ಮುಖ್ಯ ಘಟ್ಟಕ್ಕೆ ಬರುತ್ತಿದ್ದ ಅವನು ಹಾಡಿದ 'ಸಖಿ' ಗೀತೆ ಅಷ್ಟೇ ಸ್ವಾರಸ್ಯವಾಗಿ ಲೋಕಾನುಭವದಿಂದ ತುಂಬಿಕೊಂಡಿದೆ.

"ಅಂಧಕರಿಗೆ ಬುದ್ಧಿಬಾಳ
ಪುರಾಣದಾಗ ನಿದ್ದೆ ಬಾಳ
ಹೆಣ್ಣು ಮಕ್ಕಳಲ್ಲಿ ಸುದ್ದಿ ಬಾಳ
ಇಲ್ಲೊಂದೊಂದು ಶೋಧಿಸಿ
ಬೈಲಕಡಿ ಕುಂತಲ್ಲಿ ಪುರಮಾಸಿ"

ಎಂದು ಡಪ್ಪು ನುಡಿಸಿ ಹಾಡುತ್ತ
ಜನಮನವನ್ನು ತನ್ನತ್ತ ಸೆಳೆಯುತ್ತ
"ಜಾಗಿರದಾರರಿಗೆ ಜಮೀನ ಬಾಳ
ಸಿರವಂತರಿಗೆ ಬಲಾ ಬಾಳ
ಸುಮಸುಮನ ತೋಳ ಏರಿಸಿ
ಲಗ್ನದಾಗ ಅಡಿಗೆ ಹೋಯ್ತು ಹಳಸಿ
ಕಲ್ಲಣ್ಣ ಅಂದ ಮಾಡ್ರಿ ಚೌಕಾಸಿ"

ಎಂದು ಸಮಾಜದ ವಾಸ್ತವ ಚಿತ್ರಣವನ್ನು ಬಿಚ್ಚಿ ಇಟ್ಟು ಚಪ್ಪಾಳೆಯ ಮೂಲಕ ಸಭಿಕರ ಒಪ್ಪಿಗೆ ಪಡೆದು ಹಾಡಲು ಪ್ರಾರಂಭಿಸುತ್ತಿದ್ದ. "ಕಲ್ಲಣ್ಣ ಅಂದ ಮಾಡ್ರಿ ಚೌಕಾಸಿ" ಎಂಬ ಮಾತಿನಲ್ಲಿ ಇಂದು ಎಚ್ಚತ್ತ ಸಮಾಜ ಎತ್ತ ಸಾಗಿದೆ. ಪರಾಮರ್ಶಿಸಿ ಮುನ್ನಡೆಯಬೇಕೆಂದು ತನ್ನ 'ಸಖಿ' ಗೀತೆಯಲ್ಲಿ ಹೇಳುತ್ತಾನೆ. 'ಸಖಿ' ಗೀತೆಯಲ್ಲಿಯೇ ಮನುಷ್ಯ ಸ್ವಭಾವವನ್ನು ಹದಗೊಳಿಸಿ ಹಾಡುವ ಕಲೆ ಕಣ್ಣಿಯ ಕಲ್ಲಪ್ಪನಿಗೆ ಕರಗತವಾಗಿತ್ತು.

"ಭಕ್ತಿ ತನ್ನಲ್ಲಿ ಪೂರ್ಣ ಇದ್ರು ಮುಕ್ತಿ ಸ್ಥಾನ ದೂರಿಲ್ಲ
ಸಾಂಬನೊಲಿಸಿಕೊಳ್ಳುವುದು ತನ್ನ ನಂಬಿಕೆ ಕಾರಣ
ಡಂಭಾಚಾರ ನಡಿಸಿದವರಿಗೆ ತಪ್ಪದು–ಜನನ–ಮರಣ
ಈ ಕುಂಬಿನಿಯೊಳ ಬೇಕಾದರೇ ದಿವ್ಯಚರಣ
ಪ್ರಾಣ ದಾಶೆ ಬಿಟ್ಟವನೀಗಿ ಪರಮೇಶ್ವರ
ಸಿಗತಾನ ಖರೆ
ಆಶಾ ನೀಗಿ ಅನಿಸಿಕೊಂಡ ಸತ್ಯಶರಣ
ಶುದ್ಧ ಭಾವದಿಂದ ಕೇಳಿರಿ ಸಿದ್ಧರಾಮನ ಪುರಾಣ
ಹಾ ಜೇ ಜೇ ಽಽ"

ಎಂದು ತುಂಬಿದ ಸಭೆಯಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರ ಹೆಗಲಿಗೆ ಹೆಗಲು ಕೊಟ್ಟು ಸಮಾಜಕ್ಕೆ ಹೊಸ ತಿರುವು ನೀಡಲು ಕಂಕಣ

ಬದ್ಧರಾದ "ಸಿದ್ಧರಾಮೇಶ್ವರ ಚರಿತ್ರೆ" ಶುದ್ಧ ಭಾವದಿಂದ ಕೇಳಿರಿ ಎಂದು ಕೈಂಕರ್ಯದಿಂದ ಹೇಳುತ್ತಾನೆ, ಕಡಣಿಯ ಕಲ್ಲಪ್ಪ.

ಈ ಚರಿತ್ರೆ ಪುರಾಣ ಆಧಾರದಿಂದ ಸಿದ್ಧ ಪಡಿಸಿದ್ದರೂ ವೈದಿಕ ದೃಷ್ಟಿಯನ್ನು ದೂರ ಇಟ್ಟು ಶುದ್ಧ ಜಾನಪದ ಶೈಲಿಯಲ್ಲಿ ಶರಣ ತತ್ವಕ್ಕೆ ಅನುಸರಿಸಿ ಈ ಗೀತೆ ರಚಿಸಲ್ಪಟ್ಟಿದೆ. ಪರಿಶುದ್ಧ ಭಕ್ತಿ, ಅಚಲ ನಂಬಿಕೆಯಿಂದ "ಪ್ರಾಣದಾಶೆ ಬಿಟ್ಟವನಿಗೆ ಪರಮೇಶ್ವರ ಸಿಗತಾನ" ಇದಕ್ಕೆ 'ಮಹಾಶಿವಶರಣ' ಸಿದ್ಧರಾಮನೇ ಸಾಕ್ಷಿ, ಎಂದು ಜನರಿಗೆ ಮನದಟ್ಟು ಮಾಡಿಕೊಡುತ್ತಾನೆ ತನ್ನ ಗೀಗೀ ಹಾಡಿನ ಮೂಲಕ.

ಈ ಪ್ರಪಂಚದಲ್ಲಿ ಆಶೆ–ಆಮಿಷೆಗಳನ್ನು ತೊರೆದವರೇ 'ಶರಣರು' 'ಯೋಗಿಗಳು'. ಇವರು ಹಾಕಿ ಕೊಟ್ಟ ಹಾದಿಯಲ್ಲಿ ಗುರುಲಿಂಗ, ಜಂಗಮ ಸೇವೆಯಲ್ಲಿ ನಿತ್ಯ ಕಾಯಕ–ದಾಸೋಹಗಳಲ್ಲಿ ನಿರತರಾಗಿದ್ದರು. ವೃದ್ಧ ದಂಪತಿಗಳಾದ, ಮುದ್ದುಗೌಡ, ಸುಗ್ಗಲದೇವಿ ಅವರು. ಇವರು ತಮಗೆ ಮಕ್ಕಳಾಗಲಿಲ್ಲ ಎಂಬ ಹಂಬಲದಲ್ಲಿ ಕೊರಗಿ ಮರುಗುತ್ತಿದ್ದರು. ಇವರ ಪವಿತ್ರ ಭಾವನೆಗೆ, ಸ್ವಾತಿಕ ಚಿಂತನಗೆ ಶಿವನೇ ಪ್ರತ್ಯಕ್ಷನಾಗಿ ನಿಮ್ಮ ಹೊಟ್ಟೆಯಿಂದ "ಒಬ್ಬ ಸತ್ಪುರುಷ ಹುಟ್ಟಿ ಬರುತ್ತಾನೆಂದು ಹೇಳುತ್ತಾರೆ". ಆಗ ಮುದ್ದು ಗೌಡ ಸುಗ್ಗಲಾದೇವಿ ದಂಪತಿಗಳು

"ಮುಪ್ಪಾನ ಮುದುಕರು ನಾವು, ಮಕ್ಕಳ ಕಾಣುವ ಬಗೆ ಹ್ಯಾಂಗ
ಮೈಯೊಳಗ ನಮಗಿಲ್ಲ ಚೇತನ
ದೊಡ್ಡ ಶರಣ ಕಾಣಸ್ತಿರಿ
ಸುಳ್ಳ ಆಡಾದ । ಏನು ಕಾರಣ?"
ಎಂದು,

ಜನಸಾಮಾನ್ಯರಿಗೆ ತಿಳಿಯುವಂತೆ ಅಪ್ಪಟ ದೇಶಿಯ ಭಾಷೆಯಲ್ಲಿ ಹಾಡು ರಚನೆ ಮಾಡಿ ಡಪ್ಪು ಬಾರಿಸಿ ಹಾಡುವ ಕಲ್ಲಪ್ಪನ ಗೀಗೀ ಹಾಡು ಅನಕ್ಷರಸ್ಥರಿಗೂ ತಿಳಿಯುತ್ತಿತ್ತು. ತಿರುನೀಲಕಂಠ ಮತ್ತು ಅವನ ಧರ್ಮ ಪತ್ನಿ ತೀರ್ಥ ಕುಂಡದಲ್ಲಿ ಮುಳಿಗೆದ್ದು ವೃದ್ಧಾಪ್ಯವನ್ನು ನೀಗಿದಂತೆ, ಇಲ್ಲಿಯೂ ವೃದ್ಧರಾದ ಸುಗ್ಗಲಾದೇವಿ, ಮುದ್ದುಗೌಡರು ಜಂಗಮ ವೇಶದಲ್ಲಿ ಬಂದ ಶಿವನ ಆಜ್ಞೆಯಂತೆ, ತೀರ್ಥಕುಂಡದಲ್ಲಿ ಮಿಂದು ಮಡಿಯುಟ್ಟು ಹೊಸ ಚೈತನ್ಯವನ್ನು ಪಡೆಯುತ್ತಾರೆ. ಅವರ ಹೊಟ್ಟೆಯಿಂದ ಸಿದ್ಧರಾಮ ಜನಿಸಿ ಬರುತ್ತಾನೆ. ಅವನ ಜನನ ವಾರ್ತೆ ಕೇಳಿ ಪಾರ್ವತಿ, ಸರಸ್ವತಿ, ಲಕ್ಷ್ಮಿ ಮೂವರು ಕೂಡಿ ಸ್ವರ್ಗ ಲೋಕದಿಂದ ಈ ಭೂಲೋಕಕ್ಕೆ ಬರುತ್ತಾರೆ. ಆಗ ಮರ್ತ್ಯಲೋಕವೇ ಕೈಲಾಸವೆಂಬಂತೆ ಕಾಣುತ್ತಿತ್ತು. ಮಧ್ಯರಾತ್ರಿ ಸುಗ್ಗಾದೇವಿ ಮಗುವಿಗೆ ಜನ್ಮ ನೀಡಿ ಮಲಗಿದ್ದನ್ನು ನೋಡಿದರು. ಮಗುವಿನ ಮುಖದ ಮೇಲೆ ಲಾಸ್ಯವಾಡುತ್ತಿದ್ದ 'ಲಿಂಗ ಕಳೆ' ಕಂಡು ಸಂತೋಷಪಡುತ್ತಾರೆ.

"ಸಿದ್ಧರಾಮನೆಂದು ಕೂಗ್ಯಾರು ನಿಂತ ಹೊರಗ
ಸ್ವತಃ ನಿಂತು ತೊಟ್ಟಿಲದಾಗ ಹಾಡ್ಯಾರ ಆತಗ"
ಎಂದು ಹೆಮ್ಮೆಯಿಂದ ಹಾಡುತ್ತಾನೆ.

ಈ ಮಗು ನಿಜವಾಗಿಯೂ ಮುಗ್ಧ ತನ್ನ ವಯಸ್ಸಿನಲ್ಲಿ ಆರು ವರುಷದವರೆಗೆ ಮೌನವಾಗಿಯೇ ಇದ್ದು ತಾಯಿ-ತಂದೆ ಎಷ್ಟು ಪ್ರಯತ್ನಿಸಿದರೂ ಅವನಿಗೆ ಮಾತನಾಡಲಿಕ್ಕೆ ಆಗಲೇ ಇಲ್ಲ. ಮೌನಿ ಆದ ಬಾಲಕ ಮನೆಯಲ್ಲಿದ್ದ ಆಕಳುಗಳನ್ನು ಹೊಡೆದುಕೊಂಡು ಹೊಲದ ಕಡೆ ಹೋಗುತ್ತಿದ್ದ. ಹೊಲದಲ್ಲಿ ಗೋವುಗಳ ಸಂಗಡ ಮೌನವಾಗಿಯೇ ಇರುತ್ತಿದ್ದ. ನಿಜಸ್ಥಿತಿ ಏನು ಅನ್ನುವುದು ಯಾರಿಗೂ ತಿಳಿಯುತ್ತಿರಲಿಲ್ಲ. ಬಾಲಕ ತನ್ನಷ್ಟಕೆ ತಾನೇ ಮೌನ ಮೊಗ್ಗೆ ಒಡೆದು 'ಮಾತು' ಒಂದು ಹೊರಬಂದಿತು, ತನ್ನ ಇಷ್ಟ ದೇವತೆಯಾದ ಗುರು ಎಂದು ದೊರೆತಾನು ಎಂದು ಸ್ಮರಿಸುತ್ತ.

"ಆಕಳು ತಗೊಂಡು ಹೊಲಕ ಹೋಗಿದ್ದ ಮೊದಲ ಸುರುವೀಗ
ಎಂದು ಕಂಡೇನೆಂದು ಮುಕ್ತಿ ಅಂದ ಬೇಡಿದ ಗುರುವೀಗ
ಹಾಂ ಜೀ ಜೀ"s

ಗುರುಧ್ಯಾನದಲ್ಲಿ ಕಾಲ ಕಳೆಯುತ್ತಿದ್ದ ಸಿದ್ಧಯ್ಯನ ಮುಗ್ಧ ಭಕ್ತಿಗೆ ಮೆಚ್ಚಿ

"ಮಲ್ಲಿಕಾರ್ಜುನನ ಅವತಾರ ತೊಟ್ಟ ಶಿವಭಕ್ತ ಸಂಜೀವ
ಬಂದ ಅವನ ಮಡದಿ ಕರ್‍ಕೊಂಡ ಅವನ ಹೊಲಕ"

ಮಲ್ಲಿಕಾರ್ಜುನನ ರೂಪು ಧರಿಸಿ ತನ್ನ ಹೆಂಡತಿ ಗಂಗಾದೇವಿಯೊಂದಿಗೆ ಹೊಲದಲ್ಲಿ ಸಿದ್ಧರಾಮನನ್ನು ನೋಡುತ್ತಾರೆ. ಅವನ ಮೈಮೇಲೆ ಕೈಯಾಡಿಸಿ ಹತ್ತಿರ ಕುಳ್ಳಿರಿಸಿಕೊಳ್ಳುತ್ತಾರೆ. ಆಗ ಸಿದ್ಧರಾಮ

"ನಿಮ್ಮ ನಾಮಕರಣ ಏನ್ರಿ ದೇವಾ
ಆಗೇದೇನೋ ಹಸುವಾ ಮಾಡ್ತ ನಿಮ್ಮ ಸೇವಾ
ಕಬ್ಬು - ಶೀತನಿ ತರತೀನಿ ತಿಲ್ಲಾಕ"

ಎಂದು ಸಿದ್ಧರಾಮ ವಿನಯದಿಂದ ಅವರು ಹೆಸರು ವಿಳಾಸ ಕೇಳುತ್ತಾನೆ.

"ಇಷ್ಟು ಕೇಳಿ ಮಲ್ಲಯ್ಯ ಅಂದು
ಇಷ್ಟು ದಯಾಳು ಗುಣದಾಂವ ಹುಡುಗ
ಸೃಷ್ಟಿಯೊಳಾಗ ಕಾಣಲಿಲ್ಲ ಇಂತಹ ತರುಣ
ಪೂರ್ಣ ವಿಚಾರ ಮಾಡಿ ನೋಡಿ ಕಂಡ ಈತನ ಗುಣ"

ಕಲ್ಲಪ್ಪನ ಗೀಗೀ ಹಾಡು ಆಡು ಭಾಷೆಯ ಅಮೃತ ಎಲ್ಲರಿಗೂ ತೃಪ್ತಿ ನೀಡುತ್ತದೆ.

"ಇಷ್ಟು ದಯಾಳು ಗುಣದಾವ ಹುಡುಗ ಸೃಷ್ಟಿಯೊಳಗ ಕಾಣಲಿಲ್ಲ ಇಂತಹ ತರುಣ" ಎಂದು ಹಾಡುತ್ತ ಇಂತಹ ಮಕ್ಕಳು ದೇಶೋದ್ಧಾರಕ್ಕಾಗಿಯೇ ಹುಟ್ಟಿ ಬರುತ್ತಾರೆ ಎಂದು ಸಿದ್ಧರಾಮೇಶ್ವರರ ತಿಳಿಯಾದ ಕನ್ನಡ ಭಾಷೆಯಲ್ಲಿ ಹತ್ತಿಯ ತೊಳೆ ಬಿಡಿಸಿದಂತೆ ಬಿಡಿಸಿ ಹೇಳುತ್ತಾನೆ. ಆ ಅಪರಿಚಿತ ದಂಪತಿಗಳನ್ನು ಸತ್ಕರಿಸುತ್ತ ಸಿದ್ಧರಾಮನು ನೀವು ಯಾರು, ಎಲ್ಲಿಂದ ಬಂದಿರಿ ? ಎಲ್ಲಿಗೆ ಹೋಗುತ್ತೀರಿ? ಎಂದು ಪ್ರಶ್ನಿಸುತ್ತಾನೆ.

"ನನ್ನ ಹೆಸರು ಮಲ್ಲಯ್ಯನವರು
ಜಾತಿಯಿಂದ ಜಂಗಮರು
ಮಡದಿ ಹೆಸರು ಗಂಗಾದೇವಿ"

ಎಂದು ಒಂದೇ ಉಸುರಿನಲ್ಲಿ ಹೇಳುತ್ತಾನೆ. ಆಗ ಬಾಲಕ ಸಿದ್ಧರಾಮ ಅವರಿಗೆ ತಿನ್ನಲ್ಲಿಕ್ಕೆ ಹೊಲದೊಳಗಿದ್ದ ಕಬ್ಬು-ಸೀತನಿ ಸುಲಗಾಯಿ ತಂದು ಕೊಡುತ್ತಾನೆ.

"ತಿನ್ನುದೆಲ್ಲ ಆದ ಮ್ಯಾಲ ತಣ್ಣನ ಮಗಿ ನೀರು ತಂದುಕೊಟ್ಟ
ನೀರು ಕುಡಿದ ಮ್ಯಾಲ ಮಲ್ಲಯ್ಯನವರು ನೆಲಕ ಬಿದ್ದಾರ
ಹೊಟ್ಟಿ ಉರುಪ ಇಟ್ಟದಂತ ಉರುಳಾಡುತ್ತಿದ್ದನು.
ಮಡದಿ ಗಂಗಾದೇವಿ ದುಃಖ ಅಂತ ಹೇಳಲಾರೆನು
ಗಾಬರ್‍ಯಾಗಿ ಸಿದ್ಧರಾಮ ಅರುಹಾರಿ ಕೇಳತಾನ
ಏನ ಬೇಕರಿ ಸ್ವಾಮಿ ನಿಮಗೆ ತಂದುಕೊಡುವೆನು
ನೀವು ಹೇಳದಿದ್ರ ನನ್ನ ಪ್ರಣ ಇಲ್ಲೆ ಬಿಡುವೆನು".

ಇಲ್ಲಿಂದಲೇ ಸುರುವಾಯಿತು. ಪ್ರಾಣ ಬಿಡಲಿಕ್ಕೂ, ಪ್ರಾಣ ಕೊಡಲಿಕ್ಕೂ ಸಿದ್ಧ ಎನ್ನುವ ಮಾತು. ನಿಮಗ ಏನು ಬೇಕು ಮೊದಲ ಹೇಳಿರಿ, ನಾನು ತಂದು ಕೊಡುತ್ತೇನೆ. ಒಂದು ವೇಳೆ ತಂದು ಕೊಡುವುದು ಸಾಧ್ಯವಾಗದಿದ್ದರೆ ನನ್ನ ಪ್ರಾಣವನ್ನು ಕೊಟ್ಟು ನಿಮ್ಮ ಪ್ರಾಣ ಉಳಿಸುತ್ತೇನೆ ಎಂದು ಪ್ರಾಣ ಕೈಯಲ್ಲಿಯೇ ಹಿಡಿದುಕೊಂಡೆ ಮಾತನಾಡಿದ ಮುಗ್ಧ ಬಾಲಕ ಸಿದ್ಧರಾಮ.

"ಆ ಬಾಲ ಸಿದ್ಧರಾಮನ ಮಾತು ಕೇಳಿ ಮಲ್ಲಯ್ಯನವರು ಅಂತಾರ

ಏನು ಹೇಳಲಿ ಸಿದ್ಧರಾಮ ಹೇಳಲಾರೆನು
ಹೊಟ್ಟ್ಯಾಗಿಟ್ಟ ಭೆಂಕಿ ಅಂತ ನಾನು ತಾಳಲಾರೆನು
ಸ್ವಲ್ಪ ಕೈ ಸನ್ನೆ ಮಾಡಿ ಆವನಿಗ ಮುಂದ ತಂದಾನು
ಅರ್ಧ ತಾಸಿನೊಳಗ ನೀನು ಅನ್ನ-ಮೊಸರು ತಂದು ಕೊಡು

ಆತ್ಮ ಶಾಂತಿಗಾಗಿ ನಾನು ಉಂಡ ಏಳುವೆನು
ನೀ ತರಾಣಿದ್ದರ ನಾನು ಪ್ರಾಣ ಹೋಗಿ
ಇಲ್ಲೇ ಬೀಳುವೆನು."

ಮುಗ್ಧ ಬಾಲಕ ಸಿದ್ಧ, ಸಿದ್ಧರಾಮ, ಮಲ್ಲಯ್ಯನವರಿಗೆ ಹೇಳುತ್ತಾನೆ. ಇದು ಯಾವ ದೊಡ್ಡ ಮಾತು. ಕೂಡಲೇ ಹೋಗಿ ನಾನು ಅನ್ನ-ಮೊಸರ ಬುತ್ತಿ ತರುತ್ತೇನೆ ಎಂದು ಮನೆಗೆ ಓಡಿ ಬಂದು ತನ್ನ ತಾಯಿಗೆ

"ಸಿದ್ಧರಾಮ ಓಡಕೊಂಡ ಮನಿಗೆ ಹೋದ
ಅನ್ನ-ಮೊಸರು ಬುತ್ತಿ-ಕಟ್ಟಂತ ತಾಯಿಗೆ ಹೇಳಿದನು
ಆ ಬುತ್ತಿ ಕಟ್ಟಿಸಿಕೊಂಡು ಓಡಿಕೊಂತ ಹೊಲಕ ಬಂದಿದ್ದನು
ಆಂವ ಬರುದ್ರಾಗ ಮಲ್ಲಯ್ಯನವರು ಮಾಯ ಆಗಿದ್ರು"

ಆರು ವರುಷಗಳಿಂದ ಮಾತನಾಡದೆ ಮೌನವಾಗಿದ್ದ ಸಿದ್ಧರಾಮ ಓಡಿ ಬಂದು ಒಮ್ಮೆಲೆ "ಅವ್ವಾ" ಅನ್ನ-ಮೊಸರು' ಬುತ್ತಿ ಕಟ್ಟಿಕೊಡು ಎಂದು ಕೇಳಿದ ಮುದ್ದು ಬಾಲಕ ಸಿದ್ಧರಾಮನ ಬಾಯಿಯಿಂದ ಬಂದ ನುಡಿಮುತ್ತ ಕೇಳಿ ತಾಯಿಗೆ ಎಲ್ಲಿಲ್ಲದ ಹರುಷವಾಯಿತು. ಮಗನನ್ನು ಎತ್ತಿ ಮುದ್ದಾಡಿ ಅನ್ನ-ಮೊಸರು, ಬುತ್ತಿ ಕಟ್ಟಿ ಕೊಡುತ್ತಾಳೆ. ಮನೆಯಲ್ಲಿ ಒಂದರಗಳಿಗೆ ನಿಲ್ಲದೆ ಹೊಲಕ್ಕೆ ಓಡಿ ಬಂದು ಎಲ್ಲ ಕಡೆಗೂ ನೋಡುತ್ತಾನೆ

"ಮೊದಲ ಕುಂತ ಜಾಗ ನೋಡಿ ಹೊಲಯೆಲ್ಲ ತಿರುಗಾಡಿ
ಸಣ್ಣ ಹುಡುಗ ಕಣ್ಣು ತುಂಬಾ ನೀರು ತಂದಾನ
ಮಗನೆ – ಮಗನೆ ಅಂತ ಜಂಗಮ ನನ್ನ ಪ್ರಾಣ ಕೊಂದಾನ"

ಎಂದು ಮುಗ್ಧ ಬಾಲಕ ಸಿದ್ಧರಾಮ ಮನಸ್ಸಿನಲ್ಲಿ ಮುಮ್ಮಲ ಮರಗುತ್ತ ಹೊಲದ ತುಂಬಾ ಬೋರ್‍ಯಾಡಿ ಅಳುತ್ತಾನೆ. ಮುಗಿಲಕಡೆ ಮುಖಮಾಡಿ ಸುತ್ತೂ ಕಡೆ ಕಣ್ಣಾಡಿಸಿ ಎಲ್ಲಿಯೂ ಮಲ್ಲಯ್ಯನನ್ನು ಕಾಣದೆ ನಿರಾಶನಾಗುತ್ತಾನೆ. "ಅನ್ನ-ಮೊಸರ ಬುತ್ತಿ ಬೇಡಿದವನು ಸಾಮಾನ್ಯನಲ್ಲ. ಮಹಾತ್ಮರೆಂದು ತಿಳಿದು ನೆರೆ ಹೊಲದವರಿಗೆ ಕೇಳಿ ನೋಡುತ್ತಾನೆ". ಮೊಸರು-ಅನ್ನ ಬುತ್ತಿ ತರಲು ಹೇಳಿ ನನಗೆ ಮನೆಗೆ ಕಳಿಸಿ ತಾನು ಎಲ್ಲಿಗ ಹೋದ ಎಂದು ಕೇಳುತ್ತಾನೆ. ಆಗ ನೆರೆಹೊಲದ ಮಾಲಿಕ "ಯಾಕ ಅಳತಿ ಸಿದ್ಧರಾಮ ಇಂತಹ ಐಗೊಳ ಪನ್ನಾಸ ಬರುತಾರ ನಾಳಿಗೆ ನೋಡನು" ಎಂದು ಸಹಜವಾಗಿ ಹೇಳುತ್ತಾನೆ. ಇಂತಹ ಸಹಜ ಮಾತಿಗೆ ಸೊಪ್ಪು ಹಾಕುವ ಬಾಲಕನಲ್ಲ ಬಾಲಕ ಸಿದ್ಧರಾಮ. ತನ್ನ ಹಸಿದ ಹೊಟ್ಟೆಗೆ ಕಡೆಗೆ ಗಮನಕೊಡದೆ ನಿದ್ದೆ-ನೀರಡಿಕೆಯನ್ನು ಮರೆತು ತನ್ನ ಮನದಲ್ಲಿ ಮನೆ ಮಾಡಿದ್ದ ಮಹಾತ್ಮನ ನಾಮಸ್ಮರಣೆ ಮಾಡತ್ತ ಪ್ರಾಣವನ್ನು ಪಣಕಿಟ್ಟ.

"ತಾಯಿ – ತಂದೆ ಬಂದು – ಬಳಗ ನನ್ನ ತನ್ನವರ ಆಶೆಯಿಲ್ಲ
ಅವರೀಗ ಬಿಟ್ಟು ಸೇರಿಕೊಂಡ ಅಟ್ಟ ಅರ್ಣ್ಯಾ
ಸಣ್ಣ ವಯಸ್ಸಿದ್ದಾಂವ ಹುಡುಗ ಓಡ್ಯಾಡಿ ಆದ ಹೈರಾಣ
ಈ ಕುಂಬಿನಿಯೊಳು ಕಾಣಬೇಕಾದ್ರ ದಿವ್ಯಾಚರಣ"

ಹೊಲದಲ್ಲಿ ದನ–ಕರುಗಳನ್ನು ಕಾಯ್ದುಕೊಂಡು ಮೌನವಾಗಿ ಕಾಲ ಕಳೆಯುತ್ತಿರುವ ನನ್ನನ್ನು "ಕಂದಾ, ಕಂದಾ" ಎಂದು ಕರೆದು ಪ್ರೀತಿಸಿ ಮೈದಡವಿ ಮುದ್ದಾಡಿ ಸೀತನಿ–ಸುಲಗಾಯಿ ತಿಂದು ಹೊಟ್ಟೆ ನೋಯುತ್ತದೆಯೆಂದು ಹೊರಳಾಡಿ ಮೊಸರು–ಅನ್ನ ಬೇಕೆಂದು ಹೇಳಿ ನನ್ನನ್ನು ಮನೆಗೆ ಕಳಿಸಿ ತಾನು ಈ ಅಡವಿಯಲ್ಲಿ ಕಾಣದಂತೆ ಆದನಲ್ಲ ಎಂದು ಬಿಕ್ಕಿ ಬಿಕ್ಕಿ ಅಳುತ್ತ ಅಡವಿಯಲ್ಲಿ ಸುತ್ತಾಡತೊಡಗಿದ. ಅದೇ ದಾರಿಯಲ್ಲಿ

"ಆರೇಳು ಜಂಗಮರು ಕೂಡಿ ಹೆಗಲಮ್ಯಾಲ ಕವಡಿಹೊತ್ತು
ಹಾದಿ ಹಿಡಿದು ಹೊಂಟಿದ್ರಲ್ಲಾ ಅದೇ ಯಾಳೇಕ್ಕ
ಶ್ರೀ ಮಲ್ಲಯ್ಯ ಮಲ್ಲಯ್ಯ 'ಘೇ ಎನ್ನುತ್ತ
ಆಗ ಸಿದ್ಧರಾಮ ಓಡಿ ಬಂದು ಅವರೀಗ ಕೇಳುದಕ್ಕ
ಮಲ್ಲಯ್ಯ' ಎಂಬವನ ಹೆಸರು ಉಸಿರಿದಂತೇನ
ಕಾರಣ, ವಸ್ತಿಯಲ್ಲಿ ಮಲ್ಲಯ್ಯ ಇರತಾನ ಯಾವ ಸ್ಥಲಕ
ನೀವು ಹೇಳಿ ಕೊಟ್ಟರ ಕೋಟಿ ಪುಣ್ಯ ನಿಮ್ಮ ಪಾಲಕ"

ಹೀಗೆ ನಡೆದು ಹೋದ ಬಾಲಕ ಸಿದ್ಧರಾಮನ ಚರಿತ್ರೆಯನ್ನು ಕತಿಮಾಡಿ ಹೇಳಿ ಜನರಲ್ಲಿ ಭಕ್ತಿರಸವನ್ನು ಹುಟ್ಟಿಸುತ್ತಿದ್ದ ಶಿವ ಕವಿ, ಗೀಗೀ ಹಾಡುಗಾರ ಕಡಣಿಯ ಕಲ್ಲಪ್ಪ.

ಬಾಲ ಸಿದ್ಧರಾಮ ಕವಡಿಗೊಳ ಸಂಗಡ ಮಲ್ಲಯ್ಯನನ್ನು ನೋಡುವುದಕ್ಕಾಗಿ ಶ್ರೀಶೈಲಕ ಬಂದ. ಗುಡಿಯೊಳಗಿನ ಕಲ್ಲು ನೋಡಿ ದಂಗಾಗಿ ನಿಂತ.

"ಮಲ್ಲಯ್ಯ ಅಂದ್ರ ನನ್ನಂಗ
ಕೈ ಕಾಲು ಕಣ್ಣು ಮೂಗು ಶರೀರ ಆತಗ
ಕನ್ನಡ ಭಾಷೆಯಲ್ಲಿ ಹಾಸ್ರಿ ಅಸಲ.
ಅವನ ರೂಪ ಬಿದ್ದಾಂಗ ಬಿಸಲ.

ತಾನು ಕಾಣಬೇಕಾದುದು ಈ ಕಲ್ಲನ್ನಲ್ಲ. ತನ್ನಂತೆ ಇರುವ ಮನುಷ್ಯನನ್ನು. ತನಗಿಂತಲೂ ಶ್ರೇಷ್ಠನಾದ ಮಹಾತ್ಮನನ್ನು. ಅವನು ಆಡುವ ಭಾಷೆ ಅಚ್ಚ ಕನ್ನಡ, ಕಡಣಿಯ ಕಲ್ಲಪ್ಪ ಹಾಡುತ್ತಾನೆ. ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಮಟ್ಟ

ಮಾಯವಾದಂತೆ ಸಿದ್ಧರಾಮನ ಪಾಲಿಗೆ ಮಲ್ಲಯ್ಯ ಮಟ್ಟ ಮಾಯವಾಗಿದ್ದ. ಈಗ ಸಿದ್ಧರಾಮಯ್ಯನಿಗೆ ಅಚ್ಚಕನ್ನಡ ಮಾತನಾಡುತ್ತ ಮಲ್ಲಯ್ಯ ಸಿಗಲೇಬೇಕು. ಈ ಹಟದಿಂದ ಸಿದ್ಧರಾಮ ಹಿಂದೆ ಸರಿಯಲಾರ.

ಕವಿ ಕಲ್ಲಪ್ಪನ ದೃಷ್ಟಿಯಲ್ಲಿ ಕನ್ನಡ ಕನ್ನಡಿಗರ ಮಾತೃಭಾಷೆ ಅಷ್ಟೇ ಅಲ್ಲ. ಕನ್ನಡ ಕನ್ನಡಿಗರ ಬದುಕು, ಆಸ್ತಿ ಸಭ್ಯತೆ, ಸಂಸ್ಕೃತಿ ಶ್ರೀ ಶೈಲ ಚನ್ನಮಲ್ಲಿಕಾರ್ಜುನ ಮಾತನಾಡುವ ಭಾಷೆ. ಕನ್ನಡ ಅಂತಹ ದೇವ ಮಾನವನೊಡನೆ ಮಾತನಾಡಿದ್ದೇನೆ. ಅವನನ್ನೂ ನಾನು ಮತ್ತೊಮ್ಮೆ ಕಾಣದೇ ಅವನೋಡನೆ ಮಾತನಾಡದೆ ನಾನು ಬಿಡುವುದಿಲ್ಲ ವೆಂದು ಪಣತೊಟ್ಟ.

"ಮಲ್ಲಯ್ಯನ ಕಾಲಾಗ ತನ್ನ ಪ್ರಾಣಹ್ವಾದರೂ ಚಿಂತಿಯಿಲ್ಲ
ಪೂರ್ಣ ವಿರಕ್ತ ತೊಟ್ಟ ನಿಂತ ತನ್ನ ಮನದಾಗ".

ಶ್ರೀಶೈಲ ಗುಡ್ಡದಲ್ಲಿ ಮಲ್ಲಯ್ಯ, ಮಲ್ಲಯ್ಯ, ಎಂದು ಹಲುಬತ್ತ ಕನ್ನಡ ಭಾಷೆಯಲ್ಲಿ ಅವನನ್ನು ಕರೆಯುತ್ತ ಓಡಾಡ ತೊಡಗಿದ.

"ಗಿರಿ ಏರಿ ಶಿಖರ ಮ್ಯಾಲಿಂದ ನೋಡಿದ ಕೆಳಗ
ಒಂದು ಕಲ್ಲು ತಗೊಂಡು ಜಿಗಿದಿದಾನ್ರಿ ಕಮರಿಕೊಳದಾಗ
ಆ ಕಲ್ಲು ಬಂದು ಬಿತ್ತು ತಾಸಿನ ಮ್ಯಾಗ
ಕಂದು ಕೊರಳದಾಂವ ಸಿಗೂದಿಲ್ಲ ಬಂದಾನು ಬಿಟ್ಟ ಸುಖವಿಲ್ಲ
ಹಿಂದ-ಮುಂದ ನೋಡಬಾರದು ನಾನು ಇದರಾಗ
ಹಿಂದಕ ಮೂರು ಮಾರ ಸರಿದು ಓಡಿ ಬಂದು
ಹಾರ್‍ಯಾನದರಾಗ"

ಯತಾರ್ಥ ಹುಡುಗ, ಮುಗ್ಧಬಾಲಕ, ಹಿಂದು-ಮುಂದು ನೋಡಲಾರದೆ ತಾಯಿ-ತಂದೆಯನ್ನು ನೆನಸದೆ "ಮಲ್ಲಯ್ಯ ಮಲ್ಲಯ್ಯ." ಎಂದು ಕಮರಿಕೊಳ್ಳಕ್ಕೆ ಹಾರುತ್ತಾನೆ.

"ಕಲ್ಲಿನ ಮ್ಯಾಲಿಂದ ಹಾರುದರಾಗ
ಮಲ್ಲಯ್ಯನವರು ಅಲ್ಲೇ ಇದ್ರು
ಜಲ್ದಿ ಮಾಡಿ ಅಪ್ಪಗೊಂಡ ತನ್ನ ತೆಕ್ಕ್ಯಾಗ
ಏನು ಘಾತ ಮಾಡಿದ್ಯೊ ಸಿದ್ಧರಾಮ ಅಪವಾದಭವದಾಗ"

ಎಂದು ಸಿದ್ಧರಾಮನನ್ನು ತೆಕ್ಕೆಯಲ್ಲಿ ತೆಗೆದುಕೊಂಡು ಮಾತನಾಡುತ್ತಿರುವಾಗ ಬಾಲಕ ಸಿದ್ಧರಾಮ

"ಸ್ವಾಮಿ ಸಾಕು ನಿನ್ನ ಸಾದೃಶ್ಯ
ಸುಳ್ಳ ಜಂಗಮ ಏನು ಕೊಡ್ತಿ ನೀನನಗ
ಮೊದಲ-ಅನ್ನ-ಮೊಸರಾ ಊಟ ಮಾಡು
ಬಿಡತ ನಿನಗ ಹಾಂ ಜೀ ಜೀss"

ಎಂದು ಬಾಲಕ ದೇವರೊಡನೆ ಮಾತನಾಡುವುದನ್ನು ಕವಿ ಕವಿತೆಮಾಡಿ ಹಾಡಿ ಹೇಳಿದ.

"ದೇವರನ್ನು ಒಲಿಸಬೇಕಾದರ ಇರಬೇಕ್ರಿ ಇಂತಾ ಭಕ್ತಿ" ಎಂದು ಜನರಿಗೆ ಹೇಳಿ ಅವರ ಮನ ಪರಿವರ್ತನ ಮಾಡುತ್ತಿದ್ದ. ಬ್ರಿಟಿಷ ಭಾರತದಲ್ಲಿ ಜನ ತಾನು ತನ್ನವರು ಎಂಬ ಅರಹು ಇಲ್ಲದೆ ತಿರುಗುತ್ತಿದ್ದ ಕಾಲದಲ್ಲಿ ಇಂತಹ ಶರಣರ ಚರಿತ್ರೆ ಹೇಳಿ ಅವರನ್ನು ದಾರಿಗೆ ತರುತ್ತಿದ್ದ, ಕಡಣಿಯ ಕಲ್ಲಪ್ಪ.

"ಕಾಸ ಕಡಣಿ ಗ್ರಾಮದಲ್ಲಿ ಈಸನ ದಯದಿಂದ
ಕೂಸ-ಕಲ್ಲಣ್ಣ ಮಾಡಿ ಹೇಳಿದ ಈ ಕೀರ್ತಿನ"

ಸಮಾಜ ಬಹಳ ದೊಡ್ಡದು. ದೈವ ದೇವರ ಸಮಾನ". ಈ ದೈವದ ಮುಂದ ಕವಿ ಕಲ್ಲಣ್ಣ ನಿಮ್ಮ 'ಕೂಸು' ಎಂದು ಹೇಳಿಕೊಳ್ಳುತ್ತಾನೆ. ಇಂತಹ ಕಿಂಕರ ಭಾವದಿಂದ ಶಂಕರನ ಚರಿತ್ರೆಯನ್ನು ಅವನ ಮಹಿಮೆಯನ್ನು ಹಾಡಿ ಹೊಗಳಿದ ಕವಿ ಕಲ್ಲಪ್ಪನನ್ನು ಜನ ಇಂದಿಗೂ ನೆನಸುತ್ತಾರೆ.

■

## ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿನೀಡಿದ ಕಡಣಿಯ ಕಲ್ಲಪ್ಪ

೧೮೫೭ರಲ್ಲಿ ನಡೆದು ಹೋದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮದಿಂದ ಭಾರತದಲ್ಲಿ 'ಭಾರತ ರಾಷ್ಟ್ರೀಯ ಮಹಾಸಭೆ" ರಚನೆಯಾಯಿತು. ಇದು ಹುಟ್ಟಿಕೊಂಡು ಅನೇಕ ವರ್ಷಗಳವರೆಗೆ ಕರ್ನಾಟಕದಲ್ಲಿಯ ಜನರಿಗೆ "ರಾಷ್ಟ್ರೀಯ ಮಹಾಸಭೆ" ಅಂದರೆ ಏನು ಎಂಬುದರ ಬಗ್ಗೆ ತಿಳುವಳಿಕೆ ಬಂದಿರಲಿಲ್ಲ. "ಕ್ರಿಸಮಸ್ ರಜೆ"ಯಲ್ಲಿ ನಡೆಯುತ್ತಿದ್ದ "ರಾಷ್ಟ್ರೀಯ ಮಹಾಸಭೆಯ ಅಧಿವೇಶನಕ್ಕೆ ನಗರಗಳಲ್ಲಿದ್ದ ವಕೀಲರು, ಡಾಕ್ಟರರು, ಶ್ರೀಮಂತರು, ಗಣ್ಯವ್ಯಕ್ತಿಗಳು ಹೋಗಿ ಬರುತ್ತಿದ್ದರು. ಹಾಗೆ ಹೋಗಿ ಬರುವುದು ಅವರು ತಮ್ಮ ದೊಡ್ಡಸ್ತಿಕೆಯ ಕುರುಹು ಎಂದು ಭಾವಿಸಿಕೊಂಡಿದ್ದರು. "ರಾಷ್ಟ್ರೀಯ ಮಹಾಸಭೆಯ" ರೂಪು, ರೇಷೆಗಳನ್ನು ತಿಳಿದುಕೊಂಡು ಅದನ್ನು ಜನಸಾಮಾನ್ಯರಿಗೆ ತಿಳಿಸಿಕೊಡುವ ಗೋಜಿಗೆ ಯಾರು ಹೋಗಲಿಲ್ಲ. ಅಂದು ಅದು ಯಾರಿಗೂ ಬೇಕಾಗಿರಲಿಲ್ಲ. ಈ 'ರಾಷ್ಟ್ರೀಯತ್ವದ' ಮಹತ್ವ ತಿಳಿದುಕೊಂಡು ಅದರ ಪ್ರಸಾರಕ್ಕಾಗಿ 'ಲೋಕಮಾನ್ಯ ತಿಲಕರು' ಮಹಾರಾಷ್ಟ್ರದಲ್ಲಿ ಸಣ್ಣ-ಪುಟ್ಟ ನಗರಗಳಲ್ಲಿ ಗಣೇಶೋತ್ಸವ ಸಂದರ್ಭವನ್ನು ಬಳಸಿಕೊಂಡು ತಾವೇ ಒಂದು ಸಭೆ ಸೇರಿಸಿ "ನಾವೆಲ್ಲರೂ ಭಾರತೀಯರು, ನಮ್ಮ ದೇಶ ಭಾರತ. ಭಾರತ ದೇಶದವರಾದ ನಮಗೆ ಭಾರತೀಯರು ಎಂದು ಕರೆಯುತ್ತಾರೆ. ಇಂದು ನಾವು ನಮ್ಮ ದೇಶವನ್ನು ಮರೆತಿದ್ದೇವೆ. ನವು ಯಾರು ಎಂಬುದು ನಮಗೆ ಗೊತ್ತೇ ಇಲ್ಲ. "ಕುರಿಗಳೊಡ ನಾಡುತ್ತ 'ಹರಿ' ಎಂಬುದನ್ನು" ಮರೆತ್ತಿದ್ದೇವೆ ಎಂಬ ಅರಿವು ಮೂಡಿಸುವ ಕೆಲಸ ಪ್ರಾರಂಭಿಸಿದರು. ಅದಕ್ಕಾಗಿ ಕೆಲವು ಕಾಯಕ್ರಮಗಳನ್ನು ಹಾಕಿಕೊಂಡು ಜನ ಜಾಗೃತಗೊಳಿಸ ತೊಡಗಿದರು.

ಇಂತಹ ಜಾಗೃತ ಕಾರ್ಯಕ್ರಮದಲ್ಲಿ 'ಹರ್ಡೆಕರ ಮಂಜಪ್ಪನವರು, ಆಲೂರು ವೆಂಕಟರಾಯರು, ಗುಲಬರ್ಗಾದ ದೊಡ್ಡಪ್ಪ ಅಪ್ಪಾ ಅವರು, ಭಾಲ್ಕಿ ಚೆನ್ನಬಸವ ಪಟ್ಟದೇವರು, ಸೋಲಾಪೂರದ ವಾರದ ಮಲ್ಲಪ್ಪನವರು ಮುಂತಾದವರು ಪಾಲುಗೊಂಡು ಜಾಗೃತಿ ಸಭೆಗಳಿಗೆ ಸ್ಫೂರ್ತಿ ನೀಡ ತೊಡಗಿದರು. ಮಹಾರಾಷ್ಟ್ರದಲ್ಲಿ ನಡೆದಂತೆ ಜಾಗೃತಿ ಸಭೆಗಳನ್ನು ಕರ್ನಾಟಕದಲ್ಲಿ 'ನಾಡಹಬ್ಬ' 'ಬಸವ ಜಯಂತಿ', ಯಂತಹ ಸಂದರ್ಭಗಳಲ್ಲಿ ಕನ್ನಡಿಗರನ್ನು ಹುಡುಕಿಕೊಂಡು ಜಾಗೃತಿ ಮೂಡಿಸುವ ಕಾರ್ಯ ಪ್ರಾರಂಭಿಸಿದರು.

ನಾವು ಕನ್ನಡಿಗರು, ನಮ್ಮ ಮಾತೃಭಾಷೆ ಕನ್ನಡ, ಕನ್ನಡಿಗರೆಲ್ಲರು ಜಾಗೃತರಾಗಬೇಕು, ಕನ್ನಡ ಮಾತನಾಡಬೇಕು ಎಂದು ಹೇಳಿ ಕನ್ನಡ ನಾಡಿನ ಪರಂಪರೆ ಇತಿಹಾಸ ಮೆಲ್ಲನೆ ಜನರಿಗೆ ತಿಳಿಸಿಕೊಡತೊಡಗಿದರು. ಜೊತೆಗೆ ನಮ್ಮ ದೇಶ ಭಾರತ, ನಾವು ಭಾರತೀಯರು, ನಮ್ಮ ದೇಶವನ್ನು ಈಗ ಬ್ರಿಟೀಷರು ಆಳುತ್ತಿದ್ದಾರೆ. ಅವರ ಆಳ್ವಿಕೆಯಲ್ಲಿ ಜನಜಾಗೃತಿಗೊಳಿಸಲು ಬ್ರಿಟಿಷ ಸರಕಾರದಲ್ಲಿ ಭಾರತೀಯರಿಗೆ ಸ್ಥಾನ ಒಂದನ್ನು ಕಲ್ಪಿಸಿ ಕೊಟ್ಟಿದ್ದಾರೆ. ಅದಕ್ಕೆ "ಭಾರತ ರಾಷ್ಟ್ರೀಯ ಮಹಾಸಭೆ" ಎಂದು ಕರೆಯುತ್ತಾರೆ. ಈ ರಾಷ್ಟ್ರೀಯ ಮಹಾಸಭೆಯ ಬಗ್ಗೆ ನಮಗೆ ಕಲ್ಪನೆಯೇ ಇಲ್ಲ. ಈ ಕಲ್ಪನೆ ತಂದುಕೊಡಲು ಆಲೂರು ವೆಂಕಟರಾಯರು ಇದಕ್ಕಾಗಿ 'ನಾಡಹಬ್ಬ' ಆಚರಿಸುವ ಕ್ರಮವನ್ನು ಬೆಳಕಿಗೆ ತಂದರು. ಹರ್ಡೇಕರ ಮಂಜಪ್ಪನವರು "ಕನ್ನಡ ಎಂದರೆ ಬಸವ, ಬಸವ ಎಂದರೆ ಕನ್ನಡ" ಎಂದು ಕನ್ನಡದಲ್ಲಿ ವಚನ ರಚನೆ ಮಾಡಿದ ಅಣ್ಣ ಬಸವಣ್ಣನವರ ಪರಿಚಯ ಮಾಡಿಕೊಡುತ್ತ "ಬಸವ ಜಯಂತಿ" ಕಾರ್ಯಕ್ರಮ ಹಮ್ಮಿಕೊಂಡರು. 'ಬಸವ ಜಯಂತಿಗೆ ಸ್ಫೂರ್ತಿ ನೀಡಿದರು. ಈ ಇಬ್ಬರು ಕನ್ನಡ ನಾಡಿನಲ್ಲಿ ಕನ್ನಡಿಗರನ್ನು ಎಚ್ಚರಿಸುವ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕರ್ನಾಟಕ ಏಕೀಕರಣ, ಸ್ವಾತಂತ್ರ್ಯ ಚಳುವಳಿಗೆ ನಾಂದಿ ಹಾಡಿದರು.ಮೆಲ್ಲನೆ 'ರಾಷ್ಟ್ರೀಯ' ಮಹಾಸಭೆ ರೂಪುರೇಷೆಗಳನ್ನು ಜನತೆಯ ಮುಂದಿಟ್ಟು ನಮ್ಮ ತಾಯಿ ಭಾರತ ಮಾತೆ, ನಾವೆಲ್ಲರೂ ಭಾರತೀಯರು ನಮ್ಮ ಮಾತೃ ಭಾಷೆ ಕನ್ನಡ. ನಾವೆಲ್ಲರೂ ಕನ್ನಡಿಗರು. ಭಾರತ ದೇಶದಲ್ಲಿದ್ದ ನಾಡು ಕನ್ನಡ. ನಮ್ಮ ನುಡಿ ಕನ್ನಡ" ಎನಿತು ಇನಿದು ಈ ಕನ್ನಡ ನುಡಿಯು" ಎಂದು ಬೆಟಗೇರಿ ಕೃಷ್ಣಶರ್ಮರು, ಅದರಂತೆ ಕುವೆಂಪು, ಬೇಂದ್ರೆ, ಜಿ.ಪಿ. ರಾಜರತ್ನಂ, ವಿ. ಸೀತಾರಾಮಯ್ಯ ಅಡಿಗರು, ದಿನಕರ ದೇಸಾಯಿ, ಕಯ್ಯಾರ ಕಿಞ್ಞಣ್ಣರೈ, ಸಾಲಿ ರಾಮಚಂದ್ರರಾಯ, ಗಂಗಪ್ಪ ವಾಲಿ, ಸಿದ್ಧಯ್ಯ ಪುರಾಣಿಕ, ಡಿ.ಎಸ್. ಕರ್ಕಿ ಮುಂತಾದ ಕವಿಗಳು ಕನ್ನಡದಲ್ಲಿ ಕವನಗಳನ್ನು ರಚಿಸಿ ಮಹಾತ್ಮಾ ಗಾಂಧೀಜಿ ಅವರು ಹೂಡಿದ ಸ್ವಾತಂತ್ರ್ಯ ಚಳುವಳಿಗೆ ಸ್ಫೂರ್ತಿ ನೀಡಿದರು.

ಈ ದಿಸೆಯಲ್ಲಿ ನಮ್ಮ ಜನಪದ ಕವಿಗಳು ವೃತ್ತಿಗಾಯಕರು 'ಲಾವಣಿ ಹಾಡು'ಗಳನ್ನು, 'ಗೀಗೀ' ಪದಗಳನ್ನು ರಚಿಸಿ ತಾವೇ ಡಪ್ಪಿನ ಮೇಲೆ ಕೈ ಹಾಕಿ, ಜಾತ್ರೆ ಉತ್ಸವ ಉರುಸು ಹಬ್ಬ ಹರಿದಿನಗಳಂತಹ ಸಂದರ್ಭದಲ್ಲಿ ಹಾಡಿ ಜನ ಜಾಗೃತಿಗೊಳಿಸ ತೊಡಗಿದರು. ಹರಿದು ಹಂಚಿ ಹೋಗಿದ್ದ, ಅಲ್ಲಲ್ಲಿ ಮೂಲೆ ಗುಂಪಾಗಿದ್ದ ಕನ್ನಡಿಗರನ್ನು ಬಡಿದೆಬ್ಬಿಸಿ ಒಂದುಗೂಡಿಸ ತೊಡಗಿದರು. ಹೀಗೆ ದೇಶ–ಭಾಷೆಗಳ ಕುರಿತು ಅರಿವು ಮೂಡಿಸುತ್ತ ನಮ್ಮ ದೇಶ ಭಾರತ ನಾವೆಲ್ಲರೂ ಭಾರತೀಯರು ನಮ್ಮ ಮಾತೃ ಭಾಷೆಕನ್ನಡ ಕನ್ನಡ ಮಾತ ನಾಡುವ ನಾವು ಕನ್ನಡಿಗರು ಎಂದು ಅರಿವು ಮೂಡಿಸತೊಡಗಿದರು.

ನಿಜಾಮ ಪ್ರಾಂತದ ಗಡಿಭಾಗ ಇಂದಿನ ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕು, ಮುಂಬಯಿ ಪ್ರಾಂತದ ಗಡಿಭಾಗವೆಂದು ಅಲಕ್ಷಿಸಲ್ಪಟ್ಟ ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ನಡುವಿನ ಈ ಗಡಿ ಪ್ರದೇಶ ಅನಾಥ ಪ್ರಜ್ಞೆಯಿಂದ ಬಳಲುತ್ತಿತ್ತು. ಹೈದರಬಾದ ಸಂಸ್ಥಾನದ ನಿಜಾಮರ ಆಡಳಿತ ಭಾಷೆ ಉರ್ದು, ಮುಂಬಯಿ ಪ್ರಾಂತದ ದಕ್ಷಿಣ ಭಾಗದಲ್ಲಿ ಮರಾಠಿ ಮೋಡಿ ಭಾಷೆಗಳ ಪ್ರಭಾವದಿಂದ ಇಲ್ಲಿ ಕನ್ನಡದ ಸೊಲ್ಲೆ ಅಡಗಿ ಹೋಗಿತ್ತು. ಜನರ ಆಡುಭಾಷೆ ಕನ್ನಡವೇ ಆಗಿದ್ದರೂ ಅವರ ಮಾತಿಗೆ ಬೆಲೆ ಇರಲಿಲ್ಲ. ನಿಜಾಮ ಪ್ರಾಂತದಲ್ಲಿ ಉರ್ದು ಭಾಷೆಯಲ್ಲಿ ಮಾತು ಆಡಿದರೆ ಆ ಮನುಷ್ಯ ದೊಡ್ಡವರೆಂದು ಭಾವಿಸುತ್ತಿದ್ದರು. ಮುಂಬಯಿ ಕರ್ನಾಟಕದಲ್ಲಿ ಮರಾಠಿ ಭಾಷೆ ಮಾತನಾಡಿದರೆ ಅವನು 'ದೊಡ್ಡವನು' ಎಂದು ಪರಿಗಣಿಸುವ ಕಾಲವೊಂದಿತ್ತು. ಇಂತಹ ವಿಷಮ ಸ್ಥಿತಿಯಲ್ಲಿ ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಕಡೆಹಳ್ಳಿ ಕಡಣಿಯಲ್ಲಿ ಕಲ್ಲಪ್ಪ ತನ್ನ ಗೀಗೀ ಹಾಡಿನ ಪ್ರಜ್ಞೆ, ಆಧ್ಯಾತ್ಮಿಕ, ಕೌಟುಂಬಿಕ ಸಾಧನೆ ಸೊಗಸು ಮೂಡಿಸುವಲ್ಲಿ ಹಾಡು ಕಟ್ಟಿ ಹಾಡುತ್ತಿದ್ದ.

ಆ ಕಾಲಕ್ಕೆ ಪೂಜ್ಯ ಮಹಾತ್ಮ ಗಾಂಧೀಜಿ ಅವರು ಹೂಡಿದ ಅಸಹಕಾರ ಚಳುವಳಿಯ ಬಿರುಗಾಳಿ, ಎಲ್ಲ ಕಡೆಗೆ ಹಬ್ಬಿತ್ತು. ದೇಶಾಭಿಮಾನಿಯಾದ, ಭಾಷಾಭಿಮಾನಿಯಾದ, ಸ್ವಾಭಿಮಾನಿಯಾದ ಕವಿ ಕಡಣಿಯ ಕಲ್ಲಪ್ಪ ಜನರಲ್ಲಿ ದೇಶಾಭಿಮಾನ ಮೂಡಿಸಲು ಅತ್ಯಂತ ರೋಚಕವಾದ ಹಾಡುಗಳನ್ನು ಕಟ್ಟಿ ಜನರ ಮುಂದೆ ನರನಾಡಿಗಳಲ್ಲಿ ರಕ್ತ ಚಿಮ್ಮಿಬರುವಂತೆ ಹಾಡುತ್ತಿದ್ದ. ಕಲ್ಲಪ್ಪ ರಚಿಸಿದ ಛತ್ರಪತಿಶಿವಾಜಿ, ಕಿತ್ತೂರ ಚೆನ್ನಮ್ಮ ಝಾಂಸಿ ಲಕ್ಷ್ಮಿಬಾಯಿ ಲಾವಣಿ ಹಾಡುಗಳು ಈ ಭಾಗ ಜನರ ನಾಲಿಗೆಯ ಮೇಲೆ ನಲಿದಾಡುತ್ತಿವೆ. 'ಗಾಂಧೀಜಿ', 'ದುಂಡು ಮೇಜಿನ ಪರಿಷತ್ತು' 'ಸ್ವದೇಶಿ ಚಳುವಳಿ' ಮುಂತಾದ ಗೀಗೀ ಹಾಡುಗಳು ಆ ಕಾಲದಲ್ಲಿ ಮಲಗಿ ನಿದ್ದೆ ಹೋದಂತಿದ್ದ ಜನರನ್ನು ಬಡಿದೆಬ್ಬಿಸಿದವು. ಇಪ್ಪತ್ತೈದು ವರ್ಷದ ನವತರುಣ ಕಡಣಿಯ ಕಲ್ಲಪ್ಪ ಸ್ವಾತಂತ್ರ್ಯ ಚಳುವಳಿಯ ಹುರಿಯಾಳುಗಳಂತೆ ಕಂಗೊಳಿಸುತ್ತಿದ್ದ. ತುಂತುನಿ ನುಡಿಸುವ ತುಕಾರಾಮ, ತಾಳ ಕಟೆಯುವ ನಬಿ ಗೌಡರು ಮುಂದೆ ಡಪ್ಪು ಬಾರಿಸಿ ಹಾಡುತ್ತಿದ್ದ ಕಡಣಿಯ ಕಲ್ಲಪ್ಪನಿಗೆ ಅಂತಸ್ಫೂರ್ತಿ, ಪ್ರೇರಕ ಶಕ್ತಿ ನೀಡುತ್ತಿದ್ದರು. ಇವರ ಗೀಗೀ ಹಾಡು ಕೇಳಲು ಜನ ಕಿಕ್ಕಿರಿದು ಸೇರುತ್ತಿದ್ದರು.

ಇಲ್ಲಿ ತುಂತುನಿ ನುಡಿಸುವ ತುಕಾರಾಮ ತಾಳ ಕಟೆಯುವ ನಬಿ ಗೌಡರು ಹೊಸದಾಗಿ ಬಂದಿದ್ದರು.

ಸ್ವದೇಶಿ ಚಳುವಳಿಯ ಸಂದರ್ಭದಲ್ಲಿ ಕಡಣಿಯ ಕಲ್ಲಪ್ಪ ಬ್ರಿಟಿಷರ ವಿರುದ್ಧ ಹಾಡಿ ಅವರು ಭಾರತಕ್ಕೆ ಬರುವ ಮುನ್ನ ನಮ್ಮ ನಾಡು–ನುಡಿ ಜನ ಅವರ

ರೀತಿ–ನೀತಿ, ಉಡುಪು, ತೊಡಪುಗಳನ್ನು ಕುರಿತು ಧ್ವನಿ ಎತ್ತಿ ಹಾಡಿದ್ದು, ಜನ ಎಂದೂ ಮರೆಯುವುದಿಲ್ಲ.

"ನಮ್ಮ ನಾಡು ಇತ್ತ ಹ್ಯಾಂಗ
ಇಂಗ್ಲಿಷರು ಬರುವ ಮುನ್ನ
ಜೋಡು ದಡಿಯ ಧೋತರ ಪಾಡ
ಮ್ಯಾಂಚಿಸ್ಟರ ಧೋತರ ಹೊರಗದೂಡ"

ಎಂದು ಗಾಂಧೀಜಿ ಹೂಡಿದ ಸ್ವದೇಶಿ ಚಳುವಳಿಗೆ ತಮ್ಮ ಹಾಡಿನ ಮೂಲಕ ಚಾಲನೆ ನೀಡಿದ ಕಡಣಿಯ ಕಲ್ಲಪ್ಪನ ಹೆಸರು ಇಂದಿಗೂ ಜನಮನದಲ್ಲಿ ಹಚ್ಚ ಹಸಿರಾಗಿದೆ. ಈ ಹಾಡು ಹಾಡಿದವನೇ ಕಡಣಿಯ ಕಲ್ಲಪ್ಪ. ತಾನು ಸುತ್ತುತ್ತಿದ್ದ ಜರದ ರುಮಾಲ ತಾನು ತೊಟ್ಟುಕೊಳ್ಳುತ್ತಿದ್ದ ಕೋಟು ಮ್ಯಾಂಚಿಸ್ಟರ ಧೋತರ ತನ್ನ ಐದು ಬೆರಳಿನಲ್ಲಿ ಇಟ್ಟ ಬಂಗಾರದ ಉಂಗುರ ತೆಗೆದು ಒಗೆದು ಅಪ್ಪಟ ದೇಶಭಕ್ತನಾಗಿ ಹಾಡು ಕಟ್ಟಿ ಹಾಡುತ್ತಿದ್ದ ಕಡಣಿಯ ಕಲ್ಲಪ್ಪನ ದೇಶ ಭಕ್ತಿಯನ್ನು ಜನ ಕೊಂಡಾಡುತ್ತಾರೆ.

ನೆಹರು ಜುಬ್ಬ ಮೇಲೆ ಜಾಕೀಟು ತೊಟ್ಟು ಖಾದಿಯ ಧೋತರ ಉಟ್ಟು ಖಾದಿಯ ರುಮಾರು ಸುತ್ತುತ್ತಿದ್ದ "ಖಾದಿ ಸ್ವರ್ಗದ ಹಾದಿ' ಎಂದು ಹಾಡಿ ಖಾದಿಯ ಬಟ್ಟೆಗೆ ಪಾವಿತ್ರ್ಯತೆ ತಂದು ಕೊಟ್ಟವರ ಸಾಲಿನಲ್ಲಿ ಕಡಣಿಯ ಕಲ್ಲಪ್ಪನ ಹೆಸರೂ ಒಂದು ಎಂದು ಹೇಳಬಹುದು. ಮಹಾತ್ಮ ಗಾಂಧೀಜಿಯವರನ್ನು ಕುರಿತು ಪದ ಕಟ್ಟಿ ಹಾಡಿದಾಗ ಕನ್ನಡ ಜನರು ಮಹಾತ್ಮಾ ಗಾಂಧಿಜೀಯವರು ಹೂಡಿದ ಚಳುವಳಿಯಲ್ಲಿ ಭಾಗವಹಿಸಲು ಇರುವಿಯಂತೆ ಹರಿದು ಬರತೊಡಗಿದರು. ಗಾಂಧೀ ಮಹಾತ್ಮನನ್ನು ಕಾಣಲು ಹಂಬಲಿಸತೊಡಗಿದರು.

ಕವಿ ಕಲ್ಲಪ್ಪ ಆಂಗ್ಲರನ್ನು ಹೀಯಾಳಿಸಿ ಹಾಡಲಿಲ್ಲ. 'ಮಾನವ ಅಂಗ್ರೇಜನ'ನ್ನು ಮಾತಿನಿಂದ ಮಣಿಸಿದ ಎಂದು ಹೇಳುತ್ತ, ನಿಜಾಂ ಪ್ರಾಂತವನ್ನು ಆಳುತ್ತಿದ್ದ ನಿಜಾಂರನ್ನು ಕುರಿತು "ನಿಚ್ಚಳ ನಿಜಾಮರ" ಹುಳುಕನ್ನು ಹೊರಗೆಹಾಕಿದ ಮಹಾತ್ಮ ನೀನೆಂದು ತುಂಬ ಕಲಾತ್ಮಕವಾಗಿ ಹಾಡುತ್ತಾನೆ. ಕಡಣಿ ಕಲ್ಲಪ್ಪನ ಕವಿತ್ವ ಶಕ್ತಿಗೆ ಮಾರು ಹೋದ ಜನ ಅವನ ದೇಶಭಕ್ತಿಗೆ ಶರಣಾಗ ತೊಡಗಿದರು.

"ಎಂಥ ಶ್ಯಾಣೆನವ್ವ ಮಹಾತ್ಮಗಾಂಧಿ
ಹಿಂದುಸ್ಥಾನಕ್ಕವನೇ ತಂದಿ".

ಎಂದು ಹಾಡಿ ಗಾಂಧೀಜಿಯವರನ್ನು ಜನ ಸಾಮಾನ್ಯರಿಗೆ ಪರಿಚಯ ಮಾಡಿ ಕೊಟ್ಟ ಮಾಂತ್ರಿಕ ಕಡಣಿಯ ಕಲ್ಲಪ್ಪ

ಮಾನವಂಗ್ರೇಜನ ಮಾತಿಲೆ ಹೊಡೆದಿ
ನಿಚ್ಚಳ ನಿಜಾಮನ ದಾರವತೆಗದಿ
ಧನ್ಯ ಧನ್ಯನಂದಿ"

ಎಂದು "ದುಂಡು ಮೇಜಿನ ಪರಿಷತ್ತಿನಲ್ಲಿ ಕುಳಿತು ಮಾತನಾಡುವ ಗಾಂಧೀಜಿಯವರ ಚಿತ್ರಣವನ್ನು ಕುರಿತು ಹಳ್ಳಿಯ ಜನರ ಮಧ್ಯದಲ್ಲಿ ಕಡಣಿಯ ಕಲ್ಲಪ್ಪ ಅಂದು ಹಾಡಿದ್ದು, ಸಾಹಸ ಮಾಡಿದ್ದು ಸಾಮಾನ್ಯವೇನಲ್ಲ.

ಜನರಲ್ಲಿ ದೇಶಾಭಿಮಾನವನ್ನು ತುಂಬುವ ಇಂತಹ ರೋಚಕವಾದ ಹಾಡುಗಳನ್ನು ಹಾಡಬಾರದು ಎಂದು ಬ್ರಿಟಿಷ್ ಅಧಿಕಾರಿಗಳು ಹೇಳಿದರು. ಅಷ್ಟೇ ಅಲ್ಲ ನಿನ್ನ ಹಾಡಿಗೆ ಬ್ರಿಟಿಷ್ ಸರಕಾರ ಪರವಾನಿಗಿ ಪಡೆದು ಹಾಡುಗಳನ್ನು ಹಾಡಬೇಕು. ಅದರಲ್ಲಿ ಬ್ರಿಟಿಷರ ಪರವಾಗಿ ಹಾಡಿದರೆ ತಕ್ಕ ಮಾನಧನವನ್ನು ಸರಕಾರ ನೀಡುತ್ತದೆ ಎಂದು ಆಮಿಷೆ ತೋರಿಸಿದರು. ಅಪ್ಪಟ್ಟ ದೇಶಾಭಿಮಾನಿಯಾದ ಕಡಣಿ ಕಲ್ಲಪ್ಪ ಆಸೆ–ಆಮಿಷಗಳಿಗೆ ಒಳಗಾಗಲಿಲ್ಲ. ತನ್ನ ಮನಸ್ಸನ್ನು ಬದಲಿಸಲು ಪ್ರಯತ್ನಿಸಿದ ಆಂಗ್ಲ ಅಧಿಕಾರಿಗಳಿಗೆ ಅವನು ಕೊಟ್ಟ ಉತ್ತರ.

"ಸಾಹೇಬರ ತಾಯಿ ನೆಲಕ್ಕೆ ದ್ರೋಹಾ ಮಾಡಿ ಹಾಡೂದು" ಇದ್ದೂ ಜೀವಂತ ಶವಾ ಆಗಿ ಬದುಕೂದು ಎರಡು ಒಂದೇ ನೋಡ್ರಿ" ಎಂದು ಹೇಳಿದನಂತೆ. ಕಲ್ಲಪ್ಪನ ಈ ಮಾತನ್ನು ಕೇಳಿ ಆ ಆಂಗ್ಲ ಅಧಿಕಾರಿ ತಲೆ ಕೆಳಗೆ ಮಾಡಿಕೊಂಡು ಕೂತನಂತೆ. ದೇಶಾಭಿಮಾನಿಯಾದ ಕಡಣಿಯ ಕಲ್ಲಪ್ಪ ತನ್ನ ಮನಸ್ಸನ್ನು ಬದಲಿಸಲಿಲ್ಲ. ಎಂದು ಜನರು ಕಡಣಿಯ ಕಲ್ಲಪ್ಪನನ್ನು ಕುರಿತು ತುಂಬ ಅಭಿಮನದಿಂದ ಹೇಳುತ್ತಾರೆ.

"ಶುದ್ಧ ಖಾದಿ ಧರಿಸಿದಂತಹ
ಯೋಧರಿಂದ ಯುದ್ಧ ಮಾಡಿ
ಗೆದ್ದ ಭೂಪ ಗಾಂಧೀಜಿ ಜಗದೊಳಗ
ಕಲಿಕಾಲದೊಳಗ"

ಈ ಕಲಿಕಾಲದೊಳಗೆ ಯುದ್ಧ ಮಾಡಿ ಬಂದ ಎಂಬ ಮಾತು ತುಂಬ ಮಾರ್ಮಿಕವಾಗಿದೆ. ಎಲ್ಲಿ ನೋಡಿದಲ್ಲಿ ಮೋಸ, ಲಂಚ, ವಂಚನೆ, ಈರ್ಷೆ, ಅಸೂಯೆ, ಯಾರು ಹೇಗೋ ಏನೋ ಯಾವ ಬುಟ್ಟಿಯಲ್ಲಿ ಎಂಥ ಹಾವು ಅಡಗಿದೆ ಯಾರು ಬಲ್ಲರು? ಇಂತಹ ಕೆಟ್ಟ ಕಲಿ ಕಾಲದಲ್ಲಿ "ಶುದ್ಧ ಖಾದಿ ಧರಿಸಿದಂಥ" ಎಂದು ಹೇಳುವಲ್ಲಿ ಮನಸ್ಸು ಶುದ್ಧ, ಭಾವ ಶುದ್ಧ, ಭಕ್ತಿ ಶುದ್ಧ ಇದ್ದ ಮನುಷ್ಯ ತೊಟ್ಟ ಖಾದಿಯೂ ಶುದ್ಧ". ಸ್ವಾತಂತ್ರ್ಯ ಚಳುವಳಿಯ ಹಾದಿಯೂ ಹಸನ. ಇಂತಹ ಪರಿಶುದ್ಧ ಹೃದಯದ ಶುದ್ಧ ಮನುಷ್ಯರನ್ನು ಕೂಡಿಕೊಂಡು

ಸತ್ಯ, ಶಾಂತಿ, ಅಹಿಂಸೆಯಿಂದ ಭಾರತ ಬಿಡುಗಡೆಗೊಳಿಸಿದ ಮಹಾತ್ಮರನ್ನು 'ಭೂಪ' ಎಂದು ಹಾಡಿ ಕುಣಿದುದು ಎಷ್ಟೊಂದು ಸಮಂಜಸ. ಇಷ್ಟೇ ಅಲ್ಲ ತನ್ನ 'ಸಖಿ' ಗೀತೆಯಲ್ಲಿ ಸ್ವಾತಂತ್ರ್ಯ ಗಳಿಸಿಕೊಟ್ಟ ದೇಶಭಕ್ತಿ ಜನನಾಯಕರನ್ನು ಹೃದಯತುಂಬಿ ಸ್ಮರಿಸಿಕೊಳ್ಳುತ್ತಾನೆ.

"ಗಾಂಧಿಯಲ್ಲಿ ಶಾಂತಿ ಬಾಳ
ನೆಹೂರನಲ್ಲಿ ಧೈರ್ಯ ಬಾಳ
ಸುಭಾಷನಲ್ಲಿ ಶೌರ್ಯ ಬಾಳ
ಹೋದರೊ ಸ್ವರಾಜ್ಯ ಗಳಿಸಿ
ಕಲ್ಲಣ್ಣ ಅಂದ ಮಾಡ್ರಿ ಇದಕ ಚೌಕಾಸಿ"

"ಕವಿ ಕಲ್ಲಣ್ಣ ಅಂದ ಮಾಡ್ರಿ ಇದಕ ಚೌಕಾಸಿ" ದೇಶಕ್ಕೆ ಸ್ವಾತಂತ್ರವೇನೋ ಬಂದಿತು. ಸ್ವತಂತ್ರ ಭಾರತದಲ್ಲಿ ನಾವು ಹೇಗೆ ನಡೆದುಕೊಳ್ಳಬೇಕು" ಎಂಬುದನ್ನು ನಾವು ನಮ್ಮ ನಮ್ಮಲ್ಲಿ 'ಚೌಕಾಸಿ' ಮಾಡಿಕೊಳ್ಳಬೇಕಾಗಿದೆ ಎಂದು ಉದ್ಗಾರವೆತ್ತಿದ್ದಾನೆ. "ರವಿ ಕಾಣದ್ದನ್ನು ಕವಿ ಕಂಡ" ಎಂಬ ಮಾತಿನಂತೆ ಭಾರತ ಜನರ ಹೃದಯಾಂತರಂಗವನ್ನು ಅರಿತ ಕಲ್ಲಪ್ಪ ತಮ್ಮ ಮಾನ ಪ್ರಾಣ ತ್ರಾಣಗಳನ್ನು ಈಡಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ, ದೇಶಭಕ್ತರನ್ನು, ಮಹಾತ್ಮಾರನ್ನು, ಹುತಾತ್ಮರನ್ನು ಮರೆಯಬಾರದು. ಅವರ ಸ್ಮರಣೆ ನಮ್ಮ ಎದೆಯಲ್ಲಿ ಚಿರಕಾಲವಿರಲಿ ಎಂದು ಹೇಳುತ್ತಾನೆ ಕವಿ ಕಡಣಿಯ ಕಲ್ಲಪ್ಪ.

ಪೂಜ್ಯ ಮಹಾತ್ಮ ಗಾಂಧೀಯವರು ಹೂಡಿದ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿದ್ದ ಕಡಣಿಯ ಕಲ್ಲಪ್ಪ ಮಹಾತ್ಮರ ಹೋರಾಟದ ಬದುಕನ್ನು ಕಣ್ಣಾರೆ ಕಂಡವರು. ಅವರ ಹೋರಾಟದ ಮನೋಭಾವ ಹೊಟ್ಟೆಯೊಳಗಿದ್ದ ಕಿಚ್ಚು ಬ್ರಿಟಿಷರೊಡನೆ ನಡೆದುಕೊಂಡ 'ಕಿಚ್ಚು' ಕವಿ ಕಲ್ಲಪ್ಪನವರ ಹೃದಯದಲ್ಲಿ ಪುಟಕ್ಕಿಟ್ಟ' ಚಿನ್ನದಂತೆ ಪ್ರಜ್ವಲಿಸುತ್ತದೆ. ಅಂತೆಯೇ "ಹೋದರೋ ಸ್ವರಾಜ್ಯಗಳಿಸಿ" ಎಂದು ಧನ್ಯ ಭಾವದಿಂದ ನೆನೆಯುತ್ತಾನೆ. ಆ ನೆನಹು ಇಂದು ನಮ್ಮದಾಗಬೇಕಿದೆ.

ದೇಶಕ್ಕೆ ಸ್ವಾತಂತ್ರ್ಯವೇನೋ ಬಂದಿತು. ಆದರೆ ದುರ್ದೈವದಿಂದ ದೇಶ ಇಬ್ಭಾಗವಾಯಿತು. 'ಪಾಕಿಸ್ಥಾನ' ಹಿಂದುಸ್ಥಾನವೆಂದು ವಿಭಜಿಸಲ್ಪಟ್ಟಿತು. ೧೯೬೨ರಲ್ಲಿ ಪಾಕಿಸ್ತಾನ ಭಾರತದ ಮೇಲೆ ಯುದ್ಧ ಸಾರಿತು. ಬಾಯಿ-ಬಾಯಿ ಎಂದು ಚೀನಾದೇಶ ನಮ್ಮ ಮೇಲೆ ಆಕ್ರಮಣ ಮಾಡಿತು. ಪಂಡಿತ ಜವಾಹರಲಾಲ ನೆಹರೂಜಿ ಅವರು ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಆಗ ಮತ್ತೊಮ್ಮೆ ಭಾರತೀಯರಲ್ಲಿ ದೇಶಾಭಿಮಾನದ ಕಿಚ್ಚು ಹೊತ್ತಿಸಿದವರು ನಮ್ಮ ಗೀಗೀ

ಹಾಡುಗಾರರು ನಮ್ಮ ಮೇಲೆ ಚೈನಾ ಆಕ್ರಮಣ ಮಾಡಿದ ಕಾಲದಲ್ಲಿ ಭಾರತೀಯರನ್ನು ಎಚ್ಚರಿಸಲು ಗೀಗೀ ಹಾಡುಗಳನ್ನು ಕಟ್ಟಿ ಹಾಡಿದರು.

"ಚೀನಾ ದೇಶದ ಕುನ್ನಿಗೋಳು
ದಂಡೆತ್ತಿ ಬರತಾವ
ದೊಣ್ಣೀಲೆ ಹೊಡಿಬೇಕSS
ಅವರಿಗೆ ಅಂಜಬಾರದು ಯಾರಿಗೂS"

ಎಂದು ಗಡಿಗೆರೆಯಲ್ಲಿ ನಿಂತು ಹೋರಾಡುತ್ತಿದ್ದ ಯೋದರನ್ನು, ನೇಗಿಲೆ ಹಿಡಿದು ಉಳುವುತ್ತಿದ್ದ ರೈತರನ್ನು ಶಾಲೆ–ಕಾಲೇಜುಗಳಲ್ಲಿ ಓದುತ್ತಿದ್ದ ಯುವಕರನ್ನು, ಯುವತಿಯರನ್ನು ಹುರಿದುಂಬಿಸಿ "ಚೀನಾದೇಶದ ಕುನ್ನಿಗೋಳು" ದಂಡೆತ್ತಿ ಬರತಾವ ದೊಣ್ಣೀಲೇ ಹೊಡಿಬೇಕು" ಏಳಿರಿ, ಬನ್ನಿರಿ, ಹೊಡಿರಿ, ಬಡಿರಿ ಎಂದು ಎಚ್ಚರಿಸಿದ್ದಾರೆ. ಆಗ ಕವಿ ಕಡಣಿಯ ಕಲ್ಲಪ್ಪ ಅವರಿಗೆ ಐವತ್ತೆರಡು ವರ್ಷ, 'ದೇಶಾಭಿಮಾನ' ಅವರಲ್ಲಿ ತುಂಬಿ ತುಳುಕುತ್ತಿತ್ತು. ಕನಿಷ್ಠ ಮೂರು ದಶಕಗಳಿಂದಲೂ ಡಪ್ಪಿನ ಮೇಲೆ ಕೈಹಾಕಿ ಅವರು ಗಳಿಸಿದ್ದು ಜನಾದರತೆಯನ್ನು, ಗೆದ್ದದ್ದು ಜನಮನವನ್ನು.

■

# ಗೀಗೀ ಹಾಡಿಗೆ ಸುಗ್ಗಿಯಕಾಲ

ಸಿಂದಗಿ ತಾಲೂಕಿನ ಬೀಬೀ ಇಂಗಳಗಿ ಹಸನಲಾಳೇಸಾ, ಮಹಮ್ಮದ ಇಮಾಮಾಸಾ, ಮುಳಸಾವಳಗಿ ಕರೀಂಸಾ ಕಲಾಲ, ಕೊರಳ್ಳಿ ಮೌಲಾಲಿ ಮತ್ತು ಚಂದ್ರಾಮ. ಚಾಂದ ಕವಟೆ ನಬಿಸಾಬ ಗುಡುಲಾಲ, ನಂದ್ಯಾಳದ ಮಲ್ಲು ಮತ್ತು ಗುರು ಇಂಗಳೇಶ್ವರ ಲಾಲಸಾಹೇಬ ಇವರೆಲ್ಲರೂ ಆಗ 'ಲಾವಣಿ', ಗೀಗೀ ಹಾಡುಗಳನ್ನು ರಚಿಸಿ ಡಪ್ಪು ನುಡಿಸಿ ಹಾಡಿ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಹೆಸರಾಗಿದ್ದರು. ಇವರ ಕೂಡ ಡಪ್ಪು ಬಾರಿಸಿ ದನಿ ಎತ್ತಿ ಹಾಡಿ ಒಂದು ಹೆಜ್ಜೆ ಮುಂದೆ ಬಂದು ಜನಮನವನ್ನು ಗೆದ್ದು ಜನಪ್ರಿಯನಾಗಿದ್ದ ಕಡಣಿಯ ಕಲ್ಲಪ್ಪ, ಕಡಣಿಯ ಕಲ್ಲಪ್ಪನ ಕಂಠಕ್ಕೆ ಕೋಗಿಲೆಯು ನಾಚಿ ನೀರಾಗುತ್ತಿತ್ತು. ಕಡಣಿಯ ಕಲ್ಲಪ್ಪನ ಹಾಡು ಕೇಳಿದವರು ಹೀಗೆ ಅಭಿಪ್ರಾಯ ಪಡುತ್ತಾರೆ.

ಕಡಣಿಯ ಗ್ರಾಮ ವಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಭೀಮಾನದಿಯ ದಂಡೆಯ ಮೇಲೆ ಇರುವ ಒಂದ ಸಣ್ಣ ಹಳ್ಳಿ. ಈ ಗ್ರಾಮದ ಅಧಿದೇವತೆ "ಭೋಗೇಶ್ವರ" ಕಡಣಿಯ ಕಲ್ಲಪ್ಪ ತನ್ನ ಹಾಡಿಗೆ ಭೋಗೇಶ್ವರ ಎಂದು ಅಂಕಿತನಾಮ ಇಟ್ಟುಕೊಂಡು ಹಾಡು ರಚಿಸಿದ್ದೂ ಉಂಟು. ಅವನ ಒಂದು ಸಖಿ ಗೀತೆ ಹೀಗೆ ಹೇಳುತ್ತದೆ.

"ಕಡಣಿಯ ಗ್ರಾಮ ಚಂದ
ಭೀಮಾನದಿಯ ಹರಿವುದು ಮುಂದ
ಭೊಗೇಶ್ವರನ ದಯದಿಂದ
ಕಲ್ಲಪ್ಪ ಹಾಡೂದ ಚಂದ"

ಈ ಭೀಮಾ ನದಿ ದಾಟಿದರೆ ಮುಂದೆ ಕಾಣುವುದು ಕಲಬುರ್ಗಿ ಜಿಲ್ಲೆ ಅಫಜಲಪೂರ, ಜೇವರ್ಗಿ ತಾಲೂಕುಗಳು. ಆಗ ಕಲಬುರ್ಗಿ ಜಿಲ್ಲೆಯಲ್ಲಿ ಸಾವಳಗಿ ಮಹ್ಮದ ಸಾಬ. ಮಹಾಗಾಂವದ ಮೀರಾ ಸಾಬ, ದ್ಯಾಗಾವಿಯ ಹಜರತ ಸಾಬ ಮುಂತಾದ ಗೀಗೀ ಹಾಡುಗಾರರು. 'ಗೀಗೀ ಹಾಡು ಕಟ್ಟಿ' ಹಾಡುತ್ತಿದ್ದರು. ಸಾವಳಗಿ ಮಹ್ಮದಸಾಬ ಹಾಡುಗಳನ್ನು ರಚಿಸಿ ತನ್ನ ಶಿಷ್ಯರಿಗೆ ಹಾಡಲು ಕೊಡುತ್ತಿದ್ದ.

ಒಮ್ಮೊಮ್ಮೆ ನಾಗೇಶ ಪರ ಹಾಡು ರಚಿಸಿ ತನ್ನ ಶಿಷ್ಯರಿಗೆ ಕೊಡುತ್ತಿದ್ದರೆ. ಒಮ್ಮೊಮ್ಮೆ ತಾನೇ ಹಾಡಿಗೆ ಹೆಗಲು ಕೊಡುತ್ತಿದ್ದ. ಸಾವಳಗಿ ಮಹ್ಮದ ಸಾಬನ ಸವಾಲಿಗೆ ಕಡಣಿಯ ಕಲ್ಲಪ್ಪ ಜವಾಬು ಕೊಟ್ಟು 'ಹೌದು' ಎನಿಕೊಂಡ ಪ್ರಸಂಗಗಳು ಉಂಟು.

ಕಡಣಿಯ ಕಲ್ಲಪ್ಪ, ಚಾಂದ ಕವಟೆಯ ಗುಡಲಾಲ ಈ ಇಬ್ಬರೂ ಆ ಕಾಲದಲ್ಲಿ ಪ್ರಸಿದ್ಧ. "ಹರದೇಶಿ – ನಾಗೇಶಿ" ಹಾಡುಗಾರರೆಂದು ಹೆಸರು ಪಡೆದಿದ್ದರು. ಕಡಣಿಯ ಕಲ್ಲಪ್ಪ, ಇದ್ದಲ್ಲಿ ಚಾಂದ ಕವಟೆಯ ಗುಡಲಾಲ, ಗುಡಲಾಲ ಇದ್ದಲ್ಲಿ ಕಡಣಿಯ ಕಲ್ಲಪ್ಪ ಇದ್ದೇ ಇರುತ್ತಿದ್ದರು. ಇವರಿಬ್ಬರ ಸವಾಲು ಜವಾಬು ಕೇಳಲು ಜನರು ಗುಂಪು ಗುಂಪಾಗಿ ಬರುತ್ತಿದ್ದರು. ಯಾವ ಊರಲ್ಲಿ ಗೀಗೀ ಹಾಡು ನಡೆಯುತ್ತದೆಯೋ ಅಲ್ಲಿ ಇವರಿಬ್ಬರ ಗುಣಗಾನ ನಡೆದೇ ಇರುತ್ತಿತ್ತು. ಅಷ್ಟು ಪ್ರಸಿದ್ಧರಾಗಿದ್ದರು ಇವರಿಬ್ಬರು.

ಗುಡುಗಾಲನ ಹುಟ್ಟೂರು ಚಾಂದಕವಟೆ. ಇವನು ಬೀಬೀ ಇಂಗಳಗಿ ಮಲ್ಲಾಹಸನ ನಾಗೇಶಿ ಸಂಪ್ರದಾಯಕ್ಕೆ ಸೇರಿದ ನಾಗೇಶಿ ಪರ ಹಾಡುಗಾರ. ಅವರು ರಚಿಸಿದ ಹಾಡುಗಳನ್ನೇ ಹಾಡುತ್ತಿದ್ದ. ಗುಡುಲಾಲನ ಕಂಠ ಮಾಧುರ್ಯಕ್ಕೆ ಅವನ ಗತ್ತುಗಮ್ಮತ್ತಿಗೆ ಜನ ಮೆಚ್ಚಿ ಮಾರು ಹೋಗಿದ್ದರು. ಅವನ ಹಾಡುಗಾರಿಕೆ ನಡೆದ ಊರು–ಕೇರಿಗಳಿಗೆ ತಂಡೋಪ ತಂಡವಾಗಿ ಬಂದು ಸೇರುತ್ತಿದ್ದರು.

ಒಮ್ಮೆ ಗುಡುಲಾಲನ ಊರು ಚಾಂದಕವಟೆಯಲ್ಲಿ ಊರ ಜನರೆಲ್ಲರೂ ಕೂಡಿ ಒಂದು ನಾಟಕ ಏರ್ಪಡಿಸಿದ್ದರು. ಚಾಂದ ಕವಟೆ ಗ್ರಾಮದ ಪ್ರಮುಖರು, ಅವನಿಗೆ ಅಪಮಾನ ಮಾಡಬೇಕೆಂದೂ, ಅವನ ಸೊಕ್ಕು ಮುರಿಯ ಬೇಕೆಂತಲೂ ಅಂದ ಜಿದ್ದಿನಿಂದ ಈ ನಾಟಕ ಏರ್ಪಡಿಸಿದ್ದರು. ಬಹುಶಃ ಅಂದು ಆ ಊರಲ್ಲಿ ಬಸವಣ್ಣನ ಖಾಂಡ ಇದ್ದಿರಬಹುದು. ಬಸವಣ್ಣ ದೇವರ ಗುಡಿ ಮುಂದಿನ ಆವರಣದಲ್ಲಿ ಗುಡುಲಾಲ ತನ್ನ ಗೀಗೀ ಮೇಳದೊಂದಿಗೆ ಬಂದು ಅಲ್ಲಿ ತನ್ನ ಗೀಗೀ ಹಾಡಲು ಪ್ರಾರಂಭಿಸಿದ. ಗುಡುಲಾಲನ ಗೀಗೀ ಹಾಡಿನ ದನಿ ಕೇಳಿ ನಾಟಕ ನೋಡಲು ಕುಳಿತ ಜನರೆಲ್ಲರೂ ಗುಡುಲಾಲನ ಹಾಡು ಕೇಳಲು ಎಲ್ಲರೂ ಅವಸರದಿಂದ ಎದ್ದು ಬಂದು ಗುಡುಲಾಲನ ಹಾಡು ಕೇಳಲು ಬಸವಣ್ಣನ ಗುಡಿ ಆವರಣದಲ್ಲಿ ಬಂದು ಕುಳಿತರು.

ಪ್ರೇಕ್ಷಕರೆಲ್ಲರೂ ಎದ್ದು ಹೋದ ನಂತರ 'ನಾಟಕ' ಏರ್ಪಡಿಸಿದ ಪುರ ಪ್ರಮುಖರು ಗುಡುಲಾಲನ ಹತ್ತಿರ ಬಂದು "ಇಂದು ನಿನ್ನ ಹಾಡುಗಾರಿಕೆ ನಿಲ್ಲಿಸು" ಎಂದು ಹೇಳಿದರಂತೆ. ಅದಕ್ಕೆ ಗುಡುಲಾಲ "ನಾನು ನಿಮ್ಮನ್ನು ಕೇಳಿ ಹಾಡಲು ಬಂದು ನಿಂತಿಲ್ಲ. ನಿಮ್ಮ ಈ ಮಾತು ಕೇಳಿ ನಾನು ಹಾಡುಗಾರಿಕೆ ನಿಲ್ಲಿಸುವುದಿಲ್ಲ.

ಊರಲ್ಲಿ ಉತ್ಸವ ನಡೆದಿದೆ. ಈ ಉತ್ಸವದಲ್ಲಿ ಎಲ್ಲರೂ ಉತ್ಸಾಹ ಪಡಬೇಕು. ಅಂತಹ ಉತ್ಸಾಹ ನಾನು ನೀಡುತ್ತಿದ್ದೇನೆ" ಎಂದು ಖಡಾಖಂಡಿತವಾಗಿ ಹೇಳಿದನಂತೆ.

ಅದಕ್ಕೆ ಪುರ ಪ್ರಮುಖರು ಹಾಡು ನಿಲ್ಲಿಸದಿದ್ದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎಂದು ಬೆದರಿಕೆ ಹಾಕಿದರು. ಆಗ ಚಾಂದ ಕೋಟಿಯ ಗುಡುಲಾಲ "ಇಂದು ನನ್ನ ಪ್ರಾಣ ಹೋದರೂ ಚಿಂತೆಯಲ್ಲಿ ಹಾಡು ನಿಲ್ಲಿಸಲಾರೆ" ಎಂದು ಪ್ರಮುಖರ ಧ್ವನಿಗೆ ಧ್ವನಿ ನಡುಗುವಂತೆ ಗಟ್ಟಿಯಾಗಿ ಹೇಳಿದನಂತೆ. ಅಷ್ಟರಲ್ಲಿ ಗೀಗೀ ಹಾಡು ಕೇಳುತ್ತ ಕುಳಿತಿದ್ದ ಪ್ರೇಕ್ಷಕರು ನಮಗೆ ನಿಮ್ಮ ನಾಟಕ ನೋಡುವುದು ಬೇಕಿಲ್ಲ. ನಮಗೆ ಗುಡುಲಾಲನ ಹಾಡು ಬೇಕು ನಾವು ಕೇಳುತ್ತೇವೆ" ಎಂದು ಒಕ್ಕೊರಲಿನಿಂದ ಹೇಳಿದರಂತೆ ಮತ್ತೆ ಕೆಲವರು ನೀವು ಇಂದು ನಾಟಕ ನಡೆಸಿದರೂ ನಾವು ನೋಡುವುದಿಲ್ಲ. ಬೇಕಾದರೆ 'ನಾಟಕ' ನಾಳೆ ನಡೆಯಲಿ ನಾವೆಲ್ಲರೂ 'ನಾಟಕ ನೋಡಲು ಬರುತ್ತೇವೆ. ಇಂದು ಗುಡುಲಾಲನ 'ಹಾಡಕ್ಕಿ' ನಿಲ್ಲಿಸಬಾರದು" ಎಂದು ಹೇಳಿದರಂತೆ ಸಭಿಕರ ಮಾತಿನಂತೆ ಪುರಪ್ರಮುಖರು ಅಂದು ಏರ್ಪಾಡು ಮಾಡಿದಿ ನಾಟಕ ನಿಲ್ಲಿಸಿ ಮರುದಿವಸ ನಾಟಕ ಏರ್ಪಡಿಸಿದರಂತೆ. ಇಂತಹ ಹಟವಾದಿ ಕಟುಸತ್ಯವಂತನಾಗಿದ್ದ ಚಾಂದಕಮಟೆಯ ಗುಡಲಾಲ. ಈ ಗುಡಲಾಲನ ಎದುರಾಳಿ ಹರದೇಶಿ ಪಂಗಡದ ಕಡಣಿಯ ಕಲ್ಲಪ್ಪ. ಚಾಂದಕವಟೆಯ ಗುಡುಲಾಲ 'ನಾಗೇಶಿ' ಪಂಗಡಕ್ಕೆ ಸೇರಿದವ. ಇವರಿಬ್ಬರ ಸವಾಲ-ಜವಾಬ ಅಂದರೆ 'ಹಾವು-ಮುಂಗಲಿ'ಗೆ ಜಿದ್ದು ಬಿದ್ದಂತೆ. ಈ ಜಿದ್ದಾಜಿದ್ದು ನೋಡುವುದು, ಅವರು ಹಾಡು ಕೇಳುವುದೆಂದರೆ ಜನರಿಗೆ ಒಂದು ಮೋಜು, ಮಜಾವು. ಇಂತಹ ಒಂದು ಹಿಗ್ಗಿನ ಬುಗ್ಗಿಯ ಸುಗ್ಗಿಯ ಕಾಲೂ ಅದಾಗಿತ್ತು. ಅಷ್ಟಾದರೂ ಇವರಿಬ್ಬರೂ ಅಷ್ಟೇ ಸಜ್ಜನರು, ವಿನಯಶೀಲರು, ಸಭಿಕರ ಮುಂದೆ ಸಾದರ ಪಡಿಸುವ ಅವರ ಹಾಡು ದನಿ ಅಷ್ಟೇ ನಮ್ರ.

"ಪುತ್ರ ಬಂದು ನಿನ್ನ ಸ್ತೋತ್ರ ಮಾಡೆವೆ
ಪವಿತ್ರ ಮಾಡು ಪಾರ್ವತಿ
ನಾ ಪ್ರಥಮ ಮಾಳ್ಪೆ ನಿನ್ನ ಸ್ತುತಿ
ಧಾತ್ರೆ ಪಾಲನ ರಾಣಿ ನೇತ್ರ ತೆರೆದುನೋಡು
ಸೂತ್ರಧಾರನ ಸತಿ" ಜೀಜೀss

ಎಂದು ಜಗನ್ಮಾತೆ ಪಾರ್ವತಿ ದೇವಿಯಲ್ಲಿ ಪ್ರಾರ್ಥಿಸಿ ತನ್ನ ಹಾಡು ಪ್ರಾರಂಭಿಸುತ್ತಾನೆ. ಅವನು ಮುಂದುವರಿದು

"ಭಾಸ್ಮಾಸುರನಿಗೆ ಬಂದಿತ್ತು ಶರಾವತಿ

ಅವನ ಕೈ ಅವನ ತಲೆಯಮೇಲೆ ಇರಿಸಿ
ಆತನಿಗೆ ಹುರದಿಕ್ಕಿ."

ಎಂದು ಪೌರಾಣಿಕ ಪ್ರಸಂಗ ಎತ್ತಿ ಹಾಡಿ ಸಭಿಕರ ಗಮನವನ್ನು ತನ್ನಕಡೆ ಸೆಳೆದುಕೊಳ್ಳುತ್ತಾನೆ. ಚಾಂದಕವಟೆ ಗುಡುಲಾಲ.

ದೈತ್ಯ ರಾಜ ಭಸ್ಮಾಸುರ ಉಗ್ರತಪಸ್ಸು ಮಾಡಿ ಶಿವನಿಂದ "ತಾನು ಯಾರ ತಲೆಯ ಮೇಲೆ ಕೈಯಿಡುತ್ತೇನೆಯೋ ಅವರು ತಕ್ಷಣ ಸುಟ್ಟು ಭಸ್ಮವಾಗಬೇಕೆಂದು ವರವನ್ನು ಪಡೆದುಕೊಂಡಿದ್ದ. ಈ ವರದಿಂದ ಬಹಳ ಜನರ ತಲೆಯ ಮೇಲೆ ಕೈ ಇಟ್ಟು ಸುಟ್ಟು ಭಸ್ಮ ಮಾಡಿಬಿಟ್ಟಿದ್ದ. ಇದರಿಂದ ಭಸ್ಮಾಸುರನಿಗೆ ಎಲ್ಲಿಲ್ಲದ ಅಹಂಕಾರ ಬಂದಿತ್ತು. ಕೊನೆಗೆ ಯಾರಿಂದ ಈ ವರ ಪಡೆದುಕೊಂಡಿದ್ದನೋ ಆ ಶಿವನ ತಲೆಯ ಮೇಲೆ ಕೈಯಿಟ್ಟು ಸುಟ್ಟು ಬಿಡುವ ಹೊಂಚು ಹಾಕಿ ಶಿವನ ಹತ್ತಿರ ಬರುತ್ತಾನೆ. ತನ್ನನ್ನು ಕೊಲ್ಲಲು ಬಂದ ಭಸ್ಮಾಸೂರನ ಕಣ್ಣಿಗೆ ಕಾಣದಂತೆ ಯಾರೂ ಬಂದು ನೋಡದ ಜಾಗದಲ್ಲಿ ಅಡಗಿಗೊಂಡ ಕುಳಿತ ಶಿವ. ಈ ಸುದ್ಧಿ ತಿಳಿದುಕೊಂಡು ಸಂರಕ್ಷಣಾ ಕರ್ತನಾದ ವಿಷ್ಣು ಮೋಹಿನಿ ರೂಪ ಧರಿಸಿ ನೃತ್ಯಮಾಡುತ್ತ ಭಸ್ಮಾಸುರನ ಹತ್ತಿರ ಬಂದ. ಈ ಮೋಹಿನಿಗೆ ಮರುಳಾಗಿ ದೈತ್ಯ ರಾಜ ಭಸ್ಮಾಸುರ ನನಗೆ ವಶವಾಗಬೇಕೆಂದು ಕೇಳಿಕೊಳ್ಳುತ್ತಾನೆ. ಆಗ ಆ ಮೋಹಿನಿ ದೈತ್ಯರಾಜ ಭಸ್ಮಾಸುರನಿಗೆ "ನಾನು ಮಾಡಿದಂತೆ ನೀನು ನನ್ನೊಡನೆ ನೃತ್ಯ ಮಾಡಿ ನನ್ನ ಮನಸ್ಸನ್ನು ಗೆದ್ದರೆ ನಿನ್ನ ವಶವಾಗುತ್ತೇನೆ" ಎಂದು ಹೇಳಿದಳು. ಅದಕ್ಕೆ ಭಸ್ಮಾಸುರ ಮೋಹಿನಿಯೊಡನೆ ನೃತ್ಯ ಮಾಡುತ್ತ ಮಾಡುತ್ತ ಅವಳ ರೂಪ-ಲಾವಣ್ಯಕ್ಕೆ ಮರುಳಾಗಿ ಮೋಹಿನಿ ತನ್ನ ಕೈ ತನ್ನ ತಲೆಯ ಮೇಲೆ ಇಟ್ಟುಕೊಂಡಾಗ ಭಸ್ಮಾಸುರನೂ ತನ್ನ ಕೈ ತಾನೂ ತನ್ನ ತಲೆ ಮೇಲೆ ಇಟ್ಟುಕೊಂಡ. ಕಡಲೇ ಸುಟ್ಟುಕೊಂಡು ಹೋದ" ಎಂದು ಹೆಣ್ಣು ಹೆಚ್ಚ ಮಾಡಿ ಹಾಡಿದ ಚಾಂದಕೋಟಿಯ ಗುಡಲಾಲ.

ಪುರಾಣದ ಆಧಾರ ಕೊಟ್ಟು ಶಿವನನ್ನು ಎಲ್ಲೆಲ್ಲಿಯೋ ತಿರುಗಿಸಿ, ಅಡಗಿಸಿಟ್ಟು ಶಕ್ತಿಯಿಂದಲೇ ಭಸ್ಮಾಸುರನನ್ನು ಮುಗಿಸಿ ಬಿಟ್ಟ ಕಥೆ ಹೇಳುತ್ತಾನೆ. ಕೊನೆಗೆ ನನ್ನನ್ನು ರಕ್ಷಿಸಿದವಳು ನೀನೇ ಎಂದು ಪಾರ್ವತಿಗೆ ಶರಣು ಬಂದ ಸ್ವಾರಸ್ಯವನ್ನು ಹೀಗೆ ಹಾಡುತ್ತಾನೆ.

"ದೈತ್ಯ ಸತ್ತಾನೆಂಬ ಸುದ್ದಿ ಕೇಳಿ, ಸಂತೋಷ ತಾಳಿ
ಶಿವ ಬಂದ ಹೊರಳಿ, ನಿನ್ನ ಭೆಟ್ಟಿಗಿ
ಗತಿಗಾಣದೆ ಕುಂತಿದ್ದ ತನ್ನ ಹೊಟ್ಟಿಗಿ"

ಎಂದು ವಿಡಂಬಿಸುತ್ತಾನೆ. ಶಿವನಿಗಿಂತ ಪಾರ್ವತಿ ಹೆಚ್ಚೆಂದು ಹೇಳಿ ಹಾಡಿದ 'ಗುಡುಲಾಲ' ನ ಹಾಡು ಸಭಿಕರು ಕೇಳಿ ಸಂತಸ ಪಟ್ಟಿರಬಹುದು. ಹರದೇಶಿ ಕವಿ ಕಲ್ಲಣ್ಣ ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತ ಒಂದೇ ಸವನೆ ಹಲ್ಲು ಕಟೆಯುತ್ತ ಅಟ್ಟ ಇಳಿದು ಬರುವ ನಾಗೇಶಿ ಹಾಡುಗಾರ ಗುಡುಲಾಲನನ್ನು ವಕ್ರದೃಷ್ಟಿಯಿಂದ ನೋಡುತ್ತ ಡಪ್ಪು ಬಾರಿಸುತ್ತ ಸಭಾ ಮಂಟಪಕ್ಕೆ ಬಂದು "ಶಕ್ತಿ ಹೆಚ್ಚಗಿದ್ದರ ಯಾಕ ಹಿಡದಾಳ ಶಿವನ ಕಾಲ" ಎಂದು ಹಾಡುತ್ತ ಅಟ್ಟ ಎರುತ್ತ

"ಮಂದಮತಿ ಹೆಣ್ಣೀನ ಬುದ್ಧಿ ಎಂದಿಗಾದರೂ ನಿಜವಲ್ಲ.
ಹಿಂದಿನ್ಹಿಡದು ಹೇಳತಿನಿ ಕೇಳ್ರಿ ಆದ ವರ್ತಮಾನ
ಒಂದೂ ತಿಳಿಯಲಾರದೆ ಸುಳ್ಳೆ ಒದರಿ ಆದಿ ಹೈರಾಣಾ
ನಿಂದಾ ಮಾಡಬಾರದಂತ ಸುಮ್ಮನೆ ಕುಂತರ ಬಿಚ್ಚಿದಿ
ಏ ಹಿಂದಿನಿಂದ ಹುಟ್ಟಿ ನಿಮ್ಮ ಶಕ್ತಿ ಕಂದಗೊರಳನ
ಪುರಾಣ ಬರಿಸುದಕ್ಕ
ಸಾವಿರ ವರ್ಷ ತಪಸ್ಸು ಮಾಡತಾ ಸೇರ್ಯಾಳ ಆರ್ಯಾಣ
ಶಕ್ತಿ ಹೆಚ್ಚಿದ್ದರ ಯಾಕ ಹಿಡಿದಾಳ ಶಿವನಕಾಲ"

ಎಂದು ಕಡಣಿಯ ಕಲ್ಲಪ್ಪ ಮುಂದುವರಿದು ಹಾಡಿ ಹೇಳುತ್ತಾನ.

"ಬೈದು ಹಾಡಿದರೆ ಏನು ಫಲವಿಲ್ಲ. ಜನನ ಮರಣ ಯಾರಿಗೂ ಬಿಟ್ಟಿಲ್ಲ
ನಿಜರೂಪ ನಿರ್ಗುಣ ಒಬ್ಬ ಬ್ಯಾರೆ ಹಾನ
ರಂಬಾ ಪಾರ್ಥನ್ನನ್ನ ಕೂಡ ಬೇಕೆಂದರ
ಪಾರ್ಥ ರಂಬೆಯನ್ನ ತಾಯಿಯೆಂದ ಒಪ್ಪಲಿಲ್ಲ.
ಶಾಪ ಕೊಟ್ಟಳು.

ಬ್ರಹಸ್ಪತಿ ಹೆಂಡತಿ ತಾರಾಮತಿ ಗುರುಪುತ್ರ ಚಂದ್ರನನ್ನು
ವಚನದಲ್ಲಿ ಸಿಕ್ಕಿಸಿ ಪ್ರೇಮಿಸಿದಳು. ಬುದ್ಧಿತಪ್ಪಿ ಎದ್ದು
ಹೋಗಿ ಗುಲಾಮ ಎಂಬೋ ಮಗನ್ನ ಹಡದು ಮತ್ತ ಗಂಡನ್ನ
ಕೂಡಿ ಮಗ ಮನಿಗೆ ಬಂದರೆ ಶಯನಕ್ಕ ಕರಿದು
ಹೆಣ್ಣಿನ ಧರ್ಮವೇನು ನೀವು ಹೆಣ್ಣು ಹೆಚ್ಚು ಅನ್ನೊ ಹಿಡಿಯದಿತ್ತು
ತಾಯಿ ಪಾದಾಂತ ಹೆಂಡರ ಪಾದ.

ಗೌತಮ ಮುನಿ ಶಾಪಕ್ಕೆ ಆಹಲ್ಯಾ ಕಲ್ಲಾಗಿ ಬಿದ್ದಳು
ಆವಾಗ ಎಲ್ಲಿ ಹೋಗಿತ್ತು ಹೆಣ್ಣಿನ ಜಾಣತನ ಬಲ್ಲಿದಂತ
ರಾಮ ಹುಟ್ಟಿ ಕಲ್ಲಿನ ಮ್ಯಾಲ ಎಡಗಾಲಿಟ್ಟ
ಮುತ್ತ ರತನ ಮಾಡಿದ".

ಹೀಗೆ ಸ್ವಾರಸ್ಯವಾಗಿ ರಾಮಾಯಣ, ಮಹಾಭಾರತ ಮತ್ತು ಶಿವನ ಪುರಾಣಗಳ ಆಧಾರದ ಮೇಲಿಂದ ಕವಿ ಕಡಣಿಯ ಕಲ್ಲಣ್ಣ ನಾಗೇಶ ಪರ ಹಾಡುಗಾರ ಗುಡುಲಾಲನಿಗೆ ತುಂಬಿದ ಸಭೆಯಲ್ಲಿ ಉತ್ತರ ಕೊಟ್ಟು ಹಾಡಿ ಜನ ಮೆಚ್ಚುಗೆಯನ್ನು ಪಡೆದ.

ಹೀಗೆ ಇಡೀ ರಾತ್ರಿ ಸವಾಲಕ್ಕೆ ಜವಾಬು, ಜವಾಬಕ್ಕೆ ಸವಾಲು ಹಾಕಿ ತೋಡಿಗೆ ತೋಡಿ ಕೊಟ್ಟು ಹಾಡುತ್ತ ಬಂದ ಚಾಂದ ಕವಟೆಯ ಗುಡುಲಾಲನಿಗೂ ಕಡಣಿಯ ಕಲ್ಲಪ್ಪನಿಗೂ ಸಭೆಯಲ್ಲಿಯೆ ಇರಸು–ಮುರುಸು ಪ್ರಾರಂಭವಾಗುತ್ತದೆ. ಕಡಣಿಯ ಕಲ್ಲಪ್ಪ

"ಗೊಳ್ಳ ಪದಾ ಮಾಡಿ ಸುಳ್ಳೆ ಒದರಬ್ಯಾಡ ನೀ
ಹಳ್ಳ ಸಮುದ್ರ ಸರಿಯಾಗ ಬಲ್ಲುದೆ?
ಹೆಣ್ಣು ಹೆಚ್ಚು ಮಾಡಿ ಹಡದೀಯ ಮಗಳ
ಹುಟ್ಟಿ ಬಂದಿದ್ದೇನು ಗಂಡ ಇಲ್ಲದಾ"

ಎಂದು ಮೂದಲಿಸಿ ಸಭಿಕರು ಮೆಚ್ಚುವಂತೆ ಹಾಡುತ್ತಾನೆ.

"ಮೂರು ತಿಂಗಳ ತಂದಿಯ ಬಿಂದುವದೊಳಗ
ಕಡಿ ಕುಂತಾನ್ಯಾಳೆಗಳದಾ
ಹಿಂದಿನಿಂದ ಹುಟ್ಟಿಯೋನಿ ಮಾನ್ಯಾಗ್ಯಕ ಬಿದ್ದ
ನೋಡಪ್ಪ ತಿಳದಾ".

ನಿನ್ನಷ್ಟಕ್ಕೆ ನೀನೇ ವಿಚಾರ ಮಾಡಿ ನೋಡು ಎಂದು ಬುದ್ಧಿ ಹೇಳುತ್ತಾನೆ.

"ಒಂಬತ್ತು ತಿಂಗಳ ಹ್ಯಾಂಗ ಹೊತ್ತಿ
ನಿನಗನ ಬೇಕು ಡಂಬರ ಕತ್ತಿ
ಎಣ್ಣಿ ಇರುತಾನ ದೀಪದ ಜ್ಯೋತಿ
ಖಾಲೆ ಏನ ಮಾಡತೈತಿ ನಿನ್ನ ಪಣತಿ".

ಹೀಗೆ ಹರದೇಶಿ ಹಾಡುಗಾರ ಗಂಡು ಹೆಚ್ಚು ಎಂದು ಹಾಡಿ ಸಭಿಕರ ಕಡೆಯಿಂದ ಸೈ ಎನಿಸಿಕೊಳ್ಳುತ್ತಾನೆ.

ಇಷ್ಟು ಹೊತ್ತಿಗೆ ಚಾಂದಕೋಟಿಯ ಗುಡುಲಾಲ ತಲೆ ಬಿಸಿಯಾಗಿ ಬಿಟ್ಟಿರುತ್ತದೆ. ಸಹಿಸಿಕೊಂಡ ಕುಳಿತುದನ್ನು ನೋಡಿ.

"ಕಲ್ಲಣ್ಣ ಅಂತಾನ ಬಿದ್ದೋಡಿ ಹೆಣ್ಣ ಇದು ಬಾಲಣ್ಣ
ಸರಿಯಾಗ ಬಲ್ಲದಾ ಹೆಣ್ಣು ಹೆಚ್ಚು ಮಾಡವಾ

ಹಡಸಿಯ ಮಗಳ ಹುಟ್ಟಿ ಬಂದಿದೇನು ತಂದಿ ಇಲ್ಲದಾ".

ಈ ಅಪಮಾನವನ್ನು ಸಹಿಸಿಕೊಳ್ಳದೆ ಚಾಂದಕೋಟಿಯ ಗುಡುಲಾಲ 'ಖ್ಯಾಲಿ'ಯಲ್ಲಿ ಹಾಡುತ್ತಾನೆ.

"ಗುರುವಿನ ಗುಣ ತಿಳಿದಾವ ಜಾಣ
ಗುಣವಿಲ್ಲದ ಗುರುವಿನ ಕೂಡಾವ ಕ್ವಾಣಾ
ಯಮನ ವಾಹನ ಅನಿಸೀತೋ ಆ ಕ್ವಾಣಾ
ತಪ್ಪ ಮಾಡದೇ ಉಪ್ಪಾರನಲ್ಲಿ ಬಂದು
ಮಣ್ಣಹೊತ್ತಿತ್ತೊ ಕ್ವಾಣಾ "ಗೀಗೀऽऽ".

ಥೇಟ ಅದು ಎಮ್ಮಿಯ ಮಗ ಕ್ವಾಣಾ
ತಾಯಿಯೆಂಬ ಖೂನ ಇಡಲಿಲ್ಲ ತಾಯಿ ಮ್ಯಾಲ ಏರಿತ್ತು ಕ್ವಾಣಾ
ದೇವಿಮುಂದ ಕಡದಾರ ಆ ಕ್ವಾಣಾ
ಬಲ್ಲ ಜ್ಞಾನಿಗಳು ಎತ್ತಿನ ಗೂಡ ಹೂಡುದಿಲ್ಲಕ್ವಾಣಾ
ಗುಡುಲಾಲಾಂಗಾಗ ತಿಳಿಬೇಕೇ ಕ್ವಾಣಾ
ಎತ್ತ ಏರಿ ಕಡಿ ಎಳದರ ಕೆರೆ ಕಡಿ ಎಳೆಯಾದು
ಕಡಣಿಯ ಕ್ವಾಣಾ".

ಹೀಗೆ ಇವರಿಬ್ಬರೂ ತಮ್ಮ ಜೀವ ಇರುವವರೆಗೂ ಬಾಜಿ, ಕೊಂಬು ಮೊಳಗಿಸಿ ಗೀಗೀ ಪದಗಳನ್ನು ರಚಿಸಿ ಅವುಗಳನ್ನು ಸ್ವಾರಸ್ಯವಾಗಿ ಹಾಡಿ ಜನಮನವನ್ನು ರಂಜಿಸಿದರು.

■

# ಹೆಣ್ಣು ಮಕ್ಕಳ ಮೋಜು ಮಜಾವಕ್ಕೆ ಕಡಿವಾಣ

ಬ್ರಿಟಿಷರ ಆಡಳಿತದ ದುಷ್ಪರಿಣಾಮದಿಂದ ಜನರು ನಿರುದ್ಯೋಗಿಗಳಾಗಿದ್ದರು. ಹೆಣ್ಣು – ಗಂಡು ಮಕ್ಕಳಲ್ಲಿ ಆಲಸ್ಯತನ ಬೆಳೆದು ಬಂದಿತ್ತು. ಅದೇ ಆಗ ಚಹಾ ಕುಡಿಯುವ ಚಟ ಜನರಲ್ಲಿ ಮೊಳಕೆಯಾಡಿದಿತ್ತು. ಸಣ್ಣ–ದೊಡ್ಡ ಊರುಗಳಲ್ಲಿ ಚಹಾದ ಅಂಗಡಿಗಳು ಹಣಿಕೆ ಹಾಕುತ್ತಿದ್ದವು. "ಕಪ್ಪು–ಬಸಿ" ಹೊಸ ಚೀನಿ ಮಣ್ಣಿನ ಪಾತ್ರೆಗಳನ್ನು ನೋಡಿ ಅದರಲ್ಲಿ ಚಹಾ ಕುಡಿಯಬೇಕೆಂದು ಬಯಸುತ್ತಿದ್ದರು. ಜನರನ್ನು ಆಕರ್ಷಿಸಲು ಚಹಾದ ಅಂಗಡಿಗಳ ಮುಂದೆ 'ಗ್ರಾಮ ಫೋನ' ಹಚ್ಚುತ್ತಿದ್ದರು. ಹರಕು ಅಂಗಿ ಹುಡುಗರು ಕ್ರಾಪ್ ಕಟಿಂಗ್ ಮಾಡಿಸಿಕೊಂಡು ಕೈಯಾಗ ಬೀಡಿ ಗಟ್ಟಿ ಹಿಡಕೊಂಡು ಚಹಾದ ಅಂಗಡಿಗೆ ಬರುತ್ತಿದ್ದರು. ಇವರನ್ನು ನೋಡಿ ಕಣ್ಣು ಹೊಡೆದು ಮುರುಕು ಮಾಡುವ ಹೆಂಗಸರು ಅಲ್ಲಿಯೇ ಸುತ್ತಾಡುತ್ತಿದ್ದರು. ಗ್ರಾಮಫೋನು ಹಾಡುತ್ತಿತ್ತು.

"ಎರಡು ಹಡೆದರ ಏನಾಯಿತು ಸಣ್ಣಾಕಿನ
ಹೊಸ ಫ್ಯಾಷನ್ ದಿನಾಲು ಮಾಡಾಕಿನ"

ಎಂಬ 'ಗ್ರಾಮಫೋನ' ಹಾಡುವ ಧ್ವನಿಯನ್ನು ಕೇಳಿದ ಹೆಂಗಸರು ಇನ್ನು ಮೋಜು ಮಜಾವಕ್ಕೆ ಇಳಿಯುತ್ತಿದ್ದರು. ತಲೆಯ ಮೇಲೆ ಎಡಕ್ಕೆ ಬೈತಲೆ, ಎರಡೂ ಕಡೆ ಪುಗ್ಗಾ ಜೋಡು ಹೆಣಲು ಅರ್ಧ ತಲೆಗೆ ಸೆರಗು, ಹೊಕ್ಕಳ ಕೆಳಗೆ ಉಟ್ಟ ಸೀರೆ, ತೋಳಿಲ್ಲದ ಚಿಕ್ಕಿಯ ಜಂಪರ, ಕೈ ಬೀಸುತ್ತ ನಿಲಿಗೆ ಒದ್ದು ಬಿಂಗರಿಯಂತೆ ತಿರುಗುವ ಹೆಂಗಸರ ಸಂಖ್ಯೆ ಬೀದಿಗಳಲ್ಲಿ ಹೆಚ್ಚಾಗಿತ್ತು. ಅಚ್ಚ ದೇಸಿಯ ಸಂಸ್ಕೃತಿ ಮೈಗೂಡಿಸಿಕೊಂಡು ಬೆಳೆದು ಬಂದ ಕವಿ ಕಡಣಿಯ ಕಲ್ಲಪ್ಪನಿಗೆ ಇದನ್ನು ಕಂಡು ಸಹಿಸಿಕೊಳ್ಳುವುದಾಗಲಿಲ್ಲ. ಅವನ ಕಣ್ಣು ಕಿಡಿ ಕಿಡಿಯಾಗುತ್ತಿದ್ದವು ಮನಸ್ಸು ಸಿಡಿಮಿಡಿಗೊಳ್ಳುತ್ತಿತ್ತು.

"ದೇಶದೊಳಗ ನಡದ ಮಾತು ಬ್ಯಾಸರಾತ ಹೇಳಲಿಕ್ಕೆ
ದ್ಯಾಸವಿಟ್ಟು ಕೇಳಿರಣ್ಣ ಈ ವಿಸ್ತಾರ
ಖರೆ ಮೋಸಗಾರ ನಮ್ಮ ಮೇಲೆ ಆದ ವಿಸ್ತಾರ
ದೇಶ ಭಕ್ತರು ನೋಡಿ ನಮ್ಮ ಮೇಲೆ ಕಣ್ಣ ಕಿಸ್ತಾರ"

ಎಂದು ಆ ಕಾಲದ ವಾಸ್ತವ ಚಿತ್ರಣವನ್ನು ರಚಿಸಿ ಹಾಡಿ ಎಂಥ ಕಾಲ ಬಂತು ಎಂದು ಮಮ್ಮಲ ಮರುಗಿದ್ದಾನೆ. ಭಾರತೀಯ ಸಂಸ್ಕೃತಿ ಹಾಳಾಗ ತೊಡಗಿತ್ತು. ಈ ಪಿಡುಗು ತಡೆಯುವುದು ಹೇಗೆ? ಎಂದು ನಮ್ಮನ್ನು ನೋಡಿ ದೇಶಕ್ಕೆ, ಸ್ವಾತಂತ್ರ್ಯ ತಂದು ಕೊಡಲು ಹೋರಾಡುತ್ತಿರುವ ದೇಶ ಭಕ್ತರು ನಮ್ಮನ್ನು ಕಂಡು ತಮ್ಮ ನೇರದೃಷ್ಟಿ ನಮ್ಮ ಮೇಲೆ ಬೀರಿ ಕಿಡಿ ಕಾರಬಹುದು ಎಂದು ಆತಂಕ ಪಡುತ್ತಾರೆ.

"ಏಸು ಕಾಲವಾದರೂ ನಮ್ಮ ಡ್ರೆಸ್ಸ ಬದಲು ಆಗುದಿಲ್ಲ
ಬಾಯಿಯಿಂದ ಹೇಳತೀರಿ ಬರೇ ಶಾಸ್ತ್ರಾ
ಫ್ಯಾನ್ಸಿ ಹೆಂಗಸರ ಕೂಡ ಬಾಳೆ ಮಾಡೂದ ಬಹಳ ದುಸ್ತರಾ"

ದ್ರಾರಿದ್ರತೆ ಭಾರತಕ್ಕೆ ಕಾಲಿಡುತ್ತಿತ್ತು. ಇಂತಹ ಫ್ಯಾಷನ್ ಮಾಡುವ ಹೆಂಗಸರ ಸಂಖ್ಯೆ ಹೆಚ್ಚಾಗ ತೊಡಗಿತ್ತು. ಇಂತಹ ಮೋಜು ಮಜಾವ ಮಾಡುವ 'ಹೆಂಗಸರ ಕೂಡ ಬಾಳೆ ಮಾಡುದು ಬಹಳ ದುಸ್ತಾರಾ' ಎಂದು ಕಡಣಿಯ ಕಲ್ಲಪ್ಪ ವಿಸ್ತರಿಸಿ ಹಾಡುತ್ತಿದ್ದ. ಭಾರತೀಯರಿಗೆ 'ಬಾಳು' ಅಥವಾ 'ಬದುಕು' ಒಂದು ಆದರ್ಶವಾದ ವಸ್ತು. ಹುಟ್ಟು ಆಕಸ್ಮಿಕ ಸಾವು ನಿಶ್ಚಿತ. ಹುಟ್ಟು ಸಾವುಗಳ ಮಧ್ಯದಲ್ಲಿ ಬಿಟ್ಟು ಹೋಗುವ ಬದುಕು "ಶಾಶ್ವತ". ಇಂತಹ ಶಾಶ್ವತ ಬದುಕಿನ ರೂವಾರಿಗಳು 'ಗಂಡ–ಹೆಂಡತಿ'. ಇವರಿಬ್ಬರೂ ಹಣತಿಯಲ್ಲಿ ಹಚ್ಚಿಟ್ಟ ಜೋಡು ಬತ್ತಿಗಳಂತೆ. ಅದರಲ್ಲಿ ಒಂದು ಬತ್ತಿ ಮಂಕಾದರೆ ಬಾಳು ಬೆಳಗುವುದು 'ದುಸ್ತರ' ಎಂದ ಕವಿ ಕಳವಳಿಸಿ ಹಾಡಿದ್ದಾನೆ.

ಎದಿ ಸೀಳಿದರೆ ಎರಡು ಅಕ್ಷರ ಇಲ್ಲ. ತಲೆಯಲ್ಲಿ ಬುದ್ಧಿ ಇಲ್ಲ. ಮನಸ್ಸಿನಲ್ಲಿ ಸ್ಥಿರತೆ ಇಲ್ಲ. ಮೋಜು ಮಜಾವು ಹೇಳ ತೀರದಷ್ಟು 'ಧೀಮಾಕ ಭಾಳ' ಇಂತಹ ಹೆಂಗಸರನ್ನು ಕಂಡು ಇವರು ಬೊಂಬಾಯಿ ಬಸವಿಯರನ್ನು ಮೀರಿಸುತ್ತಾರೆ ಎಂದು ಉದ್ಗಾರವೆತ್ತಿದ್ದಾನೆ. ಅವನು ರಚಿಸಿದ 'ರಂಡ್ಯಾರ್‍ರ ಮಾಡ ಬಾರದ" ಅನ್ನುವ ಪದ ಆ ಕಾಲದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿತ್ತು.

"ರಂಡೇರನ ಮಾಡಬಾರದು
ಅಗ್ಗ ಆಗಬಾರದು
ಜೋಗತೇರಿಗೆ ಹೋಗಬಾರದು
ಎರಕೊಂಡು ಕೇರಕೊಂಡು ತಿರುಗ್ಯಾಡವರು
ರೊಕ್ಕಿನಾಸಿಗಿ ಬಡದಾಡುವರು
ಇವರೆ ಕಲ್ತು ನಮ್ಮ ಮನಿಕೆಡಿಸುವರು

ಹಾದರ ಮಾಡವರು ಅವರೆಂಥವರು
ಊರ ಹೊರಗಿನ ಡಂಬರ ದಾಸರು
ಕಸಗೊಂಡ ಬಿಟ್ಟಾರು ಊರಿನವರು
ಮಣ್ಣ ತೂರತಾರ ಪಾತರದವರು

ಅಣ್ಣ ತಮ್ಮರ ಮನ ಒಡೆಸುವರು
ನಡೆಯ ಬಂಡೆಯ ಕೀಲ ಉಚ್ಚವರು
ನಡುವೆ ಇದ್ದ ಕುಂಟಲಗಿತ್ತೇರು
ಇವರ ಕುಂತ ನಮ್ಮ ಮನೆ ಒಡೆಸುವರು".

ಹೀಗೆ ಹಾಡಿ ತನ್ನ ಕಾಲದಲ್ಲಿ ಕೆಡುತ್ತಿದ್ದ ಸಮಾಜದ ವಾಸ್ತವ ಚಿತ್ರಣ ಪದಕಟ್ಟಿ ಹಾಡಿ ಜನರನ್ನು ಸನ್ಮಾರ್ಗಕ್ಕೆ ತರುತ್ತಿದ್ದ. ಕವಿ ಕಡಣಿಯ ಕಲ್ಲಪ್ಪ.

ಹೆಣ್ಣು-ಗಂಡಿನ ಮೋಜು ಮಜಾವದ ಈ ಡೊಂಬರಾಟದಲ್ಲಿ ಗಂಡ-ಹೆಂಡರಲ್ಲಿ ವಿರಸ ಬರುವುದು ಸಹಜ. ಹೀಗೆ ಇರಸು-ಮುರಿಸಿನಲ್ಲಿ ಸಂಶಯ ಪಟ್ಟುಕೊಂಡು ಹೆಂಡತಿಯ ಶೀಲ ಶಂಕಿಸಿ ತನ್ನ ಹೆಂಡತಿಯನ್ನೆ ಬಿಟ್ಟು ಬಿಟ್ಟ, ಒಬ್ಬ ಪುರುಷ. ನಿಜವಾಗಿ ಆ ಹೆಣ್ಣುಮಗಳು ಅವನ ಹೆಂಡತಿ ಬಹಳ ಒಳ್ಳೆಯವಳು ಗರತಿ ಈ ಮಾತಿನಲ್ಲಿ ಎಳ್ಳಷ್ಟು ಸಂಶಯ ಇರಲಿಲ್ಲ. ಆದರೂ ಸಂಶೆಯ ತಾಳಿ ಅವಳನ್ನು ಬಿಟ್ಟು ಬಿಟ್ಟ ಅಂತವಳನ್ನು ಕುರಿತು

"ನಾ ಗರತಿ, ನೀ ಗರತಿ ಹಾಕ್ಯಾಡು ಮಂದಿ ಬಾಳಾ ಇತಿ
ಮೂರು ಲೋಕದಲ್ಲಿ ಇಲ್ಲ ಗುಣವಂತಿ
ಪತಿವ್ರತಾ ನಮ್ಮ 'ಲೀಲಾವತಿ'

ಎಂದು ಡಪ್ಪು ಬಾರಿಸಿ ದನಿ ಎತ್ತಿ ಹಾಡಿ ಇಂತಹ ಕಲಿಕಾಲದಲ್ಲಿ 'ಪತಿವ್ರತಾ' ಎಂದು ಹೆಸರು ಪಡೆದ 'ಲೀಲಾವತಿ' ನಿಜವಾಗಿಯೂ ಗುಣವಂತಿ ಎಂದು ದೊಡ್ಡ ಸಭೆಯಲ್ಲಿ ಹಾಡಿ ಹರಸುತ್ತಾನೆ. ಆಗ ಆ ಸಂಶಯ ಪಿಶಾಚಿಯಾಗಿದ್ದ 'ಲೀಲಾವತಿ'ಯ ಗಂಡ ಸಂಶಯ ಸಂಕೋಲೆಯಿಂದ ಹೊರ ಬಂದು, ಬಿಟ್ಟ ತನ್ನ ಹೆಂಡತಿಯನ್ನು ಕೈಮಾಡಿ ಕರೆದುಕೊಂಡು ಬಂದು ಇಬ್ಬರೂ ಸಂಸಾರ ರಥಕ್ಕೆ ಹೆಗಲು ಕೊಟ್ಟು ಬಾಳು ನಡೆಸುತ್ತಾರೆ. ಮುಂದಿದ್ದ ತಮ್ಮ ಬಾಳು ಬಂಗಾರಗೊಳಿಸುತ್ತಾರೆ. ಇಂದಿಗೂ ಈ ಪೌರಾಣಿಕ ಸತ್ಯ ಕಥೆ ಸಮಾಜದಲ್ಲಿ ಜೀವಂತವಾಗಿದೆ. ಹೀಗೆ ಸಾಮಾಜಿಕ ಜೀವನದ ಒಳಿತಿಗಾಗಿ ಪೌರಾಣಿಕ ಸತ್ಯ ಕಥೆಯನ್ನು ಕಟ್ಟಿ ಸಭೆಯಲ್ಲಿ ಎತ್ತಿ ತೋರಿಸಿದ ಹರದೇಶಿ ಹಾಡುಗಾರ ಕಡಣಿಯ ಕಲ್ಲಪ್ಪನ 'ಗೀಗೀ ಹಾಡು' ಸವಿಯ ಸಕ್ಕರೆಯಲ್ಲವೆ?

ನಿಜವಾಗಿ ಕಡಣಿಯ ಕಲ್ಲಪ್ಪ ಸಮಾಜ ಜೀವಿ. ಸಮಾಜಕ್ಕೆ ಒಳಿತಾಗಬೇಕೆಂಬ ಬಯಸಿದ ಹಿರಿಯ ಕವಿ. ಹಾಡುಗಾರ ತಾನು ಗಂಡು ಹೆಚ್ಚೆಂದು ಹಾಡಿದರೂ– ಹೆಣ್ಣು ಕಡಿಮೆಯೆಂದು ಬಯಸಿದವನಲ್ಲ. 'ಶಿವ ಇದ್ದಲ್ಲಿ ಶಕ್ತಿ ಇರಲೇಬೇಕು. 'ಶಿವ–ಶಕ್ತಿ' ಈ ಲೋಕದ ಎರಡು ಕಣ್ಣು. ಇವರಿಬ್ಬರ ಕೃಪಾದೃಷ್ಟಿ ನಮ್ಮ ಮೇಲೆ ಇರಬೇಕು ಎಂದು ಬಯಸಿ ಹಾಡಿದ ಕವಿ ಕಲ್ಲಪ್ಪ. ಸತತ ನಾಲ್ಕು ದಶಕ ಡಪ್ಪು ಬಾರಿಸಿ ಹಾಡಿ "ಹೊಳೆಯ ದಂಡಿಯ ಮೇಲಿರುವ ಕರಿಕೆಯ ಕುಡಿಯಂಗತೆ ಹಚ್ಚ ಹಸಿರಾಗಿ ಕಂಗೊಳಿಸುತ್ತಿದ್ದಾನೆ.

■

## ಕಲ್ಲಪ್ಪನ ದೃಷ್ಟಿ – ಲಾವಣಿಹಾಡಿನ ಸೃಷ್ಟಿ

ಕಡಣಿಯ ಕಲ್ಲಪ್ಪ ಗೀಗೀ ಹಾಡಿನ ಮೂಲಕ ಕುಟುಂಬದಲ್ಲಿ ಸೊಗಸುಗಾರಿಕೆಯನ್ನೂ ತಂದು ಕೊಡುವಲ್ಲಿ ಶ್ರಮಿಸಿದ. ಸಮಾಜಕ್ಕೆ ಹೊಸ ತಿರುವುನ್ನು ತಂದುಕೊಡಲು ಪ್ರಯತ್ನಿಸಿದ. ಕನ್ನಡ ನಾಡಿನಲ್ಲಿ ಆಗಿ ಹೋದ ಶರಣರ–ಸಂತರ ಸಜ್ಜನರನ್ನಷ್ಟೇ ಕುರಿತು ಹಾಡು ರಚಿಸಿ ಹಾಡಲಿಲ್ಲ. ಅದರಂತೆ ಸೃಷ್ಟಿ–ಸ್ಥಿತಿ–ಲಯಗಳನ್ನು ಕುರಿತು ಹಾಡುವುದನ್ನು ಮರೆಯಲಿಲ್ಲ. ಜೀವ ಜಗತ್ತನ್ನು ಕುರಿತು ಚಿಂತನೆ–ಮಂಥನ ನಡೆಸದೇ ಇರಲಿಲ್ಲ. ಪ್ರಕೃತಿ ಪುರುಷರ ಸಂಬಂಧ ಕಲ್ಪಿಸುವಾಗಲೂ ಹೆಣ್ಣು–ಗಂಡಿನ ಹೋಲಿಕೆ ನೀಡುತ್ತಾನೆ.

"ಗಂಡ–ಹೆಣ್ಣ ಸವನೆಂದು ಪುಂಡ ನಾಗೇಶಿ
ಭಂಡಕವಿ ಒದರುದ್ಯಾಕ? ನಿಂತಿದಿ ಹಾಡುವುದಕ !
ಆಕಾರಾಗುಕಿನ್ನ ಪೈಲೆ ನಿರಾಕಾರ ಗಂಡ ಇತ್ತು
ಗೊಳ್ಳು ವಿದ್ಯಾದೇನೋ ಇದು ಬಾಯಿಲೆ ಹೇಳುದಕ !"

ನಿಮ್ಮ ಆದಿಶಕ್ತಿ ಎಲ್ಲಿ ಹೋಗ್ಯಾಳ, ಆಗ್ಯಾಳ ಬಸರ ಹಡಿಲಾಕ ಎಲ್ಲಿಗೆ ಹೋಗ್ಯಾಳ ಎಂದು ನಾಗೇಶಿಗೆ ಕೇಳುತ್ತಾನೆ.

ಪೃಥ್ವಿ ನಿರ್ಮಾಣ ಮಾಡಬೇಕೆಂದು ಪಡದ ಸ್ತ್ರೀ
ಇಚ್ಛಾದಿಂದ ಇಚ್ಛಾಶಕ್ತಿ ಹುಟ್ಟಿ ಬಂದ ನಿಂತಾಳ ಹಂತ್ಯಾಕ
ಇಚ್ಛಾದಿಂದ ಹುಟ್ಟಿದಾರೆ ಹೆಚ್ಚಿನಾಕಿ ಹ್ಯಾಂಗ ಆಗ್ತಿ
ಹಿಂದಿನಿಂದ ಹುಟ್ಟಿ ಯಾಕ ಬಿದ್ಲು ಗಂಡಸಲ ಬಲ್ಯಾಕ
ನಿನಗ ನಾಚಿಕೇರ ಬರ್‍ತಾದೇನೋ ದೊಡ್ಡಾಕಿ
ಅಲ್ಲಾಕ ಹಾಂ ಜೀಜೀ"s

ಎಂದು ಹೀಯಾಳಿಸುತ್ತಾನೆ.

"ಭೂಮಿ ಹೆಚ್ಚು ಅಂದ ಮ್ಯಾಲ
ಮಳಿ ಇಲ್ಲದ ಬೆಳಿ ಮಾಡ್ರಿ ಅಂದ್ರ ಖರೇ
ಕಾಣತೈತಿ ಕೂತ ಜನಕ

ಹಸ್ತ ಭೂಮಿ ಎರಿಬಿಡಿ ಸೆಳೆದು ಕಿಸ್ತಯಾಕ
ಕೊಡತ್ತೈತ್ರಿ
ಮುಚ್ಚಾವ ಯಾರಿಲ್ಲ ಮೇಘರಾಜ ಬರೂತನಕ !
ನಾನು ಸುಳ್ಳಂದ್ರ ಕೇಳು ಕುಂತ ಜನಕ ಹಾ"ಜೀಜೀ"

ಎಂದು ಹರದೇಶಿ ಕವಿ ಕಲ್ಲಪ್ಪ ತನ್ನ ಪಂಥ್ಯವನ್ನು ಸಮರ್ಥಿಸಿಕೊಳ್ಳುತ್ತ ಗಂಡೇ ಆದಿ ಎನ್ನುವ ಸಿದ್ಧಾಂತಕ್ಕೆ ಬಂದು ತಲುಪುತ್ತಾನೆ. ಪ್ರಕೃತಿ ಪುರುಷರಿಗೆ ಭೂಮಿ ಮತ್ತು ಮಳೆರಾಯನ ಹೋಲಿಕೆ ಕೊಡುತ್ತಾನ. ಮಳಿ ಇಲ್ದ ಬೆಳಿ ಮಾಡ್ರಿ? ಎಂದು ಪ್ರಶ್ನಿಸುತ್ತಾನೆ.

ಮಳೆ ಬರದಿದ್ದರೆ ನಿಮ್ಮ ಭೂಮಿ ಎರಿಬಿಡಿ ಬಿಟ್ಟು ಹೋಗುತ್ತದೆ ಎಂದು ಮೂಲ ಪ್ರಶ್ನೆಗೆ ಕೈ ಹಾಕುತ್ತಾನೆ.

"ನಾದ ನಗಾರಿಮ್ಯಾಲ ಗುಂಡ ಹೊಡದಾಂಗ
ಗಂಡನ ತುರಾಯಿ ಮೂರು ಲೋಕಕ"

ಎದು ಹೇಳುತ್ತ

"ಅಡಗಿ ಮನ್ಯಾಗ ಕುಂತ
ಗಡಿಗಿ ತೊಳೆಯುವ ಮೂಳ
ನನ್ನಿಂದ ನಿನ್ನ ಮುತ್ತೈದಿ ಬೆಳಕ".

ಎಂದು ಕೂಡಿದ ಸಭೆಯಲ್ಲಿ ಸಾರಿ, ಸಾರಿ ಹೇಳುತ್ತಾನೆ.

"ಪತಿಯೇ ದೇವರೆಂದು ಗಂಡನ ಸೇವೆ
ಮಾಡುವುದರಿಂದಲೇ ಹೆಣ್ಣಿನ ಸದ್ಗತಿ"

ಎನ್ನುವ ತತ್ವಗಳ ಮಹತ್ವವನ್ನು ದೃಢ ಪಡಿಸುತ್ತಾನೆ. ಲೋಕದಲ್ಲಿ ಗಂಡ-ಜಾತಿಯೇ ಮೇಲು -ಹೆಣ್ಣು-ಗಂಡಿನ ಇಚ್ಛಾಶಕ್ತಿಯಿಂದ ಜನಿಸಿದವಳು. ಶಿವನಲ್ಲಿಯೇ ಶಕ್ತಿ ಇದ್ದಾಳೆ ಎಂದು, ಗಂಡು ಹೆಣ್ಣುಗಳೆಂದು ಸಮಾನ ತತ್ವಕ್ಕೆ ಬಂದಾಗ ಅಲ್ಲಿ ಪ್ರೇಮಾಂಕುರವಾಗುವುದು. ಗಂಡು-ಹೆಣ್ಣಿನ, ಹೆಣ್ಣು-ಗಂಡಿನ ರೂಪ-ಲಾವಣ್ಯ, ನಡೆ-ನುಡಿಗಳಿಗೆ ಸೋತು ಒಂದರೊಳಗೊಂದು ಕೂಡಬೇಕೆಂದು ಹಾತೊರೆಯುತ್ತಾರೆ. ಆಗ ಭೂಮಿಯ ಮೇಲೆ ಗಂಡು-ಹೆಣ್ಣಿನ ಬದುಕು ಪ್ರಾರಂಭವಾಗುತ್ತದೆ. ಈ ಅದ್ಭುತ ದೃಶ್ಯ ನಾಗೇಶಿ-ಹರದೇಶಿ ಹಾಡಿನಲ್ಲಿ ನಾವು ಕಾಣುತ್ತೇವೆ. ಹೀಗೆ ಕವಿ ಕಲ್ಲಪ್ಪನ ಹಾಡು ದೃಷ್ಟಿ ಚಾಚಿದಷ್ಟು ವಿಶಾಲ. ಹರಿಯ ಬಿಟ್ಟಷ್ಟು ದೂರ ಎಂದು ಹೇಳಬಹುದು.

■

## ಶೃಂಗಾರ ರಸ ಲಾವಣಿಗೆ ಬಂಗಾರವಿದ್ದಂತೆ

ಲಾವಣೀ ಸಾಹಿತ್ಯಕ್ಕೆ ಶೃಂಗಾರ ರಸವೇ ಪ್ರಧಾನವಾದ ರಸ. ಈ ಶೃಂಗಾರ ರಸ ಲಾವಣಿ ಸಾಹಿತ್ಯಕ್ಕೆ "ಬಂಗಾರಕ್ಕೆ ಕುಂದಣ" ವಿಟ್ಟಂತೆ. ಅಷ್ಟು ಅಪರೂಪ ಈ ಶೃಂಗಾರ ರಸ. ಈ ರಸವನ್ನು ಮೆಚ್ಚಿಕೊಂಡು ಶ್ರೀ ಸಾಮಾನ್ಯರು ಲಾವಣೀ ಅಥವಾ ಗೀಗೀ ಹಾಡುಗಳನ್ನು ತುಂಬಾ ಮೆಚ್ಚಿಕೊಂಡಿದ್ದರು. ಅಂತೆಯೇ ಅವರು ತಮಗೆ ಬಿಡುವು ಸಿಕ್ಕಾಗ ಅಥವಾ ಇನ್ನಿತರ ಶುಭ ಪ್ರಸಂಗಗಳಲ್ಲಿ 'ಗೀಗೀ' ಮೇಳಗಳಿಗೆ ಆಮಂತ್ರಿಸಿ ಸಂಭ್ರಮದಿಂದ ಎಲ್ಲರೂ ಒಂದೆಡೆ ಕೂಡಿ 'ಗೀಗೀ' ಹಾಡು ಕೇಳಿ ನಕ್ಕು ನಲಿದು ಸಂತೋಷ ಪಟ್ಟ ಶುಭ ಪ್ರಸಂಗಗಳು ಅದೆಷ್ಟೋ!

'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ನಾಣ್ನುಡಿಯಂತೆ ನಮ್ಮ ಲಾವಣೀ ಕವಿ ಅಥವಾ ಹಾಡುಗಾರ ಕೇವಲ ಈ ಶೃಂಗಾರ ರಸಕ್ಕೆ ಮಣಿ ಹಾಕದೆ ತನ್ನ ಹಾಡಿನಲ್ಲಿ ಹಾಸ್ಯ, ವಿನೋದಗಳೊಡನೆ ವಿಡಂಬಿಸುತ್ತ ಚಾಟಿ ಏಟು ಕೊಟ್ಟು ಜನ ಜಾಗೃತಿ ಮಾಡಿದ್ದಾನೆ. ಜೊತೆಗೆ ಸಾಧು-ಶರಣರ, ಸಂತ ಶಿರೋಮಣಿಗಳ ಚರಿತ್ರೆಗಳನ್ನು ರಚಿಸಿ ಜನರ ಹೃದಯದಲ್ಲಿ ಭಕ್ತಿಯ ಬೀಜವನ್ನು ಬಿತ್ತಿದ್ದಾನೆ. ಐತಿಹಾಸಿಕ ಮಹಾಪುರುಷರ ಜೀವನ ಚರಿತ್ರೆಗಳನ್ನು ರಚಿಸಿ ಹಾಡಿ ಜನರಲ್ಲಿ ವೀರಶ್ರೀಯನ್ನು ತುಂಬಿದ್ದಾನೆ. ವಿಭೂತಿ ಪುರುಷರನ್ನೊಳಗೊಂಡು ರಚಿಸಿದ ತತ್ವಪದ, ಆಧ್ಯಾತ್ಮ ಗೀತೆಗನ್ನು ರಚಿಸಿ ಹಾಡಿ ಜನರನ್ನು ಬೆರಗುಗೊಳಿಸಿ ತಾನು ಯಾರು? ಎಂಬ ಅರಿವು ಮೂಡಿಸಿದ್ದಾನೆ. ಹೀಗೆ ಸ್ವಾಭಿಮಾನ, ಆತ್ಮಾಭಿಮಾನಗಳನ್ನು ಬಿತ್ತುವುದರೊಂದಿಗೆ ಆಧ್ಯಾತ್ಮದ ಬೆಳಕನ್ನು ತಂದು ಕೊಟ್ಟ ಕವಿ ಕಡಣಿಯ ಕಲ್ಲಪ್ಪ.

ನಿಜವಾಗಿ ಕಡಣಿಯ ಕಲ್ಲಪ್ಪ ತುಬ ವಿನೋದ ಪ್ರಿಯ, ಹಾಸ್ಯಗಾರ, ಹಾಸ್ಯದ ಚಟಾಕಿ ಹಾರಿಸುತ್ತ, ಡಪ್ಪು ಬಾರಿಸುತ್ತ ಬಯಲು ರಂಗ ಮಂಟಪದ ಅಟ್ಟ ಏರಿ ಗಟ್ಟಿಯಾಗಿ ನಿಂತು ಹಾಡಿ ಜನರನ್ನು ಹಾಸ್ಯದ ಹರಿಗೋಲು ಹಾಕಿ ನಗೆ ಗಡಲಲ್ಲಿ ತೇಲಿಸುತ್ತಿದ್ದ. ಅವನು ರಚಿಸಿದ ಶೃಂಗಾರ ಕಾವ್ಯ ಇಲ್ಲಿ ಅವಲೋಕಿಸಬಹುದು.

"ಕಾಜಿನ ಗೊಂಬಿಯಂತ ಹುಡಗಿ
ಹೊಂಟಿ ಮೋಜ ಮಾಡಿ

ಬಿಟ್ಟಾಂಗಾತು 'ಮೇಲ್' ಗಾಡಿ
ಬಹಳ ಮಂದಿ ನಿಂತ ನೋಡಿ
ಮಾಡತಾರ ಇಕಿನ ನೋಡಿ ಹಾ ಜೀ ಜೀ.

"ಎಲ್ಲಿ ಇಲ್ಲ ಬಂದೆ ಹಾಡುಕಾಡಿ
ಸೂಲದ ಹಲ್ಲಿಗೆ ಹಚ್ಚಿ ಹಲ್ಪುಡಿ
ಲೋಕದೊಳಗೆ ಇಂತಹ ರೂಪಕ !
ಹುಟ್ಟಿಸಿದ ಬ್ರಹ್ಮ ಎಂಥ ಕಿಡಗೇಡಿ
ಹಾ ಜೀ ಜೀ"

ಹೀಗೆ ಒಂದು ಹೆಣ್ಣು ಹುಡುಗಿಗೆ ಕಾಜಿನ ಗೊಂಬೆಯ ಉಪಮೆ ಕೊಡುತ್ತಾನೆ. ಅವಳ ನಡಿಗೆ ಪ್ಯಾಸಿಂಜರ ರೈಲು ಅಲ್ಲ 'ಮೇಲ್' ಗಾಡಿ ಎಂದು ಹೇಳುತ್ತಾನೆ. ಅವಳು ಅದೇ ಆಗ ಬಂದ ಸೂಲದ ಹಲ್ಲಿಗೆ ಇಟ್ಟ 'ಹಲ್ಲುಪುಡಿ' ಕಪ್ಪು – ಬಿಳುಪಿನ ಚಿತ್ರ ನೋಡಿದಂತೆ ಎಂದು ಬಣ್ಣಿಸುತ್ತಾನೆ. "ಲೋಕದೊಳಗ ಇಂತಹ ರೂಪ" ವತೆಯನ್ನು ಆ ಕಿಡಿಗೇಡಿ ಬ್ರಹ್ಮ ಈ ಭುವಿ ಬಾಳು ಹದಗೆಡಿಸಲೆಂದೇ ಹುಟ್ಟಿಸಿದ್ದಾನೆ ಎಂದು ವಿಡಂಬಿಸುತ್ತಾನೆ. ಇಂತಹ ಅಪರೂಪದ ದೃಶ್ಯಗಳನ್ನು "ಬಹಳ ಮಂದಿ ನಿಂತು ನೋಡಿ ಮಾತಾಡತಾರ" ಎಂದು ಸಭೆಗೆ ಪರಿಚಯಸಿ ಕೊಡುತ್ತಾನೆ. ಕಡಣಿಯ ಕಲ್ಲಪ್ಪ ಇಂತಹ ಶೃಂಗಾರ ರಸಗಳನ್ನು ಹಾಡುವಾಗ ತಾಳ ಕಟೆಯುತ್ತ ನಬಿಗೌಡ, ಅವನ ಮಗ ವಿಠ್ಠಲ ತುಂತುನಿ ಬಾರಿಸುತ್ತ ಮುಂದೆ ಹಾಡುವ ಕಲ್ಲಪ್ಪನ ಹಾಡಿಗೆ ಹಾಸ್ಯದ ಮಿಂಚು ಹುಟ್ಟಿಸುತ್ತಿದ್ದರು. ಕಲ್ಲಪ್ಪ ಯಾವುದೇ ಹಾಡು ಬರೆದು ಹಾಡಿದರೂ ಅಲ್ಲಿ ಸಮಾಜಕ್ಕೆ ಕೊಡುವ ಒಂದು ಪಾಠವಿರುತ್ತಿತ್ತು. ಕಲ್ಲಪ್ಪ ಸಮಾಜ ಸೇವಕ ಅಷ್ಟೇ ಅಲ್ಲ. ಸಮಾಜ ಶಿಕ್ಷಕನೂ ಆಗಿದ್ದ. ಎಲ್ಲದ್ದಕ್ಕೂ ಮಿಗಿಲು ಅವನ ಬಹರ. ಅವನ ಬದುಕು ಬರಹದಲ್ಲಿ ಹಾಸು ಹೊಕ್ಕಾಗಿತ್ತು. ಹೀಗೆ ನಡೆ ನುಡಿ ಒಂದಾದ ಹಾಡುಗಾರ ನಿಜವಾಗಿಯೂ ಅಪರೂಪ. ಅಂತಹ ಅಪರೂಪದ ವ್ಯಕ್ತಿ ಕಡಣಿಯ ಕಲ್ಲಪ್ಪ.

■

# ಸಮಾಜದಲ್ಲಿ ಕಡಣಿಯ ಕಲ್ಲಪ್ಪನ ಸ್ಥಾನ–ಮಾನ

ಕಡಣಿಯ ಕಲ್ಲಪ್ಪ ತನ್ನ ಊರು ಕಡಣಿಯ ಗ್ರಾಮದಲ್ಲಿ ಹತ್ತು ಸಮಸ್ತರಲ್ಲಿ ಅವನೂ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದ. ಕಲ್ಲಪ್ಪ ಹಾಡುಗಾರಿಕೆಯನ್ನು ತನ್ನ ಹೊಟ್ಟೆ ಹೊರೆಯುವ ಉದ್ಯೋಗವೆಂದು ಭಾವಿಸಿರಲಿಲ್ಲ. ತೀರ ಚಿಕ್ಕ ವಯಸ್ಸಿನಲ್ಲಿ ತನಗೆ ದೈವದತ್ತವಾಗಿ ಬಂದ ಕಲೆ ಹಾಡುಗಾರಿಕೆ ಸಮಾಜ ಸೇವೆಗೆ, ರಾಷ್ಟ್ರಸೇವೆಗೆ, ಆಧ್ಯಾತ್ಮ ಸಾಧನೆಗೆ ಮುಡಿಪಾಗಿ ಇಟ್ಟಿದ್ದ. ಸಂದರ್ಭಕ್ಕನುಸರಿಸಿ ಹಾಡು ಕಟ್ಟಿ ಡಪ್ಪು ಬಾರಿಸಿ ಮೇಳದೊಂದಿಗೆ ಹಾಡಿ ತಾನೂ ಹರುಷಪಟ್ಟ. ಸಭಿಕರನ್ನು ಸಂತೋಷಸಾಗರದಲ್ಲಿ ತೇಲಿಸಿದ.

ಕಡಣಿಯ ಕಲ್ಲಪ್ಪ ಅಕ್ಷರಾಭ್ಯಾಸದೊಡನೆ ಸಾಕ್ಷರನಾಗಲು ಹಗಲಿರಳು ಶ್ರಮಿಸ ತೊಡಗಿದ. ಖಾಸಗಿ ಶಾಲೆಯಲ್ಲಿ ತನಗೆ ದೊರೆತ ಅಲ್ಪ ಶಿಕ್ಷಣದ ಹಸಿವು ಹಿಂಗಿಸಿಕೊಳ್ಳಲು ರಾಮಾಯಣ, ಮಹಾಭಾರತ ಕಥೆಗಳನ್ನು ಓದಿ ವಿಷಯ ತಿಳಿದುಕೊಂಡು ಸಂಗ್ರಹಿಸತೊಡಗಿದ. ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ, ಧಾರ್ಮಿಕ ಕ್ರಾಂತಿ ಮಾಡಿದ ಬಸವಾದಿ ಶರಣರ ಚರಿತ್ರೆಗಳನ್ನು ಓದಿ ಅರಿತುಕೊಂಡ. ಅಂದು ಖಾಸಗಿ ಶಾಲೆಯಲ್ಲಿ ಕಲಿಸುತ್ತಿದ್ದ ಕನ್ನಡ, ಮೋಡಿ ಭಾಷೆಯಲ್ಲಿ ಓದುವುದು ಬರೆಯುವುದನ್ನು ಮುಂದುವರಿಸಿಕೊಂಡು ಬಂದ. ಆ ಕಾಲದಲ್ಲಿ ಬೀಸುವಾಗ ಕಟ್ಟುವಾಗ ಹೆಣ್ಣುಮಕ್ಕಳು ಹಾಡುತ್ತಿದ್ದ ತ್ರಿಪದಿಗಳನ್ನು ಆಲಿಸಿ ಕೇಳ ತೊಡಗಿದ. ಗಂಡುಮಕ್ಕಳು ಗಳೆಹೊಡೆಯುವಾಗ ಹೊಲ ಹರಗುವಾಗ, ಉತ್ತುವಾಗ, ಬಿತ್ತುವಾಗ ಜೋಳ ಕೊಯ್ಯುವಾಗ ಸೂಡು ಕಟ್ಟುವಾಗ ಗೂಡು ಒಟ್ಟುವಾಗ, ಕಣ ಕಡಿದು ತೆನಿಮುರಿಯುವಾಗ, ರಾಶಿ ಮಾಡುವಾಗ ಹಾಡುತ್ತಿದ್ದ ಹಾಡುಗಳನ್ನು ಕೇಳಿ ಪ್ರಭಾವಿತನಾದ. ಕಡಣಿಯ ಕಲ್ಲಪ್ಪನ ಎದೆಯಲ್ಲಿ ಕಾವ್ಯ ಝರೆ ಮೂಡಿತು. 'ಗೀಗೀ ಹಾಡಿನ ರೂಪ ತೊಟ್ಟು ಹೊರಹೊಮ್ಮಿ ಬಂದಿತು. ಶರಣ ಜೀವಿಯಾದ ಕಡಣಿಯ ಕಲ್ಲಪ್ಪ ಅತ್ಯಂತ ಭಕ್ತಿಯಿಂದ ಸೊನ್ನಾಲಾಪೂರದ ಸಿದ್ಧರಾಮೇಶ್ವರ ಚರಿತ್ರೆ, ದ್ವಿತೀಯ ಶಂಭು ಎಂದು ಪ್ರಖ್ಯಾತನಾಗಿದ್ದ ಕಲಬುರ್ಗಿ ಶರಣಬಸವೇಶ್ವರ ಚರಿತ್ರೆ ಸೂಫಿ ಸಂತನೆಂದು ಖ್ಯಾತವೆತ್ತ ಖಾಜಾ ಬಂದೆ ನವಾಜರ ಚಾರಿತ್ರಿಕ ಕಾವ್ಯಗಳನ್ನು ಕಟ್ಟಿ ಜಾತ್ರೆ, ಉರುಸುಗಳಂತಹ ಸಂಭರ್ಗಗಳಲ್ಲಿ ಹಾಡಿ ಜನಪ್ರಿಯತೆಯನ್ನು ಗಳಿಸ ತೊಡಗಿದ.

ತನ್ನ ಕಣ್ಣುಮುಂದೆ ನಿತ್ಯನಡೆಯುತ್ತಿದ್ದ 'ಸ್ವಾತಂತ್ರ್ಯ ಚಳುವಳಿ, ದುಂಡು ಮೇಜಿನ ಪರಿಷತ್ತು 'ಸ್ವದೇಶಿ ಚಳುವಳಿ' ಚಲೇಜಾವ ಚಳುವಳಿ' 'ಮಹಾತ್ಮಾ ಗಾಂಧೀಜಿ' ಶೂರ ಸುಭಾಷಚಂದ್ರ ಬೋಸ, ಪಂಡಿತ ಜವಾಹರಲಾಲ ನೆಹರು ಮುಂತಾದ ದೇಶಭಕ್ತರ ಚರಿತ್ರೆಗಳನ್ನು ಬರೆದು ಹಾಡಿ ಹೌದೆನಿಸಿಕೊಂಡ ಬಂದ ಬಹದೂರ ಕಡಣಿಯ ಕಲ್ಲಪ್ಪ.

ಐತಿಹಾಸಿಕ ಪುರುಷರಾದ 'ಛತ್ರಪತಿ ಶಿವಾಜಿ' ಕಿತ್ತೂರ ರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಟಿಪ್ಪು ಸುಲ್ತಾನ ಮುಂತಾದ ಶೂರ ಪುರುಷರ ವೀರ ಗೀತೆಗಳನ್ನು ಬರೆದು ಹಾಡಿ ಜನರಲ್ಲಿ ಸ್ವಾಭಿಮಾನ ಮೂಡಿಸಿದ ಕವಿ ಹಾಡುಗಾರ ಕಡಣಿಯ ಕಲ್ಲಪ್ಪ.

ಸಮಾಜ ಸುಧಾರಕರು, ಸಮಾಜ ಸೇವಕರು, ಸ್ವಾತಂತ್ರ್ಯ ಹೋರಾಟಗಾರರು ಆದ ರಾಜಪ್ಪ ವೀರಭದ್ರಪ್ಪ ಕಳಸಗೊಂಡ ಕಡಣಿ, ಶಿವಪ್ಪ ಸಿದ್ದಪ್ಪ, ಕೊನೆಕ್ ರೇವಪ್ಪ, ಮಹಾಜನ ಕಡಣಿ, ಮುಗುಳಿ ಬೋಂತೆ ಅಜ್ಜಗೊಳ ಪರಪ್ಪ, ತೆಲಗಿ ಅಜ್ಜ, ಸೋಲಾಪೂರ ದಾನಶೂರ ವಾರದ ಮಲ್ಲಪ್ಪನವರು ಕುರಿತು ಹಾಡಿದ ಹಾಡು ಕೇಳಿ ಕಡಣಿಯ ಕಲ್ಲಪ್ಪನ ಮೇಲೆ ತುಂಬಿದ ಸಭೆಯಲ್ಲಿ ರೊಕ್ಕ ಹಾರಿಸಿ ತಮ್ಮ ಸಂತೋಷ ಹಂಚಿಕೊಂಡ ಜನ ಅದೆಷ್ಟೋ.

ಕಡಣಿಯ ಗ್ರಾಮದಲ್ಲಿ ಜನ ಕಡಣಿಯ ಕಲ್ಲಪ್ಪನವರಿಗೆ ಜನರು "ಕಲ್ಲಪ್ಪಣ್ಣಾ" ಎಂದು ಬಾಯ್ತುಂಬ ಕರೆಯುತ್ತಿದ್ದರು. ಊರಲ್ಲಿ ಏನೇ ನ್ಯಾಯ ತಂಟೆಗಳಾದರೆ ಹತ್ತು ಜನರಲ್ಲಿ ಕವಿ ಗೀಗೀ ಹಾಡುಗಾರ ಕಡಣಿಯ ಕಲ್ಲಪ್ಪ ಇರಲೇಬೇಕು.ಕಡಣಿಯ ಕಲ್ಲಪ್ಪ ತಲೆಯ ಮೇಲೆ ರುಮಾಲು ಬಿಳಿಯ ಧೋತರ ಕೈ ಕಪ್ಪು, ಕಾಲರ್ ಹಚ್ಚಿದ ಅಂಗಿ ಹಣೆಯ ಮೇಲೆ ವಿಭೂತಿ ತಿದ್ದಿ ತೀಡಿದ ಕುಡಿ ಮೀಸಿ ಹುರಿಹೊಡೆದ ಕವಿ ಕಡಣಿಯ ಕಲ್ಲಪ್ಪ ಹೊರಟರೆ 'ದೇಶಭಕ್ತ' ಸಮಾಜ ಸೇವಕ, ಗಾಂಧಿವಾದಿ ಶರಣ ಕಲ್ಲಪ್ಪಣಾ ಎಂದು ಜನರು ಕೈಮುಗಿದು ತುಂಬ ಗೌರವದಿಂದ ಕಾಣುತ್ತಿದ್ದರು. ಹೊಟಗಿ ಶ್ರೀಮಠದ ಪರಮಭಕ್ತರಾದ ಕಲ್ಲಪ್ಪನ ನಡೆಯೂ ನೇರ, ನುಡಿಯು ನೇರ. ಅವರ ಈ ನಡೆ–ನುಡಿ ಗಮನಿಸಿದ ಜನ ಮೆಚ್ಚಿಕೊಳ್ಳುತ್ತಿದ್ದರು. ನ್ಯಾಯ ನಿಷ್ಠೂರ ಎಂಬ ಖ್ಯಾತಿಯು ಅವರಿಗಿತ್ತು. ಯಾರಿಗೂ ಅಂಜುತ್ತಿರಲಿಲ್ಲ, ಧೈರ್ಯಶಾಲಿ ಮನುಷ್ಯ. ಅವರೇ ಹೇಳಿದಂತೆ

"ಕೆದರಿ ಜಗಳ ತೆಗಿಬ್ಯಾಡ
ಬೆದರಿ ಹೋಗಾಂವ ನಾನಲ್ಲ.
ಬಲ್ಲವರಿಗೆ ಭಾವ ಅರಿತಂತೆ
ಒಳ್ಳೆಯ ಗುಣ"

ಶರಣ ಕಲ್ಲಪ್ಪ ಯಾರೊಡನೆಯೂ ಜಗಳ ತೆಗೆಯುತ್ತಿದ್ದಿಲ್ಲ. ಕಣ್ಣು ಕಿಸಿದು ಕಾಲ ಕೆದರಿ ಜಗಳ ತೆಗೆದವರಿಗೆ ಅಂಜಿ ಓಡಿ ಹೋಗುವ ಹೇಡಿಯೂ ಆಗಿರಲಿಲ್ಲ, ಬಲ್ಲವರಿಗೆ ಬೆಲ್ಲದಂತೆ, ಅರಿತವರಿಗೆ ಅಮೃತ, ಒಳ್ಳೆಯ ಗುಣದವರಿಗೆ ಒಳ್ಳೆಯವನಾಗಿ ನಡೆದುಕೊಳ್ಳುವ ದೊಡ್ಡ ಗುಣ, ಮನಸ್ಸು ಕಡಣಿಯ ಕಲ್ಲಪ್ಪನವರಲ್ಲಿತ್ತು.

ಹಾಡುಗಾರಿಕೆಯಲ್ಲಿ ಹರದೇಶಿ ಹಾಡುಗಾರನಾದ ಕಲ್ಲಪ್ಪನಿಗೆ ನಾಗೇಶಿ ಹಾಡುಗಾರ ಕಲ್ಲಪ್ಪನಿಗೆ "ಕಲ್ಲಪ್ಪ ಕೆಟ್ಟ ಕಲ್ಲ" ಎಂದು ಮೂಗುಮುರಿದು, ಹಾಸ್ಯ ಮಾಡಿ ತುಸು ಗೇಲಿ ಮಾಡಿ ಹಾಡುತ್ತಾನೆ. ಆಗ ರಸಿಕ ಶಿರೋಮಣಿ ಕಡಣಿಯ ಕಲ್ಲಪ್ಪ ನಾಗೇಶಿ ಹಾಡುಗಾರನಿಗೆ

"ಕಲ್ಲಗಿ ನಗತೆ ನಿಂದಾಮಾಡಿ
ಮಣ್ಣಿಲೆ ಬೀಸವ್ವ ಹಾಡಿ ಹಾಡಿ
ಮುಂಜಾನೆದ್ದು ಮುಕ್ಕಹಾಕಿ ತಿರುವುತಿ
ಮೊದಲ ಬೇಕು ಮಾರಾಯ ಕಲ್ಲು
ಮದವಿ ಕಾರ್ಯದಾಗ ಎಲ್ಲಾ ಮಂದಿ ಕೂಡಿ
ಕಲ್ಲು ಪೂಜಾ ಮಾಡಿದಲ್ಲಿ
ಸಂಭ್ರಮ ಮ್ಯಾಲಿಂದ ಮ್ಯಾಲ".

ಹೀಗೆ ತನಗೆ 'ಕಲ್ಲ' ಬಂದು ಹಾಡಿದವನಿಗೆ ಕಲ್ಲು ಸಾಮಾನ್ಯನಲ್ಲ. ಈ ಕಲ್ಲು ನಿತ್ಯ ಜೀವನಕ್ಕೆ ಹಿಟ್ಟು ಬೀಸಿ ಕೊಡುವ ಬೀಸುವ ಕಲ್ಲು. ಮದುವೆ-ಮುಂಜಿವೆ ಮುಂತಾದ ಮಂಗಲ ಕಾರ್ಯದಲ್ಲಿ ಪೂಜೆಗೊಳ್ಳುವ ಒರಳು ಕಲ್ಲು. ಈ ಕಡಣಿಯ ಕಲ್ಲು ಕಲ್ಲಪ್ಪ ಹಾಡಿ ಸಭಿಕರನ್ನು ನಗೆಯ ಕಡಲಲ್ಲಿ ತೇಲಿಸಿದ ಕವಿ ಕಡಣಿಯ ಕಲ್ಲಪ್ಪ.

ನಿಜವಾಗಿ ಕಡಣಿಯ ಕವಿ ಕಲ್ಲಪ್ಪ ಹಾಸ್ಯಗಾರ ಹಸನ್ಮುಖಿ, ವಿನೋದ ಪ್ರಿಯ ನಿಗರ್ವಿ ನಿರ್ಮಲ ಹೃದಯದ ಜನಾಕರ್ಷಣೆಯ ಕವಿ ಕಡಣಿಯ ಕಲ್ಲಪ್ಪ.

ಕಡಣಿಯ ಗ್ರಾಮದಲ್ಲಿ ೧೯೫೪ರಲ್ಲಿ ನಡೆದ ಒಂದು ಘಟನೆ 'ಸರಕಾರ' ರೈತರಿಗೆ ನೀಡಿದ ಒಡ್ಡಿನ ಸಾಲದ ದುರುಪಯೋಗವಾಗಿತ್ತು. 'ಈ ವಿಷಯ ಕುರಿತು ವಿವರವಾದ ಮಾಹಿತಿ ನೀಡಲು ಅಂದು ಕಡಣಿಯ ಗ್ರಾಮಕ್ಕೆ ವಿಜಾಪೂರ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಗಮಿಸಿದ್ದರು. ಅವರ ಜೊತೆಗೆ ಸಿಂದಗಿ ತಾಲೂಕಿನ ಶಾಸಕರಾದ ಪಡಗಾನೂರು ಶಂಕರಗೌಡರೂ ಆಗಮಿಸಿದ್ದರು. ಕಡಣಿಯ ಗ್ರಾಮದಲ್ಲಿ ಊರ ಜನರೆಲ್ಲ ಕಿಕ್ಕಿರಿದು ನೆರೆದಿದ್ದರು, ಕಿಕ್ಕಿರಿದು ನೆರೆದ ಸಭೆಯಲ್ಲಿ ಕಡಣಿಯ ಕಲ್ಲಪ್ಪ ತಾನು ರಚಿಸಿದ "ಸಾಲದ ದುರುಪಯೋಗ" ಕುರಿತು ರಚಿಸಿದ ಗೀಗೀ

ಹಾಡನ್ನು ಹಾಡಿದ. ಈ ಹಾಡನ್ನು ಕೇಳಿ ಕಡಣಿ ಗ್ರಾಮಕ್ಕೆ ಆಗಮಿಸಿದ ಜಿಲ್ಲಾಧಿಕಾರಿಗಳು" ಶಾಸಕರಾದ ಪಡಗಾನೂರು ಶಂಕರಗೌಡರು ನಾನು ಹೇಳಬೇಕಾದ ವಿಷಯವನ್ನು ನಿಮ್ಮೂರ ಕವಿ ಕಡಣಿಯ ಕಲ್ಲಪ್ಪ ಸವಿಸ್ತಾರವಾಗಿ ಹಾಡಿ ನಿಮಗೆ ಮನವರಿಕೆಗೆ ಮಾಡಿ ಕೊಡುವುದರ ಜೊತೆಗೆ ಎಚ್ಚರಿಕೆಯ ಮಾತನ್ನು ಸೇರಿಸಿ ಹಾಡಿದ್ದಾನೆ. ಹೊಸದಾಗಿ ನಾನು ಹೇಳಬಾಕಾದುದು ಇಲ್ಲ ಎಂದು ಕೂಡಿದ ಸಭೆಯಲ್ಲಿ ಕವಿ ಕಡಣಿಯ ಕಲ್ಲಪ್ಪನಿಗೆ ಹಾರ ಹಾಕಿ ಬೆನ್ನು ಚಪ್ಪರಿಸಿ ಹೃದಯ ತುಂಬಿ ಹರಸಿ ಹಾರೈಸಿ ಹೋದ ಸಂಗತಿ ಊರಿನ ಜನರು ಹೆಮ್ಮೆಯಿಂದ ಹೇಳುತ್ತಾರೆ.

ಈ ರೀತಿ ಕಡಣಿಯ ಕಲ್ಲಪ್ಪ ತನ್ನ ಊರಲ್ಲಿ ಎಲ್ಲ ಜನರ ಪ್ರೀತಿಗೆ ಪಾತ್ರನಾಗಿ ಹಿತವಂತನಾಗಿ, ಮತಿವಂತನಾಗಿ, ನೀತಿವಂತನಾಗಿ, ಅಜಾತ ಶತೃವಾಗಿ ಬಾಳುತ್ತಿದ್ದ. ಈ ಕಲೆ ಕಲ್ಲಪ್ಪನಿಗೆ ಕರಗತವಾಗಿತ್ತು. ಊರ ಜನರೆಲ್ಲರೂ ಹೀಗೆ ಒಬ್ಬರನ್ನೊಬ್ಬರು ಅರಿತು ಬಾಳಿದರೆ ಬದುಕು ನಂದನವನವಲ್ಲವೆ?

■

## ಬಡತನದ ಬವಣೆ–ಶೂನ್ಯ ಸಂಪಾದನೆ

ಕಡಣಿಯ ಗ್ರಾಮದಲ್ಲಿ ಕೆಳಸ್ತರದ ಒಂದು ಬಡ ಕುಟುಂಬದಲ್ಲಿ ಜನಿಸಿ ಬಂದ ಕಡಣಿಯ ಕಲ್ಲಪ್ಪ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಹಾಡಿಗೆ ಹೆಗಲು ಕೊಟ್ಟ ತಾಯಿ – ತಂದೆಗಳ ರಕ್ಷಣೆಯಲ್ಲಿ ಮನೆಯಲ್ಲಿದ್ದ ಚಟ್ನಿ–ರೊಟ್ಟಿ ಉಂಡು ಹಾಯಾಗಿ ಬೆಳೆದು ಬಂದ. ಹಾಡಿನ ರುಚಿಯುಂಡ, ಹಾಡಿನಗುಂಗಿನಲ್ಲಿದ್ದ ಕಲ್ಲಪ್ಪನಿಗೆ ಬಡತನದ ಬಿಸಿ ತಟ್ಟಿರಲಿಲ್ಲ. ಕಲ್ಲಪ್ಪ ವಯಸ್ಸಿಗೆ ಬರುತ್ತಿದ್ದಂತೆ – ತಂದೆ ಗಂಗಣ್ಣ ಕವಿ ಕಲ್ಲಪ್ಪನಿಗೆ ತಕ್ಕ ಕನ್ಯಾ ನೋಡಿ ಮದುವೆ ಮಾಡಿದ. ಯಲ್ಲವ್ವ ಕಲ್ಲಪ್ಪನಿಗೆ ಮಡದಿ, ಕವಿ ಕಲ್ಲಪ್ಪನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು ಕಷ್ಟ ಸುಖಗಳಲ್ಲಿ ಭಾಗಿಯಾಗಿ ಮನೆಯ ಕೀರ್ತಿ–ವಾರ್ತೆಗೆ ಕಾರಣೀಭೂತಳಾದ ಮಹಿಳೆ. ಮನೆಯಲ್ಲಿ ಅತ್ತೆ–ಮಾವ ಹೊರಗೆ ಹೋಗಿ ಹಾಡಿ ಬರುವ ಗಂಡನನ್ನು ನೋಡಿಕೊಂಡು ಕುಟುಂಬದ ಸೊಗಸುಗಾರಿಕೆ ಯನ್ನು ಕಾಪಾಡಿಕೊಂಡು ಬಂದವಳು. ಗಂಡ ಗಳಿಸಿದ ಜನಪ್ರೀತಿ–ವಿಶ್ವಾಸಕ್ಕಿಂತ ದುಡ್ಡು ದೊಡ್ಡದಲ್ಲ ಎಂದು ಬಗೆದ ಸಾಧ್ವಿಶಿರೋಮಣಿ ಯಲ್ಲವ್ವ, ಈ ಇಬ್ಬರೂ ದಂಪತಿಗಳು ಎಂದೂ ಹಣಕ್ಕಾಗಿ ಹಪಾಪಿಸಲಿಲ್ಲ. ಬಡತನಕ್ಕಾಗಿ ಬಳಲಲಿಲ್ಲ. ಕೊಟ್ಟು ನಡೆಸುವ ದೇವರು ದೊಡ್ಡವನೆಂದು ಬಗೆದು ದೇವರ ಮೇಲೆ ಭಾರಹಾಕಿ ಬಡತನದ ಬಾಳು ಸಾಗಿಸಿದಳು. ಕವಿ ಕಲ್ಲಪ್ಪನಿಗೆ ಹಾಡಿನ ಹಿಗ್ಗಿನಲ್ಲಿ ಬಂದ ಅಡಚಣೆಗಳು ಕೊಚ್ಚಿಕೊಂಡು ಹೋದವು. ಗಂಡ–ಹೆಂಡತಿ ಇಬ್ಬರು ಬಡತನ ನಮಗೆ ಭಾಗ್ಯದ ಶಾಲೆ ಎಂದು ಹೇಳುತ್ತಿದ್ದರು.

"ಕವಿಗಳು ಹುಟ್ಟುತಾರ ಕಡಣಿಯ ಊರಾಗ
ಲೇಸೆನಿಸಿ ಕೊಂಡಾವ ಗುರು ಭೊಗೇಶ್ವರ
ಕೂಸು ಕಲ್ಲಪ್ಪ ಹೇಳಿದ್ದ ಇದs ವಿಚಾರ
ಸವಾಲದ ಜವಾಬು ಹೇಳಿರಿ ಬಲ್ಲವರಾ
ಹಾಡಿನ ಉತ್ತರ ಅವರು ಹೇಳಬೇಕು
ಹಾಡ ಕೇಳಿ ಪಾರ ಬಿಡಿರಿ ಉಸಿರಾ
ಇರಬಾರದು ಕಸರಾ"

ಕವಿ ಕಲ್ಲಪ್ಪನ ಬದುಕು–ಬರಹ ಹಾಡಗಾರಿಕೆಗೆ ಬೇರೆ ಬೇರೆ ಅಲ್ಲ. ಒಂದೇ ದೇಟಿನ ಎರಡು ಕುಡಿಗಳು. ಅವನ ಹೆಸರು ಉಸಿರೂ ಸಹ ಕಸಿರಿಲ್ಲದ ಕುಸಿರು. ಅಂತೆಯೇ ಕವಿ ತನ್ನ ಊರು ಕಡಣಿಯನ್ನು ಕುರಿತು ಎದೆ ತುಂಬಿ ಹಾಡುತ್ತಾನೆ. ಮನದುಂಬಿ ಕುಣಿಯುತ್ತಾನೆ. "ಕವಿಗಳು ಹುಟ್ಟುತಾರ ಕಡಣಿಯಲ್ಲೂ ರಾಗ" ಎಂದು ಈ ಊರು ಲೇಸೆನಿಸಿಕೊಂಡು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಗುರು ಭೋಗೇಶ್ವರ ಮಹಾಮಹಿಮಾನ್ವಿತ, ಇಂತಹ ಅಪಾರ ಮಹಿಮನನ್ನು ನೆನೆಯುತ್ತಾ "ಕೂಸು ಕಲ್ಲಣ್ಣ ತನಗೆ ಹಾಕಿದ ಸವಾಲು ಕೇಳಿ ಸಮಂಜಸ ಜವಾಬು ಕೊಟ್ಟನಂತರ ತಾನು ಹಾಕಿದ ಸವಾಲಿಗೆ ಜವಾಬು ಕೊಡಿರಿ ಬಲ್ಲವರಾ" ಎಂದು ಕಾಲರ್ ಹಿಡಿದು ಕೇಳುತ್ತಾನೆ. "ಹಾಡು ಕೇಳಿ ಪಾರ ಬಿಡಿರಿ ಉಸಿರ ಇರಬಾದು ಕಸರಾ" ಎಂದು ಹೇಳುತ್ತಾನೆ. ಕಲ್ಲಣ್ಣ ಕೊಡುವ ಜವಾಬು ಸಮಂಜಸ, ಹಾಡುವ ಹಾಡೂ ಸಮಂಜಸ. ಎರಡರಲ್ಲಿಯೂ 'ಕಸರು' ಎನ್ನುವ ಶಬ್ದವೇ ಇರಲಿಲ್ಲ. ಹೀಗೆ ಕಡುಣಿಯ ಕಲ್ಲಪ್ಪ ತನ್ನ ಬದುಕಿನಲ್ಲಿಯೂ ಶ್ರೀಮಂತ ಹೃದಯದಿಂದಲೂ ಶ್ರೀಮಂತ, ಹಾಡಿನಲ್ಲಿಯೂ ಧೀಮಂತ, ಸಮಾಜದಲ್ಲಿಯೂ ಘನವಂತ.

ಕವಿ ಕಡಣಿಯ ಕಲ್ಲಪ್ಪನಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ನಾಲ್ಕು ಎಕರೆ ಭೂಮಿ, ಊರಲ್ಲಿ ವಾಸಿಸಲು ಒಂದು ಸಣ್ಣ ಮನೆ, ಇದ್ದಷ್ಟರಲ್ಲಿಯೇ ತೃಪ್ತಿಯಿಂದ ಬಾಳಿದ ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು. ಹಿರಿಯ ಮಗ ಏಕನಾಥ, ಎರಡನೆಯ ಮಗ ವಿಠಲ, ಮಗಳು ನೀಲಮ್ಮ ಮೂವರು ಅಪರೂಪದ ಮಕ್ಕಳು. ಕಲ್ಲಪ್ಪ ಮಕ್ಕಳಿಗಾಗಿ ಆಸ್ತಿ ಮಾಡಲಿಲ್ಲ. ಹಾಡಿ ತೋರಿಸಿದಂತೆ "ಮಕ್ಕಳೇ ಆಸ್ತಿ" ಅವರೇ ಬಾಳಿನ ಸಂಪತ್ತು ಎಂದು ಬಗೆದು ಅವರನ್ನು 'ಆಸ್ತಿ'ಯನ್ನಾಗಿ ಮಾಡಲು ಹೆಣಗಾಡಿದ.

ಏಕನಾಥ ಮನೆ ಕಡೆ ನೋಡಿಕೊಂಡು ಹೋಗುತ್ತಿದ್ದರೆ, ವಿಠ್ಠಲ ಅಪ್ಪನ ಹವ್ಯಾಸ. ಹಾಡಿನ ಜಾಡಿಗೆ ಕೈ ಹಾಕೆದ. ನಯವಾಗಿ ಹಾಡುವ ಕಲೆಯನ್ನು ಕರಗತಮಾಡಿ ಕೊಂಡ, ಅಪ್ಪನಂತೆ ಡಪ್ಪಿನ ಮೇಲೆ ಕೈ ಹಾಕಿ ಗೀಗೀ ಹಾಡಿನ ಕ್ಷೇತ್ರ ವಿಸ್ತರಿಸುವ ಹಂಬಲ ಇಟ್ಟುಕೊಂಡ. ಸುಸಜ್ಜಿತ ಮೇಳ ಕಟ್ಟಿದ ಅಲ್ಲಲ್ಲಿ ಹಾಡಲು 'ವೀಳ್ಯೆ' ಸ್ವೀಕರಿಸಿದ, ಹಾಡಿದ. ಅಷ್ಟರಲ್ಲಿ 'ಗೀಗೀ' ಅಥವಾ ಲಾವಣಿ ಹಾಡಿನ ಸುಗ್ಗಿಯೇ ಮುಗಿದು ಹೋಗಿತ್ತು. ಅವನೂ ಅಕಾಲ ಮೃತ್ಯುವಿಗೆ ತುತ್ತಾದ.

ಅದು ೧೯೭೦ರ ಸುಮಾರು ಸಮಾಜ ಹೊಸ ಆಯಾಮಕ್ಕೆ ಮುಖ ಮಾಡಿತ್ತು. 'ರೇಡಿಯೋ' 'ದೂರದರ್ಶನ' ಗಳಂತಹ ಮಾಧ್ಯಮದಲ್ಲಿ 'ಮನರಂಜನೆ' ಕಾರ್ಯಕ್ರಮಗಳು ಹೊಸ ಅಲೆಯೊಂದಿಗೆ ಜನರನ್ನು ಓಲೈಸುತ್ತಿದ್ದವು. ಆಗ ಕವಿ ಕಲ್ಲಪ್ಪನಿಗೆ ಅರವತ್ತು ವರುಷ 'ಆಕಾಶವಾಣಿ' ಯಲ್ಲಿ ಹಾಡಲು ಅವಕಾಶ ಬಂದಿದ್ದರೂ

ನಿರಾಕರಿಸಿದ. ಆಗ ಮಗ ವಿಠ್ಠಲನಿಗೆ ಆ ಎತ್ತರಕ್ಕೆ ಏರುವ ತಾಕತ್ತು ಇರಲಿಲ್ಲ. ಅರವತ್ತು ವರುಷದ ಕವಿ ಕಡಣಿಯ ಕಲ್ಲಪ್ಪನಿಗೆ ತುಸು ನಿರಾಶೆ ಆಯಿತು. 'ಮಕ್ಕಳೇ ಆಸ್ತಿ' ಯಾಗಬೇಕೆಂದು ಬಯಸಿದ್ದ ಕವಿಗೆ ಬಡತನವೇ 'ಆಸ್ತಿ' ಆಯಿತು. ಮುಪ್ಪಿನಲ್ಲಿ 'ಆಸರೆ' ಇಲ್ಲದಂತಾಯಿತು. ಆದರೂ ಬೇಸರಗೊಳಲಿಲ್ಲ. ಶಿವನು ಮಾಡಿದಂತೆ ಆಗಲಿ ಎಂದು ಗಟ್ಟಿ ಧೈರ್ಯಮಾಡಿದ.

ಶರಣ ಸಂಸ್ಕೃತಿಗೆ ಒಳಪಟ್ಟಿದ್ದ ಕಡಣಿಯ ಕಲ್ಲಪ್ಪ ತನ್ನ ಸಂಗಡ ಮೇಳದಲ್ಲಿದ್ದ, ತುಕಾರಾಮ, ನಬಿಗೌಡ, ದಸ್ತಗೀರ ಗುರುಬಸಯ್ಯ ಸ್ವಾಮಿ, ಕೈಲಾಸಯ್ಯ ಸ್ವಾಮಿ ಮತ್ತು ಎಚ್.ಓ. ವಡಗೇರಿ ಇವರೆಲ್ಲರೂ ಕವಿ ಕಲ್ಲಪ್ಪನ ಹಿತವಾದ, ಮಿತವಾದ ಜೀವನ ಕೊಂಡಾಡುತ್ತಾರೆ. ತಮ್ಮ ಹಾಡಿಗೆ ಬರುವ ವರಮಾನವನ್ನಲ್ಲದೆ ಇನ್ನಾವುದಕ್ಕೂ ಕೈ ಚಾಚುತ್ತಿದ್ದಿಲ್ಲ. ತನ್ನ ಹರೆಯದ ಕಾಲದಲ್ಲಿ ಬ್ರಿಟಿಷರ ವಿರುದ್ಧ ಹಾಡುವಾಗ ಬ್ರಿಟಿಷರು ಒಡ್ಡಿದ ಹಣದ ಆಶೆಗೆ ಬಲಿ ಬಿಳದೆ ಅವರ ವಿರುದ್ಧ ಹೋರಾಡಿದ ಪುರುಷ ಸಿಂಹ ಕಡಣಿಯ ಕಲ್ಲಪ್ಪ, ದೇಶಾಭಿಮಾನವನ್ನು, ಸ್ವಾಭಿಮಾನವನ್ನು, ಆತ್ಮಾಭಿಮಾನವನ್ನು ಮೆರೆದ ಕಡಣಿಯ ಕವಿ ಕಲ್ಲಪ್ಪ ಒಬ್ಬ ಆತ್ಮಾಭಿಮಾನಿ, ಆಧ್ಯಾತ್ಮ ಜೀವಿ, ಶರಣ ಜೀವಿ, ತನ್ನ ಹಾಡಿನಲ್ಲಿ ಶರಣ ತತ್ವವನ್ನು ಬಿತ್ತರಿಸಿದಂತೆ ತನ್ನ ಬದುಕಿನಲ್ಲಿಯೂ ಶರಣ ತತ್ವವನ್ನು ತುಂಬಿ ಇಟ್ಟ ಕವಿ.

"ಬೈಲು ಬೈಲು ಅಂತಿರಿ ಬೈಲಿನೊಳಗ ನಿಂತಿರಿ
ಬೈಲಿಗೇನಂತಾರಿಃ ಬೈಲದೊಳಗಯಾರ್‍ಯಾರು
ಹುಟ್ಟಿದರು.
ಅವರಿಗ್ಯಾರ ಅಂತಾರಃ ಹಾಂ ಜೇ ಜೇ."

ಎಂದು ಕೇಳಿ 'ಬಯಲು' 'ನಿರ್ಬಯಲು'ಗಳನ್ನು ಜನರಿಗೆ ಗೀಗೀ ಹಾಡಿನ ಮೂಲಕ ತಿಳಿಸಿ ಹೇಳಿದ್ದಾನೆ. ಶರಣ ಕವಿ ಕಡಣಿಯ ಕಲ್ಲಪ್ಪ.

ನಮ್ಮ ಕಣ್ಣಿ ಮುಂದೆ ಕಾಣುವುದೆಲ್ಲ ಬೈಲು ಈ ಬೈಲು ಬೆಳಕಿನಿಂದ ತುಂಬಿದೆ. ಆ ಬೆಳಕನ್ನು ಕಂಡು ಹಿಡಿದು ಬಾಳಿದರೆ ಅವರೇ ಮಹಾತ್ಮರು. ಪರಮಾತ್ಮರೆನಿಸಿ ಕೊಳ್ಳುತ್ತಾರೆ. ಅವರೇ ನಿರಂಜನ ಶರಣರು. ಇಂತಹ ಮಹಾತ್ಮರಿಂದ "ಬೆಳಗುವ ಬೈಲು" ಬರಿಗಣ್ಣಿಗೆ ಕಾಣುವುದಿಲ್ಲ. ಕವಿಯ ಕಣ್ಣಿಗೆ ಅವನ ಕೃತಿ ಕಾಣುತ್ತದೆ. 'ಕವಿ ಕಾವ್ಯದ ಕಣ್ಣು' ಅನುಭಾವದ ದೀಪ್ತಿ' ಇಂತಹ ಮಾತು'ಗಳನ್ನು ಕಡಣಿಯ ಕಲ್ಲಪ್ಪ ತನ್ನ ಕಾವ್ಯದಲ್ಲಿ ಕಟ್ಟಿಹಾಡಿ ಜನಮನವನ್ನು ಅರಳಿಸಿದ. ಅವನು ಕಂಡ ಅನುಭಾವ ಇದು.

"ಕಣ್ಣಿ ಕಣ್ಣಿ ಸವಿ ಸಕ್ಕರಿ ಎಣ್ಣಿ
ಉಣುಬಾ ಸವಿ ಕಂಡು ಹೇಳುದಿಲ್ಲ.

ಅನುಭಾವದ ಅತಿಮಾತು
ಮುಕ್ಕಿ ಮುಕ್ಕಿ ಸಕ್ಕರಿ ಮುಕ್ಕಿ
ನಟ್ಟನಡುವ ಸವಿ ಮಟ್ಟಿ ಕಟ್ಟಿ
ತುಟ್ಟ ತುದಿ ತನಕ"

ಎಂದು "ಅನುಭಾವದ ರುಚಿ" ಕಂಡ ಕಡಣಿಯ ಕಲ್ಲಪ್ಪ ಅದರ "ಸವಿ ಬಲ್ಲವನೇ ಬಲ್ಲ" ಎಂದು ಹೇಳುವ ಮಾತು ನಿಜವಾಗಿಯೂ ಮಂತ್ರ.

ಹೀಗೆ ಹಾಡಿನೊಂದಿಗೆ ಅಂತರ್ಮುಖಿಯಾದ ಕಡಣಿಯ ಕಲ್ಲಪ್ಪ ಇಹದ ಬದುಕನ್ನೇ ಮರೆತ ಶರಣ ಎಂದು ಹೇಳಬಹುದು. ಮಗ ವಿಠ್ಠಲ ಡಪ್ಪಿನ ಮೇಲೆ ಕೈ ಹಾಕಿದರೂ ಯಶಸ್ವಿಯಾಗಲಿಲ್ಲ. ಕಾರಣ ಕಾಲ ಬದಲಾಗಿತ್ತು. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ನಾಯಕರಿಗೆ ಸ್ಫೂರ್ತಿ ನೀಡಿದ ಕಡಣಿಯ ಕಲ್ಲಪ್ಪನಿಗೆ ಬಳುವಳಿಯಾಗಿ ಬಂದದ್ದು ಬಡತನ. ಈಗ ಬಡತನ ಗರಿಬಿಚ್ಚಿ ತನ್ನ ಕರಾಳ ಛಾಯೆ ಸುತ್ತ ನಾಲ್ಕು ಕಡೆಗೂ ಚಾಚ ತೊಡಗಿತ್ತು. ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಗೆ, ಹಾಡಿನಲ್ಲಿಯ ಕೆಚ್ಚು, ಕಂಠದಲ್ಲಿ ಇಲ್ಲದ್ದಕ್ಕೆ ಕವಿ ಕಡಣಿಯ ಭೋಗೇಶ್ವರನಲ್ಲಿ ಪ್ರಾಂಜಲ ಮನಸ್ಸಿನಿಂದ ಪ್ರಾರ್ಥಿಸುತ್ತಾನೆ.

"ಚಿಂತಿ ಎಂಬುದು ನಿಶ್ಚಿಂತ ಮಾಡೋ
ನಿಜ ನಿರ್ಗುಣ ನೀಲ ಕಂಠನ ಕೂಡೋ
ಆಲಮೇಲ ಈಶನ ಸೇವೆಯ ಮಾಡೋ

ಎಂದು ತನಗೆ ಗುರುವಾಗಿ ಮಾರ್ಗದರ್ಶನ ನೀಡಿದ ಗುರು 'ಭೀಮ-ಬಸಯ್ಯ ನನ್ನು ನೆನಸುತ್ತ' ಭೋಗೇಶ್ವರನ ದಯದಿಂದ ಇದುವರೆಗೂ ಹಾಡಿದೆ ಎಂದು ಕಳೆದು ಹೋದ ದಿನಗಳನ್ನು ನೆನೆಯುತ್ತ ಕಾಲಕಳೆಯ ತೊಡಗಿದ.

■

# ಶರಣರನ್ನು ಮರಣದಲ್ಲಿ ಕಾಣು

ಇಪ್ಪತ್ತನೆಯ ಶತಮಾನ ಬಿಡುವಿಲ್ಲದ ಓಟದ ಕಾಲ. ಬದಲಾವಣೆಯ ಕಾಲ. ಒಂದು ದೃಷ್ಟಿಯಿಂದ ಒತ್ತಡದ ಕಾಲವೆಂದೇ ಹೇಳಬಹುದು. ಇಂತಹ ಒಂದು ಸಂದಿಗ್ಧ ಕಾಲದಲ್ಲಿ ಕಡಣಿಯ ಕಲ್ಲಪ್ಪ, 'ಗೀಗೀ' ಯ ಹಾಡು ರಚಿಸಿ ಮೇಳ ಕಟ್ಟಿ ಹಾಡಿ ಲೇಸೆನಿಸಿಕೊಂಡು ಬಾಳಿದ ಶರಣ ಕವಿ. ಇವನ ಸಮಕಾಲೀನ ಕವಿಗಳೂ ಹಾಡುಗಾರರೂ ಎಂದು ಹೆಸರಾಗಿದ್ದ ಬೀಬೀ ಇಂಗಳಗಿ ಹಸನಲಾಳೇಸಾ, ಮುಳಸಾವಳಗಿ, ಖರೀಂಸಾಬ-ಸೋಫೆ ಸಾಹೇಬ, ಕೊರಳ್ಳಿ ಮೌಲಾಲಿ, ಚಂದ್ರಾಮ, ಚಾಂದ ಕವಟಿಯ ನಬೀಲಾಲ-ಗುಡಲಾಲ, ನಂದ್ಯಾಳದ ಮಲ್ಲ-ಗುರು. ಇಂಗಳೇಶ್ವರ ಲಾಲಸಾಹೇಬ ಸಾವಳಗಿ ಮಹ್ಮದಸಾಬ ಮಹಾಗಾಂವದ ಮೀರಾಸಾಬ ಇವರೆಲ್ಲರೂ ತಮ್ಮ ತಮ್ಮ ಊರಿನೊಂದಿಗೆ ಪ್ರಸಿದ್ಧಿ ಪಡೆದಂತೆ ಕಡಣಿಯ ಕಲ್ಲಪ್ಪ ತನ್ನ ಊರು ಕಡಣಿಯ ಕಲ್ಲಪ್ಪನೆಂದೇ ಹೆಸರು ಪಡೆದು ಇವರೆಲ್ಲರ ಒಡನಾಡಿಯಾಗಿ ಒಳ್ಳೆಯ ಸ್ನೇಹಿತನಾಗಿದ್ದ.

ಕಡಣಿಯ ಕಲ್ಲಪ್ಪನ ನಂತರ ಕಲ್ಲಪ್ಪನ ಎರಡನೆಯ ಮಗ ವಿಠ್ಠಲ ಹಾಡಿಗೆ ಹೆಗಲುಕೊಟ್ಟು ಡಪ್ಪಿನ ಮೇಲೆ ಕೈ ಹಾಕಿದ. ಅದರಂತೆ ಕಡಣಿಯ ಕಲ್ಲಪ್ಪನ ಅಳಿಯ ಚಡಚಣ ಗ್ರಾಮದ ಹನುಮಂತ ಸಿಂಧೆ ಗೀಗೀ ಹಾಡಿಗೆ 'ಮೇಳ' ಕಟ್ಟಿದ. ಇದೇ ಸಮಯಕ್ಕೆ ಬ್ಯಾಡಿಗಿ ಗ್ರಾಮದ ಮನ್ಸೂರ ಭಾಯಿ, ಬಸವನ ಬಾಗೇವಾಡಿ ತಾಲೂಕ ಇಂಗಳೇಶ್ವರದ ಲಾಲಸಾಹೇಬ, ಬಾಗೇವಾಡಿ ಪಾಟೀಲ, ಇಲಕಲ್ಲದ ನಾರಾಯಣಪ್ಪ, ಸಾಲೋಟಗಿ ತುಳಜಾರಾಮ, ಶಿವಪ್ಪ ಹಾವಳಗಿ ಸಾತ್ಪುರದ ಮೈಲಾರಪ್ಪ ಮುಂತಾದವರು ಮೇಳ ಕಟ್ಟಿ ಹಾಡಲು ಮುಂದಾದರು. ಅಷ್ಟರಲ್ಲಿ ಕಾಲ ಮಿಂಚಿ ಹೋಗತ್ತು. 'ಹರದೇಶಿ-ನಾಗೇಶಿ' ಎಂದು ಹೆಸರಾದ 'ಕಲ್ಲಿ-ತುರಾ' ಎಂದು ಪ್ರಸಿದ್ಧನಾದ 'ಹೆಣ್ಣು-ಗಂಡಿನ' ಸವಾಲು-ಜವಾಬಿನ ಕಾಲ ಮುಗಿದು ಹೋಗಿತ್ತು. ಸೃಷ್ಟಿ-ಸ್ಥಿತಿ, ಲಯ ಕುರಿತು ಹಾಡುವ ಹಾಡುಗಾರಿಕೆಗೆ ಬೆಲೆ ಇಲ್ಲದಂತಾಗಿತ್ತು.

ಸ್ವಾತಂತ್ರ ಚಳುವಳಿಯ ಕಾಲದಲ್ಲಿದ್ದ ಉದ್ವೇಗ ಏರಾಟ, ದೇಶ ಭಕ್ತರ ತ್ಯಾಗ, ನಿಷ್ಠೆ, ಬಲಿದಾನ, ದೇಶಾಭಿಮಾನ ಅವರಲ್ಲಿದ್ದ ದೇಶ ಪ್ರೇಮ ಸ್ವಾಭಿಮಾನ ಜನರಿಗೆ

ತಂದು ಮುಟ್ಟಿಸಲು ಕಟ್ಟಿ ಹಾಡಿದ ಹಾಡಿನ ಕಾವು ಆರಿಹೋಗಿತ್ತು. ಆ ಕಸುವು ಕಡಿಮೆಯಾಗಿತ್ತು. ಅಲ್ಲಲ್ಲಿ ಕಾಣುತ್ತಿದ್ದ ಗರ್ದಿಗಮ್ಮತ್ತು ನೀರಿಗಿಳಿದ ಗೊಂಬೆಯಂತೆ ಮುಳುಗಿ ಕರಗಿ ಹೋಗಿತ್ತು. ಅಲ್ಲಲ್ಲಿ ಅಬ್ಬರಿಸುತ್ತಲಿದ್ದ ದೊಡ್ಡಾಟಗಳು ಸ್ವರವೆತ್ತಿ ಪಾಡುತ್ತಿದ್ದ ಸಣ್ಣಾಟಗಳು ನಿಂತು ಹೋಗಿದ್ದವು. ಈಗ ಅಲ್ಲೊಂದು ಇಲ್ಲೊಂದು ಪಾರಿಜಾತ ಆಟಗಳು ನೋಡಲು ಸಿಗುತ್ತವೆ. ಇಂತಹ ಪರಿಸ್ಥಿತಿಯನ್ನು ಎದುರಿಸಿ ಚದುರಿಸಿ ಹಾಡು ಕಟ್ಟಿ ಡಪ್ಪು ಬಾರಿಸಿ ಹಾಡುವ ಎದಿಗಾರಿಕೆ ಯಾವ ಕವಿಗಳಲ್ಲಿಯೂ ಇರಲಿಲ್ಲ. ಸರಕಾರದ ಸಾಧನೆಗಳಾದ ಪಂಚವಾರ್ಷಿಕ ಯೋಜನೆ, ಭೂದಾನ, ಗೋದಾನ, ಕುಟುಂಬ ಯೋಜನೆ, ಜನಸಂಖ್ಯಾ ಸ್ಫೋಟ, ಕಲಬೆರಕೆ 'ಕಾಳಸಂತೆ' 'ಏಡ್ಸ್' ಹಣದುಬ್ಬರ, ಭ್ರಷ್ಟಾಚಾರ ನಿರ್ಮೂಲನೆ, ಲಂಚಗುಳಿತನ ನಿರುದ್ಯೋಗ ಸಮಸ್ಯೆ ಮುಂತಾದ ಸಮಸ್ಯೆಗಳು ಕುರಿತು ಹಾಡು ರಚಿಸಿ ಹಾಡಾಲು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ತಿಳಿಸತೊಡಗಿದರು. ಕಾವ್ಯದಲ್ಲಿ ಕಸುವಿಲ್ಲದ ಹಾಡು, ಹಾಡಿ ಜನಮನವನ್ನು ಸೆಳೆಯಲು ಸಾಧ್ಯವಾಗಲಿಲ್ಲ ಹೊಟ್ಟೆಯಲ್ಲಿ ಹಸಿವಿಲ್ಲದ 'ಗೀಗೀ ಮೇಳಗಳು' ನಿತ್ರಾಣಗೊಂಡವು.

ಕಡಣಿಯ ಕಲ್ಲಪ್ಪನ ಮಗ ವಿಠ್ಠಲ ಅಪ್ಪನ ಡಪ್ಪು ಎದೆಯ ಮೇಲೆ ಇಟ್ಟು ಬಾರಿಸಿ ಹಾಡಲು ಸಿದ್ಧನಾಗಿದ್ದ ಆ ಹುರುಪು ಹುಮಸ್ಸು ಬಹಳ ದಿನ ಉಳಿಯಲಿಲ್ಲ. ಕೆಲದಿನಗಳ ನಂತರ ಹಾಡಿಗೆ ಶರಣು ಹೊಡೆದು ಕೂಲಿ–ನಾಲಿ ಮಾಡಿ ಬದುಕ ತೊಡಗಿದ.

ಸತತ ಐದು ದಶಕಗಳ ಕಾಲ ಜನರ ಮಧ್ಯದಲ್ಲಿದ್ದು 'ಹಾರ ತುರಾಯಿ' ಬೆಳ್ಳಿಯ ಪದಕಗಳೊಂದಿಗೆ ಚಪ್ಪಾಳೆಗಳ ಸುರುಮಳೆಯಲ್ಲಿ ಹಾಡಿ ನಲಿದ ಕಲ್ಲಪ್ಪ ಗೀಗೀ ಹಾಡುಗಾರ ತನಗೆ ಬಂದ ಈ ದುಸ್ಥಿತಿ ಕಂಡು ಕಸಿವಿಸಿಗೊಂಡ. ಈ ಹೊತ್ತಿಗೆ ಅರವತ್ತು ದಾಟಿದ ಕಲ್ಲಪ್ಪನಿಗೆ, ದಮ್ಮು ಸೇರಿಗೊಂಡಿತ್ತು. ದನಿಯೂ ಕೂತಿತ್ತು. ಡಪ್ಪು ಬಾರಿಸುವ ಕೈಗಳಲ್ಲಿ ಶಕ್ತಿಯೂ ಇರಲಿಲ್ಲ. ಅವನ ಮನಸ್ಸೆಲ್ಲ ಶಿವನ ಕಡೆಗೆ ಹರಿಯುತ್ತಿತ್ತು.

"ಶಿವ ಶಿವ ದೂರಿಲ್ಲ ತನ್ನಲ್ಲಿ ಇರತಾನ
ತನಗ ಬಿಟ್ಟು ಹುಡುಕಿದರೂ ಸಿಗುವುದಿಲ್ಲ
ಕಾಲು ಮೇಲೆ, ಕೈ ಕೆಳಗೆ ಮಾಡಿದರಿಲ್ಲ
ತಲೆ ಹಚ್ಚಿ ಲಾಗ ಹೊಡೆದರಿಲ್ಲ
ಮೂಢ ಭಕ್ತಿಗೆ ಕಾಡಗಲ್ಲ
ಕಾಡಗಿಲ್ಲಗಿ ನಾಡಗಲ್ಲ
ಭೀಮ–ಬಸಯ್ಯ ಒಡಲೊಳಗಿರಿಸುವ
ಆತ್ಮದ ಕಲ್ಲ".

ಎಂದು ಕಾವ್ಯ ರಚಿಸಿ ಈ ಜೀವನದಲ್ಲಿ ಯಾವುದು ಸ್ಥಿರವಿಲ್ಲವೆಂದು ಭಾವಿಸಿ ಶಿವನ-ಧ್ಯಾನದಲ್ಲಿ ತೊಡಗಿ ಕಾಲಕಳೆಯುತ್ತಿರುವಾಗ ೧೯೭೩ನೇ ಇಸವಿ ಕಲ್ಲಪ್ಪ ತನ್ನ ೭೩ನೇ ವಯಸ್ಸಿನಲ್ಲಿ ಶಿವಾಧೀನವಾದ.

ಕಲ್ಲಪ್ಪ ಇಹಲೋಕ ಯಾತ್ರೆ ಮುಗಿಸಿದ ಸುದ್ದಿ ತಿಳಿದೊಡನೆ ಕಲ್ಲಪ್ಪನ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರು, ಇರುವೆಯಂತೆ ಹರಿದು ಬಂದು ಅಂತ್ಯ ಯಾತ್ರೆಯಲ್ಲಿ ಪಾಲುಗೊಂಡರು. ಅಂತ್ಯ ಯಾತ್ರೆ ದೊಡ್ಡ ಜಾತ್ರೆಯಾಗಿತ್ತು. ಅಂತ್ಯಯಾತ್ರೆಗೆ ಆಗಮಿಸಿದ ಅಭಿಮಾನಿಗಳು ಗೀಗೀ ಹಾಡಿನ ಸೂರ್ಯ ಮುಳುಗಿದ ಎಂದು ಉದ್ಗಾರ ತೆಗೆದಾಗ ಅಸಂಖ್ಯಾತ ಜನರ ಕಣ್ಣು ಹನಿಗೂಡಿದ್ದವು. ಕಲ್ಲಪ್ಪ ಹಾಡುತ್ತ ಆಡುತ್ತ ವಿನೋದ ಮಾಡುತ್ತ, ಎಲ್ಲರಿಗೂ ಕೈ ಮುಗಿಯುತ್ತ ಕೈಲಾಸ ವಾಸಿಯಾದ ಎಂದು ನಿಟ್ಟುಸಿರು ಬಿಟ್ಟರು. ನಲವತ್ತು ವರ್ಷ ಜನರ ಮಧ್ಯದಲ್ಲಿದ್ದು ಜನ ಸಂಪತ್ತು ನಿಜವಾದ ಆಸ್ತಿ ಎಂದು ಭಾವಿಸಿದ ಕಡಣಿಯ ಕಲ್ಲಪ್ಪ. ನಿಜವಾದ ಅರ್ಥದಲ್ಲಿ ಶರಣ "ಶರಣರನ್ನು ಮರಣದಲ್ಲಿ ಕಾಣು" ಎಂಬ ಮಾತನ್ನು ಮನವರಿಕೆ ಮಾಡಿಕೊಟ್ಟ ಕಡಣಿಯ ಕಲ್ಲಪ್ಪ ಇನ್ನಿಲ್ಲವಾದ.

ಅತ್ಯಂತ ಸಣ್ಣ ಊರು ಕಡಣಿಯ ಗ್ರಾಮದಲ್ಲಿ ಜನಿಸಿ ಬಡ ಕುಟುಂಬದಲ್ಲಿ ಬೆಳೆದು ದೊಡ್ಡವನಾಗಿ ಡಪ್ಪು ಬಾರಿಸಿ ದನಿ ಎತ್ತಿ ಹಾಡಿ

"ಕಾಸ ಕಣ್ಣಿ ಗ್ರಾಮದಲ್ಲಿ
ಈಶನ ದಯದಿಂದ
ಕೂಸು ಕಲ್ಲಣ್ಣ ಬಂದು
ಈ
ಕಥೆ ಹೇಳಿದನು
ಕಂದ
ಹೈದರ_ಈರಣ್ಣ ಬಂದ
ಈ
ಕವಿ-ಹಾಡಿದರು

ಎಂದು ನುಡಿ ಮುತ್ತು ಇಂದಿಗೂ ತರಂಗ ತರಂಗವಾಗಿ ಹರಿದು ಬರುತ್ತದೆ. ಇಂದು ಕಲ್ಲಪ್ಪ ಸತ್ತು ಬದುಕಿದ್ದಾನಲ್ಲವೆ?

■

## ಗ್ರಂಥ ಋಣ


೧. 'ಕರ್ನಾಟಕ ಸಂಗಾತಿ'
ಪ್ರಾಧಾನ ಸಂಪಾದಕರು
ಪ್ರೊ ॥ ಬರಗೂರು ರಾಮಚಂದ್ರಪ್ಪ
ಪ್ರಕಾಶಕರು : ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೨. ಬೆಳಕಿನ ಹೆಜ್ಜೆಗಳು
ಲೇ : ಡಾ. ಸಂಗಮನಾಥ ಲೋಕಾಪುರ
ಪ್ರಕಾಶಕರು : ಪುರುಷೋತ್ತಮ ಪ್ರಕಾಶನ
ಭಕ್ಷಿ ಪ್ಲಾಟು, ಮುಧೋಳ, ಜಿ : ಬಾಲಕೋಟೆ.

೩. ಜಾನಪದ ಭಾರತಿ
ಲೇ : ಡಾ. ಬಸವರಾಜ ಪೋಲಿಸ ಪಾಟೀಲ
ವಿದ್ಯಾಸಾಗರ ಪ್ರಕಾಶನ, ಶಹಾಬಜಾರ
ಗುಲಬರ್ಗಾ.

೪. ವಿಜಾಪುರ ಜಿಲ್ಲೆಯ ಲಾವಣಿ ಇತಿಹಾಸ
ಲೇಖಕರು : ಪ್ರೊ ॥ ಶಂಕರಗೌಡ ಮಲಕಪ್ಪಗೌಡ ಬಿರಾದಾರ
ಪ್ರಕಾಶಕರು : ತಾಯ್ನುಡಿ ಪ್ರಕಾಶನ
ಅಕ್ಕಲಕೋಟ : ಜಿಲ್ಲಾ : ಸೋಲಾಪುರ

೫. ಕಸ ಹೊಡೆದ ಕೈ ಕೂಸ್ತೂರಿ ನಾತಾವ
ಲೇಖಕರು : ಎ.ಕೆ. ರಾಮೇಶ್ವರ

೬. ಗೆಜ್ಜೆ ನುಡಿದಾವ ಗಿಲಿಗಿಲಿ
ಲೇಖಕರು : ಎ.ಕೆ. ರಾಮೇಶ್ವರ

೭. ವಚನ ವಿಜ್ಞಾನ
ಸಂಪಾದಕರು
ಡಾ : ಎಂ.ಎಸ್. ಜೋಗದ
ಡಾ : ಎಸ್.ಎಸ್. ಪಾಟೀಲ

೮. ಸಾಹಿತ್ಯ ವಿಹಾರ
ಡಾ. ಬೆಟಗೇರಿ ಕೃಷ್ಣಶರ್ಮ
ಪ್ರಕಾಶಕರು : ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು.

೯. ಉತ್ತರ ಕರ್ನಾಟಕದ ಜಾನಪದ ಪದ್ಯ ಸಾಹಿತ್ಯ
ಡಾ. ಎಂ.ಎಂ. ಕಲಬುರ್ಗಿ,
ಸಮಾಜ ಪುಸ್ತಕಾಲಯ, ಧಾರವಾಡ.

೧೦. ಸಾಹಿತ್ಯ ಸೃಷ್ಟಿ, ದೃಷ್ಟಿ
ಎ.ಕೆ. ರಾಮಶ್ವರ
ಸಿದ್ಧಲಿಂಗೇಶ್ವರ ಪ್ರಕಾಶನ
ಕಲಬುರ್ಗಿ.

# ಅನುಬಂಧ – ೧

## ಲಿಂಗಶೆಟ್ಟಿ

ಸಖಿ

ಬಾಬಾರೋ ಗಣಪತಿ ಮಾಡುವೆ ನಿನ್ನ ಸ್ತುತಿ
ಕೊಡು ಎನ್ನಗೆ ಮತಿ ಬೇಡುವೆ ಬಾಯಿತೆರದ
ಬಡವನ ಅರ್ಜಿಬಂತು ಬರದ ಹಾಂ ಜೀ ಜೀ

ವರುಷಕೊಮ್ಮೆ ಗಣೇಶಚೌತಿ ಆ ದಿವಸ ನೀ ಬರತಿ
ಬೆಳಗುವೆನೋ ಆರತಿ ಬಾರೋ ಗೌರಿ ಕಂದ
ಹಣೆಮ್ಯಾಲ ಹಚ್ಚಿದ್ಯೋ ಶ್ರೀಗಂಧಾ ಹಾಂ ಜೀ ಜೀ

ಖಾಸ ಕಡಣಿ ನಿನ್ನ ವಸ್ತಿ
ಕಲ್ಲಪ್ಪ ಇರುವಂತ ಬಸ್ತಿ
ಸದಾ ತಿರಗಾಂವ ಗಸ್ತಿ
ತಾನು ಪ್ರೀತಿದಿಂದ
ಪ್ರತ್ಯಕ್ಷಾಗೋ ಪಾರ್ವತಿ ಕಂದಾ ಹಾಂ ಜೀ ಜೀ

ಪದ : ಪರಮೇಶ್ವರನ ಪಂಚ ಮುಖದಿಂದ
ಅಷ್ಟಾವರ್ಣ ತ್ಯೆರಾದು
ಸೃಷ್ಟಿಯೊಳಗ ಶ್ರೇಷ್ಠ ದಿನಸಂತ
ಬರದ ಇಟ್ಟಿದರು
ಅದು ತಿಳಿಸುವುದಕ ಬಸವಣ್ಣನವರು
ತಮ್ಮ ವೀರಶೈವ ಧರ್ಮದವರಿಗಿ ಇದರ ವಿಚಾರ ಹೇಳಿದರು
ವೇದ ಸಮ್ಮತದಿಂದ ತಮ್ಮ ಧರ್ಮದವರಿಗಿ
ಬೋಧಾ ಹೇಳಿ "ಅಂಗಕ್ಕ ಸಮಾನವಾದ ಲಿಂಗ ಕಟ್ಟಿದರು"
ಈಗಿನ ದೀಡ ಶ್ಯಾಣ್ಯಾರು ಹುಟ್ಟಿ ಲಿಂಗ ಬಿಚ್ಚಿಟ್ಟಿದರು
ಹಾಂ ಜೀ ಜೀ

ಸಂಸಾರ ಬಂಧನದೊಳು ಸಿಲುಕಿ ಸರ್ವ ಎಲ್ಲ ಮರತರೆ
ಎರಡರೆ ಇರಲೆಂತ ಮನಕ ತಿಳಿದಾರು

ಕಡಿಗಿ ಒಂದರೆ ಇದ್ದರ ಮುಂದಹಾದಿಗಿ ಬಂದಾರು
ಉಳಿದು ಏಳುದಿನಸ ನಮ್ಮ ಅಂತು
ಇಷ್ಟರs ತಿಳಿದಾರು
ವಿಭೂತಿ ಅಂದರ ಇದು ಎಂತಹ ಮಹತ್ವದ್ದಿರತೈತಿ
ಎಲ್ಲರಿಗೂ ಹೇಳತಿನಿ ಕೇಳಿರಿ ಬಲ್ಲವರು
ಹುಬ್ಬಳ್ಳಿ ಪ್ರಾಂತದೊಳು ಲಿಂಗಶೆಟ್ಟಿ ಒಳೆ ಬೆಳದವರು
ಹುಟ್ಟಿದ ಕೂಡಲೇ ಅವರು ಅಷ್ಟಾವರ್ಣ ಹಸನಾಗಿ ತೊಳದವರು
ಲಿಂಗ, ವಿಭೂತಿ, ಮಂತ್ರ-ತಂತ್ರ ಹುಟ್ಟಿದು ಓಡಿದ ಗುರುತೇ ಇಲ್ಲ.
ಜಗಲಿ ಮ್ಯಾಲಿನ ದೇವರ ಸಹ ಮೂದಲೇ ಕಳದಾರೋ
ಬರೇ ಸತಿ ಪತಿ ಮಾತ್ರ ಬಾಳ ಸುಖದಿಂದ ಉಳಿದಿದ್ರು

ಇಳು

ಗುರುಲಿಂಗ ಜಂಗಮ ಅಂದ್ರ ಮನಸಿಗೆ ಬಾಳ ತೊಂದ್ರ
ಯಾರರೇ ಮನಿಗಿ ಬಂದ್ರ ಭಯಂಕರ ಸಿಟ್ಟ
ಐಗೊಳಿಗಿ ನೀಡಾಂವಾ ಅಲ್ಲ ಹಿಟ್ಟ ಹಾಂ ಜೀ ಜೀ

ಹಬ್ಬ ಹುಣ್ಣಿಮೆ ಹೋಳಿಗಿ ಮನ್ಯಾಗಾದರ
ಊಟಕ ಮನಿಗಿ ಹ್ವಾದ್ರ ಹೆಣ್ತಿಗೂಡ ತೊಂಟ
ತಾನೆ ಹೋಗಾಂವ ಹೊರಗ ಹೊಂಟ ಹಾಂ ಜೀ ಜೀ

(ಏರು)

ಅನಾಚಾರ ನಡೆಯಲದು ನೋಡಿ ಅನಾಢ್ಯ ಹುಡುಗನ ಕಂಡು
ಈ ಊರ ಜನರಲ್ಲ ಬಹಿಷ್ಕಾರ ಕೊಟ್ಟಿದ್ರು
ನೀತಿ ತಪ್ಪೇದಂತ ಜಾತಿ ಅವರು ಆರಿಸಿ ಇಟ್ಟಿದ್ರು
ದೊಡ್ಡ ದೊಡ್ಡ ಪಡದಪ್ಪ ಗೋಳು ಹೇಳಿ ಹೇಳಿ ತ್ರಾಸ
ಬಿಟ್ಟಿರೊ ॥ ೧ ಚೌಕ ॥

ಊರತುಂಬ ಹೇಳಿದರ ಮೀರಿನಿಂತ ಎಲ್ಲರಿಗೂ
ಯಾರ ಮಾತೂ ಕೇಳಲಿಲ್ಲ ಕಟ್ಟ ಕೆಡತಾನ
ಕೆಟ್ಟ ಕಾಡು ಕಾಲಕ್ಕ ಬರತಾವ ಇಂಥ ದಾರಿದ್ರ್ಯ ಗುಣ
ಎಷ್ಟು ದುಡಿದರ ಸಹಿತ ಹಿಂಗುದಿಲ್ರಿ ಅವನ ಬಡತಾನ
ಮುಂದ ಕೇಳಿರಿ ಒಂದು ದಿವಸ ಕುಲದ ಗುರುವು ಮನಿಗಿ ಬಂದ
ನೋಡಬೇಕಂತ ತನ್ನ ಶಿಷ್ಯನ ಮನೆತಾನ
ಅಗಸಿಗಿ ಬರುದರಾಗ ಹೇಳಿ ಬಿಟ್ರೋ ಎಲ್ಲ ವರ್ತಮಾನ ॥ ಹಾಂಜೀ ಜೀ॥

ಶಿಷ್ಯನ ಕೀರ್ತಿ ಕೇಳಿ ಗುರು ಸಿಟ್ಟಿನಿಂದ ಮನಿಗಿ ಬಂದ
ಭೆಟ್ಟಿಯಾದ ಭಕ್ತಳಾದ ಲಿಂಗಶೆಟ್ಟಿ ಮಡದೀನ
ಗುರು ಇದ್ದಾಂಗ ಕಾಣ್ತಾರಂತ ಹಿಡದಾಳ ಕೂನಾ
ವೈದು ಕುದರಿ ಕಟ್ಟಿ ಗದ್ದಿಗಿ ಹಾಸಿ ಕೂಡಸ್ಯಾಳ ಆತನ
ಹೊತ್ತು ಮುಣುಗು ಸಮಯದಲ್ಲಿ ಲಿಂಗಶೆಟ್ಟಿ ಮನಿಗಿಬಂದ
ಅಂಗಳದಾಗ ಕಟ್ಟಿದಂತ ಕುದರಿ ನೋಡ್ಯಾನಾ
ಮನಿಗಿ ಯಾರ ಬಂದಾರಂತ ತನ್ನ ಮಡದಿನ ಕೋಳ್ಯಾನ
॥ ಹಾಂಜೀ ಜೀ ॥

ಮಡದಿ ಹೇಳತಾಳ ಸ್ವಾಮಿ, ಮನಿಗಿ ಗುರು ಬಂದಾರು
ನಮ್ರದಿಂದ ಭೆಟ್ಟಿ ಆಗ್ರಿ ಹೋಗಿ ಆತನ
ಇಷ್ಟು ಕೇಳಿದ ಕೂಡಲೇ ದಿಂಗ ಬಡದಾಂಗ ಆಯ್ತು ಈತನ
ನಾ ಸುಮ್ಮನರೇ ಯಾಕೆ ಬಂದೆ ಕಾಣಾ ಕಾಣಾ
ಲಿಂಗ, ವಿಭೂತಿ, ಮಂತ್ರ-ತಂತ್ರ ಇಲ್ಲದೊಂದ ಕೇಳತಾನ
ಹೊಲ್ದಾಗ ಯಾಕ ಕೂಡಲಿಲ್ಲ ಇವೊತ್ತ ಒಂದಿನ
ಹಿಡಿದು ಕಲ್ಲು ಕಟ್ಟಿದರ ಯಾರ ಹೊರಬೇಕೊ ಸಾಯುತಾನ
ಅಡಗಿ ಮನ್ಯಾಗ ಕರೆದ ತನ್ನ ಮಡದಿ ಮುಂದ ಹೇಳ್ತಾನ
ಏನರೆ ಹೇಳಿ ಮಾಡಿ ಕಳಿಸು ಸಮಾಧಾನ
ನಾ ಹೋಲ್ದಾಗ ಹೋಗಿ ಕೂಡೆತೀನಿ ಇಂವಾ ಹೋಗುತಾನ
ಅಂವ ಹೇಳುದೆಲ್ಲ ಮರಿಗಿ ನಿಂತು ಗುರು ಕೇಳ್ಯಾನೋ
ಅಡ್ಡನಿಂತ ಕೇಳ್ತಾನ ಎಲ್ಲಿ ಹೋಗತ್ಯೊ ಲಿಂಗಶೆಟ್ಟಿ
ಮನಿಗಿ ನಾನು ಬಂದದ್ದು ಇಲ್ಲೇನೊ ಖೂನಾ
ನನಗ ಮನ್ಯಾಗ ಕೂಡ್ರಿಸಿ ಹೋಗುದೇನು ದೊಡ್ಡಸ್ತಾನ ॥ ಹಾಂಜೀ ಜೀ ॥

ಲಿಂಗಶೆಟ್ಟಿ ಅಂತಾನಾಗ ಮಾತಡ್ಲಾಕ ಸೌಡ ಇಲ್ಲಗುರುವೆ
ಹೊಲದಾಗ ಬಂದು ಹೋಗತಾವ ಸೈರೆದನ
ಆಗ ಚೈತ್ರಮಾಸ ಇತ್ರಣ್ಣಿ ಬ್ಯಾಸಿಗಿ ದಿನ
ಅಂವ ಹೇಳುದೆಲ್ಲ ತನ್ನ ಮನಕ ತಿಳಿದಾನ
ಹೌದು ತಮ್ಮ ಲಿಂಗಶೆಟ್ಟಿ ಬೆಳಿ ಬಾಳ ಅಳತಿರಬೇಕು
ಇನ್ನೊಂದು ತಾಸು ತಾಳು ಸಮಾಧಾನ
ನೀ ಬೇಕಾದಾಂಗ ಹೋಗಕತ್ತಿ ಊಟ ಮಾಡಾನ

ಇಳು :

ಲಿಂಗಶೆಟ್ಟಿ ಆಂತಾನ ಮನದಾಗ
ಮಾಡಬೇಕು ಹ್ಯಾಂಗ ಬಿಡುದಿಲ್ಲ ನನಗ
ಬಂತು ಸಂಕಟಾ ಯಾವಾಗ ಮುಗದಿತ್ತ ಇವನ ಊಟ ॥ಹಾಂಜೀ ಜೀ॥

ಏನರೇ ಅಂದ್ರ ಹಾಂಗ ಹಿಂಗ ಕಟ್ಟುದಿಲ್ಲ ಲಿಂಗ
ಹೋಗೋ ಬೇಕಾದಾಂಗ ತಗದಾರೈತೋ ತೊಂಟಾ
ತಾನೇ ಉಂಡು ಹೋಗತಾನೋ ಹೊಂಟಾ

ಏರು :

ಇಷ್ಟು ಎಲ್ಲಾ ಗೇನಸೊಗೊಂತ ಊಟಕ ಹೋಗಿ ಕೂತಿದಾರು
ತೀಬರದಿಂದ ತಂದು ಅವರಿಗಿ ಎಡಿಬಡಿಸಿದರು
ತನ್ನ ಧರ್ಮದ ಪ್ರಕಾರ ಗುರುವರೇ ಜಪಾ ನಡಿಸಿದ್ರು
ಆಗ ಲಿಂಗಶೆಟ್ಟಿ ಅಂತಾರು ಸುಳ್ಳೆ ಯಾಕೆ ತ್ರಾಸ ಹಿಡಿದರು ॥ ೨ ಚೌಕ ॥

ಯಾಕ ಅನುಮಾನ ಮಾಡ್ತಿರಿ ಗುರುವೇ
ಸಾಕಾಗುತಾನ ಊಟ ಮಾಡ್ರಿ
ಬೇಕಾದರ ದಕ್ಷಿಣ ಕೊಡತೀನಿ
ಹಿಡಿರಿ ನೀವು ಮೂದಲ
ನಾ ನಿಟ್ಟರು ಮನಸ್ಯಾ ಎಂದಿಗೂ ಖರೆ
ಆಡಾಂವಲ್ಲ ಬದಲು ದುಡ್ಡಿನ ಅಡಚಣಿಯಂತೂ ಗುರುತ
ಐತಿಸದ್ದೆ ತಮಗೆಲ್ಲ
ಒಮ್ಮೆ ನಿಮಗ ತೀರಸ್ತಿನಿ ಮೊಮ್ಮಕ್ಕಳ ಲಗ್ನದಾಗ
ಹತ್ತು ರೂಪಾಯಿದು ಸುತ್ತತೀನಿ ಜರದ ರುಮಾಲಾ
ಏನು ಮಾಡುದೈತಿ ಇನಾ ನನಗ ಮಕ್ತಳಾಗಿಲ್ಲ ॥ ಹಾಜೀ ಜೀ ॥

ಗುರುವಂತಾನ ಮನಸಿನ್ಯಾಗ ಇನಾ ಇವಗೆ ಮಕ್ಕಳಾಗಿಲ್ಲ
ಮೊಮ್ಮಕ್ಕಳ ಲಗ್ನತಾನ ಹಾಕ್ಯಾನ ಜಾಲಾ
ಏನೋ ಲಿಂಗಶೆಟ್ಟಿ ನಿನ್ನ ಆಯೇರಿ ಜರೂರಿಲ್ಲ
ನೀ ಸಾವಿರ ರೂಪಾಯಿ ಕೊಟ್ಟರ ನನಗೆ ಬೇಕಾಗಿಲ್ಲ
ಹೇಳಿದಾಂಗ ಕೇಳ್ತಿನಂದ್ರ ಇಲ್ಲಿ ಕುಂತು ಊಟಾ ಮಾಡತೀನ
ಇಲ್ಲದಿದ್ರ ಎಡಿ ಸೈತ ಮುಟ್ಟುದಿಲ್ಲ ನಾ ಶ್ಯಾಪ ಕೊಟ್ಟರ
ಮುಂದ ಮಕ್ಕಳ ಹುಟ್ಟುದಿಲ್ಲ ॥ ಹಾ ಜೀ ಜೀ ॥

ಮಕ್ಕಳ ಅಂಜಿಕಿ ಹಾಕಿದ ಮ್ಯಾಲ ಮೆತ್ತಗಾದ ಲಿಂಗಶೆಟ್ಟಿ
ಮಂಗ ಜಂಗಮ ಏನೋ ಹಾಕಿ ಬಿಟ್ಟ ಏನೋಗದ್ದಲ
ಇಂವನ ಮನಸ್ಸಿನ್ಯಾಂದ ತಿಳಕೋಬೇಕ ನಾನು ಮುದ್ದಲ
ಸುಳ್ಳೇ ತಿಳಿಲಾರೆದೆ ಹೋಗಿ ಬೀಳಬಾರದೋ ಹುದಲಾ
ಈಗಿನ ಪುರತೆ ವಚನ ಕೊಟ್ಟು ಮುಂದನಾನು
ಬಿಟ್ಟನೆಂದರೆ ಖೋಡಿ ಜಂಗಮನ ಬಾಯಿಮಾತ್ರ
ಚಲೋದಿಲ್ಲ. ಇವ ಶ್ಯಾಪ ಕೊಟ್ಟರೆ ಮುಂದ
ಮಕ್ಕಳ ಹುಟ್ಟೋದಿಲ್ಲ. ॥ ಹಾಂ ಜೀಜೀ ॥

ಇಳು :

ನೋಡ್ರಿ ಸ್ವಾಮಿ ವಚನಾ ಕೊಡು ಅಂದ್ರ ಕೊಡತಾ
ಬ್ಯಾಡಂದ್ರ ಬಿಡತಾ ಮಾಡಂದ ಕೆಲಸ ಮಾಡತಾ
ಹಿಂದಕ ಸರ್‍ಯಾಂವಲ್ಲ. ಲಿಂಗ ಮಾತ್ರ ನಾನು ಕಟ್ಟಾಂವಲ್ಲ.॥ ಹಾಂಜೀ ಜೀ॥

ಮುಂಜಾನೆದ್ದೂ ಓಡಂದ್ರ ಓಡ್ತಾ
ಕೂಡಂದ್ರ ಇಲ್ಲೇ ಕೂಡ್ತಾ
ಬೇಡಂದ್ರ ಭಿಕ್ಷಾ ಬೇಡ್ತಾ
ನಾನು ನಾಚವಲ್ಲ ವಿಭೂತಿ ನಾನು ಹಚ್ಚವಲ್ಲ ಹಾ ಜೀ ಜೀ

ನಿಮಗೆ ವೈರಿ ಇದ್ದರೆ ಹೇಳಿರಿ ಹೊಡಿತಾ
ಕಡಿ ಅಂದ್ರ ಕಡಿತಾ ಸುಡು ಅಂದ್ರ ಸುಡತಾ
ನನಗ ದರ್ಜಿಲ್ಲ ಐಗೋಳಗಿ ನಾನು ಕರೆಂವಲ್ಲ.

ವಿರ :

ದೇವರ ಪೂಜೆ ಮಾಡಂದ್ರ ಮಾರಿಸಹಿತ ನೋಡಾವಲ್ಲ
ಐಗೋಳಿಗಿ ಕರೀ ಅಂದ್ರ ಯಾರು ಕರೆವ್ರು
ಅವರ ಪಾದ ತೊಳದ ನೀರು ಕುಡಿ ಅಂದ್ರ ಯಾರು
ಕುಡ್ಯಾವ್ರು
ಆ ಮಿಂಡ ಜಂಗಮರ ಹಿಂದ ಹೋದರ ನಮಗೇನ
ಕೊಡುವರು
॥ ೩. ಚೌಡ ॥

ಆಸು ಎಲ್ಲ ಮುಗಿಸಿ ಬಿಟ್ಟ ಏನು ಬೋಧಾ
ಮಾಡ ಬೇಕಿಂವಗ ಉಣಾದು ಬಿಟ್ಟು ಹೋಗುದು

ಬಂತು ನಾನೇ ಒಟ್ಟಿಗಿ ಆಗ ಹಂಚಕಿ ತೆಗೆದು
ಹಂತೇಲಿ ಕರೆದು ಲಿಂಗ ಶೆಟ್ಟಿಗಿ
ನಾ ಹೇಳಿದ ಮಾತು ಮನಸ್ಸಿನ್ಯಾಗ
ಹಿಡಿಯೋ ಗಟ್ಯಾಗಿ
ಮುಂಜಾನೆ ಎದ್ದಕೂಡಲೇ ನೀನು ವಿಭೂತಿ
ಹಚ್ಚಿದವರ ಮಾರಿ ನೋಡಿ
ಬೇಕಾದ ಮಾಡಹೋಗೋ ನಿನ್ನ ಹೊಟ್ಟಿಗಿ.
ಇದು ಬಿಟ್ಟಿ ಆಂಧ್ರ ಬರಲಾಕಿಲ್ಲ ನಿನ್ನ ಭೆಟ್ಟಿಗಿ ॥ ಹಾಂ ಜೀಜೀ ॥

ತಾಸೊತ್ತಾನ ಅನುಮಾನ ಮಾಡಿ
ಆದರಽ ಆಗೋಲ್ಯಾಕ ಅಂಥ
ಹೂಂ ಅಂದ ಹನ್ನೆರಡು ಗಂಟ ಹಾಕಿ ಮಾರಿಗಿ
ನನ್ನ ಪಾಲಕ ಬಂದ್ಯೆತಿ ಗುರುವೇ ನಾನು ಹೇಳಲ್ಯಾರಿಗಿ
ನಾನು ಮೀರಿ ನಿಂತಿನಿ ಛಿ ಸಧ್ಯ ನನ್ನ ಊರಿಗಿ
ವಚನ ತಗೊಂಡು ಮ್ಯಾಲ ಗುರು
ಊಟಾ ಉಪಚರ ಮುಗಿಸಿಕೊಂಡು
ಹೋಗಲ್ಯಾಕ ತೈಯಾರಾದ ತನ್ನ ಊರಿಗಿ
ವೈದು ಕುದರಿ ಹಿಡದು ಕಳಿಸಿಬಂ ಹೋಗುದಾರಿಗಿ
॥ ಹಾಂ ಜೀ ಜೀ ॥

ಮುಂಜಾನೆ ಎದ್ದುಕೂಡಲೆ ಇಂವ
ವಿಭುತಿ ಹಚ್ಚಿದವರ ಮಾರಿ ನೋಡಿ
ಹೊಲಕ ಹೋಗುವಾಗ ತಿಳ್ದೀಲ್ರಿ ಯಾಳೇಕ ಸರಿಯಾಗಿ
ಆಗ ಮನದಾಗ ಅಂತಾನ ಯಾಕಾದರ ಬಂದ
ಜಂಗಮ ಗುರಿಯಾಗಿ
ಮೂರು ವರ್ಷತಾನ ಮಾಡಿಕ್ಕೊಂತ ಬಂದ ವಚನಕ ಸರಿಯಾಗಿ
ಮುಂದ ಕೇಳಿರಿ ಒಂದು ದಿವಸ ಬಿತ್ತುಣಿಕಿ ದಿನ ಇತ್ತು
ಹೊಲ ನಿಕಾಲ ಮಾಡಬೇಕೆಂದ ಜಲ್ದಿ ಹೋಗಿ
ತಾನ ಮೂರು ತಾಸ ರಾತ್ರ್ಯಾಗ ಕೂತ ಎಚ್ಚರಕ್ಯಾಗಿ ॥ ಹಾಂ ಜೀಜೀ ॥

ಹೊತ್ತ ಹೊಂಟರೆ ಹೊಲಾ ಉಳಿತಾದ
ಬೆದಿಯು ಕಳಿತಾದ
ಆದಿತ್ಯವಾರ ಬೆಳಿತಾದ ಬಂತು ಬಲು ಘೋರ
ವಿಭೂತ್ತೆವರು ಸಿಗವಲ್ಲರು ಯಾರ್ಯಾರಽ

ಅವನಕಿಂತ ಮೊದಲ ಕುಂಬಾರ ಒಬ್ಬ ಎದ್ದಿದ
ಜಳಕಾ ಮಾಡಿದ್ದ ವಿಭೂತಿ ಹಚ್ಚಿದ್ದ ಧರ್ಮ ಪ್ರಕಾರ
ಮಣ್ಣ ತರ್‍ಲಾಕ ಹೋಗಿದ್ದ ಕುಂಬಾರ ॥ ಹಾಂ ಜೀಜೀ ॥

ಊರ ಮುಂದಿನ ಹಳ್ಳದಾಗ ಹಡ್ಡತಿದ್ದ
ಸಿಕ್ಕಿತ್ರಿ ಒಂದು ನಾಲ್ಕು ಸಾವಿರದ ನಗದ
ರೂಪಾಯಿ ಭರಪೂರ ಕೈ ಹಾಕಿ ನೋಡಿದ ಕಣ್ಣಾರೆ ॥ ಹಾಂ ಜೀಜೀ ॥

ಕುಂಬಾರಂತಾನ ಮನಸನ್ಯಾಗ
ಜಲ್ದಿ ಇದ್ದಕ್ಕ ಮನಿಗಿ ಯೈಬೇಕು
ಹೊತ್ತು ಹೊಂಟರ ಯಾರರೇ ನೋಡಿಗೀಡಾರು
ಬೆರಕಿ ಮಂದಿ ಊರಾಗ ಹೇಳಿಗೀಳ್ಯಾರು
ಅಲ್ಲಿ ಇದರಾಗರದಾ ಪಾಲಾ ಬೇಡಿಗೀಡ್ಯಾರು
॥ ೪ ಚೌಕ ॥

ಇಷ್ಟು ಎಲ್ಲ ವಿಚಾರ ಮಾಡಕೊಂಡ
ಮುಂದೆ ನೋಡಿ ಹೋಗುತ್ತಿದ್ದ ಕುಂಬಾರ
ದಾರಿಯೊಳಗೆ ಲಿಂಗಶೆಟ್ಟಿ ಬಂದ ನಿಂತಾನೊ
ನಡಗಿ ಖೂನಾ ಹಿಡಿದು ಅಂತಾನು ಇವಾ ಕುಂಬಾರ ಇದ್ದಾನು
ವಿಭೂತಿ ಹಚ್ಚಿರಬೇಕು ಇಂವ ನನಕ ; ಮೊದಲೆ ಎದ್ದಾನು
ಅಡ್ಡ ನಿಂತು ಲಿಂಗಶೆಟ್ಟಿ ಹಣಿಕಿ ಹಾಕಿ ನೋಡುದುರಾಗ
ಸಂಶಕ್ಕಾಗಿ ನೋಡುತಾನಂತ ಕುಂಬಾರ ತಿಳಿದಾನು
ಈಗ ಸಿಗಬಾರದಂತ ಮಾರಿ ಮ್ಯಾಲ ಕಂಬಳಿ ಎಳೆದಾನೋ ॥ ಹಾಂ ಜೀಜೀ ॥

ಲಿಂಗಶೆಟ್ಟಿ ಅಂತಾನ ಆಗ
ಇಷ್ಟ್ಯಾಕ ಮಾರಿ ಮುಚಗೋತಿ ಕುಂಬಾರ
ಮೊದಲೆ ಎಲ್ಲಾ ನೋಡಿನ ಹೋಗು ಅಂದಾನು
ಇಷ್ಟು ಕೇಳಿದ ಕೂಡಲೇ ಕುಂಬಾರ ಗಾಬರಿಗಿ ಬಿದ್ದನು
ಬೆರಕಿ ಸೂಳಿಮಗ ಊರಾಗ ಹೋಗಿ ಹೇಳಿಗೀಳ್ಯಾನು
ಹಿಂಗ ಬಾರೋ ಲಿಂಗಶೆಟ್ಟಿ ಯಾರ ಮುಂದು ಹೇಳ ಬ್ಯಾಡ
ಈ ಬದುಕು ವೈದು ನನ್ನ ಮನ್ಯಾಗಿಡಾನು
ನೀ ಚೆಂಜಿಗಿ ಬಾರೋ ಇದರಾಗ ಪಾಲಾ ಕೊಡುವೆನು

ಲಿಂಗಶೆಟ್ಟಿ ಅಂತಾನಾಗ ಏನೋ ಮಾತ್ರ ಸಿಕ್ಕಿದಿವಂಗ
ಬೆರಕಿ ಕುಂಬಾರ ಕೈಯಾಂದ ಬಿಟ್ರ ಓಡಿ ಹೋಗುವನು
ಬೆರಕಿ ಮಗ ಇದರಾಗ ಅರದಾ ತಗದು ಇಡಾಂವನ
ಸುಳ್ಳೆ ಅಂದಿನಂತ ನಾಳೆ ಮುಂಜಾನೆ ತಂಟಾ ಹೂಡುವನು
ಹಾಂಗಾದರ ಬಿಡುದಿಲ್ಲ ಇಲ್ಲೆ ಅರದಾ ಹಂಚಿಬಿಡು
ಇಲ್ಲದಿದ್ದರೆ ಪೋಲೀಸಗೌಡಗ ವರದಿ ಕೊಡುವೆನು
ನೀವಿನಂತ ಸಧ್ಯ ನಾನು ಚೌಡಗಿ ಓಡುವೇನು ॥ ಹಾಂ ಜೀ ಜೀ ॥

ಹಾಂಗ ಮಾಡ ಬ್ಯಾಡ ಲಿಂಗಶೇಟ್ಟಿ ಇಲ್ಲೆ ಅರದಾ ಹಂಚಿಕೊಡತಾ
ಅರ್ಧಾ ಹಣ ಎಣಿಸಿ ಅವನ ಪದರಾಗ ಹಾಕಿದನು
ಆ ರೂಪಾಯಿ ನೋಡಿ ಲಿಂಗಶೆಟ್ಟಿ ತನ್ನ ಮನಕ
ತಿಳದಾನು ಆ ರೂಪಾಯಿ ವೈದು ದೇವರ ಜಗಲಿ
ಮೇಲೆ ಇಟ್ಟಾನೋ ಸಾಯುತಾನ ಆದರೂ ನಾನು
ಇಷ್ಟು ರೂಪಾಯಿ ಕಾಣತಿದ್ದಿಲ್ಲ
ವಿಭೂತಿ ಪುಣ್ಯದಿಂದ ಹಣ ಕಂಡೇನು
ಸ್ವತ ನಾನೇ ಹಚ್ಚಿದರ ಇದರ ಸುಖಾ ಎಷ್ಟು ಉಂಡೇನು॥ ಹಾ ಜೀ ಜೀ॥

ಇಳು

ಆಗ ಭಕ್ತಿ ಹುಟ್ಟಿತು ಮನಸ್ಸಿಗಿ
ಹೋದ ಲಗಿ ಬಿಗಿ
ಗುರುವಿನ ಚರಣದ ಮ್ಯಾಲ ಬಿದ್ದು
ಲಿಂಗಕಟ್ಟಿರಿ ನನ್ನ ಕೊರಳಾಗ
ನಿಜ ಭಕ್ತಿ ಇರಲಿ ನಿಜವಾಗಿ
ವಚನಕ್ಕ ಸರಿಯಾಗಿ ನಡಿರಿ ಒಂದಾಗಿ ನಿಮ್ಮ ಊರಾಗ
ಹೇಳುದಕ ಬಂದಿವ್ರಿ ಇಲ್ಲೀಗಿ

ಏರು :

ಖಾಸ ಕಣ್ಣಿ ಗ್ರಾಮದಲ್ಲಿ
ಈಶನ ದಯದಿಂದ
ಕೂಸ ಕಲ್ಲಣ್ಣ ಬಂದು ಈ ಕತಿ ಹೇಳಿದರು
ಕಂದ ಹೈದರ ಈರಣ ಬಂದು ಈ ಕವಿ
ಹಾಡಿದರು ॥ ೫ ಚೌಕ ॥

■

## ಗೀಗೀ ಹಾಡುಗಳು

### ಶ್ರೀ ಸಿದ್ಧರಾಮೇಶ್ವರ ಚರಿತ್ರೆ

ಯಾವುದೇ ಊರಲ್ಲಿ ಜಾತ್ರೆ, ಉರುಸು, ಉತ್ಸವ ಏರ್ಪಡಲಿ ಅಲ್ಲಿ ಅಂದು ಆ ರಾತ್ರಿ ಮನೋರಂಜನೆ ಕಾರ್ಯಕ್ರಮ ನಡೆಯಲೇ ಬೇಕು. 'ಜಾತ್ರೆ ಮತ್ತು ಮನೋರಂಜನೆ ಇವು ಎರಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜಾತ್ರೆಗೆ ಕಳೆ ತಂದು ಕೊಡಲು ಕಲೆಗಳು, ಕಲೆಗಳಿಗೆ ಪ್ರೋತ್ಸಾಹ ನೀಡಲು ಈ ಜಾತ್ರೆಗಳು ಒಂದಕ್ಕೊಂದು ಪೂರಕ. ಪರಿಪೂರಕವೆಂದೇ ಹೇಳಬಹುದು. ಹೆಚ್ಚಾಗಿ ಈ ಜಾತ್ರೆಗಳಲ್ಲಿ ಹರದೇಶಿ–ನಾಗೇಶಿ ಎಂಬ ಗೀಗೀ ಮೇಳವನ್ನೇ ಕರೆಸುವುದುಂಟು. ಗಂಡು–ಹೆಣ್ಣಿನ ಜೀವನದ ಬಗ್ಗೆ ರಸವತ್ತಾದ ಗೀಗೀ ಪದಗಳನ್ನು ಹಾಡಿ ಈ ಮೇಳಗಳು ಜನರ ಮನವನ್ನು ರೂಪಿಸುತ್ತವೆ. ಇಂಥ ರಸವತ್ತಾದ ಗೀಗೀ ಪದಗಳನ್ನು ಕೇಳಿ ಸಂತೋಷ ಪಟ್ಟು ತಮ್ಮ ಮೇಲೆ ವಿಶೇಷ ಪ್ರಭಾವ ಬೀರಿದ ಮೇಳಕ್ಕೆ ಬೆಳ್ಳಿಯ ಪದಕ ನೀಡಿ ಇನ್ನೂ ಹುರುಪು ತುಂಬುತ್ತಾರೆ. ಈ ಉತ್ಸಾಹ ಪ್ರೋತ್ಸಾಹ ಕಲಾವಿದರಿಗೆ ಎಂದೂ ಮರೆಯದ ಹಿಗ್ಗಿನ ಬುಗ್ಗಿ, ಹೀಗೆ ಈ ಜಾತ್ರೆ ಉತ್ಸವಗಳಲ್ಲಿ ಜನರು ಮತ್ತು ಕಲಾವಿದರು ಒಂದಾಗಿ ಸಮಾಜದಲ್ಲಿ ಇದ್ದ ಓರೆ ಕೋರೆಗಳನ್ನು ತಿದ್ದಿ ಸಾಮರಸ್ಯ ತಂದು ಕೊಡುತ್ತಿದ್ದರು. ಹೀಗೆ ಈ ಜಾನಪದ ಕಲೆಗಳಲ್ಲಿ ಒಂದಾದ ಗೀಗೀ ಮೇಳ ಹಳ್ಳಿಯ ಜನರ ಭಾವೈಕ್ಯತೆಗೆ ಭದ್ರ ಬೀಗದ ಕೈಯಾಗಿದೆ. ದೇಶ ಸ್ವಾತಂತ್ರ್ಯ ಕಾಲಕ್ಕೆ ಜನರಲ್ಲಿ ಜಾಗೃತೆ ಮೂಡಿಸಿ ರಾಷ್ಟ್ರೀಯ ಪ್ರಜ್ಞೆ ಹುಟ್ಟಿಸಿತು. ಇಂದಿಗೂ ಈ ಮೇಳ ತನ್ನ ದೇಶದ ಪ್ರಭಾವವನ್ನು ಕಾಯ್ದುಕೊಂಡು ಬಂದಿದೆಯೆಂದು ಹೇಳಬಹುದು.

ಸಖಿ :

ಅಂಧಕರೀಗ ಬುದ್ಧಿ ಬಾಳ
ಪುರಾಣದಾಗಿ ನಿದ್ದಿ ಬಾಳ
ಹೆಣಮಕ್ಕಳಲ್ಲಿ ಸುದ್ದಿ ಬಾಳ
ಇಲ್ಲದೊಂದು ಶೋಧಿಸಿ
ಬೈಲ ಕಡೆ ಕುಂತಲ್ಲಿ ಪುರ ಮಾಸಿ
ಜಾಗಿರದಾರಗ ಜಮೀನ ಬಾಳ

ಸಿರಿಮಂತರಿಗಿ ಬಲಾ ಬಾಳ
ಕಾರಣದಾಗ ಕಲಹ ಬಾಳ
ಸುಮ ಸುಮನೆ ತೋಳ ಏರಿಸಿ
ಲಗ್ನದಾನ ಅಡಗಿ ಹೋಯ್ತೊ ಹಳಸಿ
ಗಾಂಧೀಯಲ್ಲಿ ಶಾಂತಿ ಬಾಳ
ನೆಹರೂನಲ್ಲಿ ಧೈರ್ಯ ಬಾಳ
ಸುಭಾಷನಲ್ಲಿ ಶೌರ್ಯ ಬಾಳ
ಹ್ಹೋದರೊ ಸ್ವರಾಜ್ಯ ಗಳಿಸಿ
ಕಲ್ಲಣ್ಣ ಅಂದ ಮಾಡ್ರಿ ಇದಕ ಚೌಕಾಸಿ

ಪದ :

ಭಕ್ತಿ ತನ್ನಲ್ಲಿ ಪೂರ್ಣ ಇದ್ರs ಮುಕ್ತಿ ಸ್ಥಾನ ದೂರಿಲ್ಲ
ಸಾಂಬನೊಲಿಸಿ ಕೊಳ್ಳುದು ತನ್ನ ನಂಬಿಗೆ ಕಾರಣ
ಡಂಬಾಚಾರ ನುಡಿಸಿದವರೀಗs ತಪ್ಪದು ಜನನ–ಮರಣ
ಈ ಕುಂಬಿನಿಯೊಳು ಕಾಣಬೇಕಾದರs ದಿವ್ಯ ಚರಣ
ಪ್ರಾಣದಾಶೆ ಬಿಟ್ಟವನೀಗಿs ಪರಮೇಶ್ವರ ಸಿಗತಾನ ಖರೆ
ಆಶಾ ನೀಗಿ ಅನಿಸಿಕೊಂಡ ಸತ್ಯ ಶರಣ
ಶುದ್ಧ ಭಾವದಿಂದ ಕೇಳಿರಿs ಸಿದ್ಧರಾಮನ ಪುರಾಣ ॥ ಹಾಂ ಜೀ ಜೀ ॥

ಸಿದ್ಧರಾಮನ ತಾಯಿ ತಂದಿ ಮುದ್ದ ಗೌಡ ಸುಗ್ಗಲದವಿ
ಸೊನ್ನಲಾಪುರದಲ್ಲಿ ಅವರs ಮನಿತಾನ
ಭಾವ–ಭಕ್ತಿಯಿಂದs ಶ್ರೀ ಯಾಳ ರಾಜಾ–ಚಂಗುಣಿ ಸಮಾನ
ನಿತ್ಯ ತಪ್ಪಲಾರದ ಮಾಡಸಿದ್ರುs ಜಂಗಮರ ಭೋಜನ
ಗುರುಲಿಂಗ–ಜಂಗಮ ಅಂದರs ಬಂಗಾರ ಕಂಡಂಗ
ಗಂಗಾಧರನ ನಾಮ ಸ್ಮರಣೆ ಬೇಗೋ ಬೆಳಗಾನ
ಅವರು ಕೊಡುತಿದ್ರು ಅನ್ನ ಅರವಿ ವಸ್ತ್ರ ದಾನ

ಭಾವ ಭಕ್ತಿನಿಂದ ದೇವರ ಸೇವಾ ಮಾಡೂದು ಕಂಡು
ಶಿವಾ ಕೊಟ್ಟ ಮರ್ತಿದಾನೊ ಶ್ರೀಮಂತತಾನಾ
ಹುಟ್ಟಾ ಬಂಜಿ ಇದ್ರು ಅವರ ಹೊಟ್ಟೀಲೆ ಇದ್ದಿದಿಲ್ಲ ಸಂತಾನ
ನೋಡಿ ಅಂತಃಕರಣ ಹುಟ್ಟಿತ್ತೊs ಭಗವಂತನ
ಎಪ್ಪತ್ತೊರ್ಷದ ಮುಪ್ಪಿನವರಿಗೆ ಮಕ್ಕಳ ಕೊಡುದುಕೋ

ಸ್ವರವಾಗಿ ಕಪ್ಪಗೊರಳಿದವ ಅಪ್ಪಿಗೊಂಡು ಬಂದು ನಿಂತಾನ
ಅವರ ಬಾಗಿಲದೊಳು ನಿಂತು ಭಿಕ್ಷಾಂದೇಹಿ ಅಂದಾನ ॥ ಹಾಂ ಜೀ ಜೀ॥

ಇಷ್ಟ ಕೇಳಿ ಸುಗ್ಗಲದೇವಿ ದಿಗ್ಗನೆ ಎದ್ದು ಭಿಕ್ಷಾ ನೀಡಿ
ಸಾಷ್ಟಾಂಗ ನಮಸ್ಕಾರ ಮಾಡಿದಳ ಸಾಂಬಶಿವನ
ಒಂದು ಶಿವ ಪುತ್ರ ಮಗನ ಹಡಿಯಂತ ನುಡಿದ ಭಗವಾನ
ಕೇಳಿ ಮುದ್ದ ಗೌಡ ಅಂದ ನಿಮ್ಮದುಃ ಎಂಥ ವಚನ
ಮುಪ್ಪಾನ ಮುದುಕರು ನಾವು ಮಕ್ಕಳಾಗುದ ಹ್ಯಾಂಗ
ಮೈಯೊಳಗ ಏನೂ ಇಲ್ಲ ನಮಗ ಚೈತಾನ
ದೊಡ್ಡ ಶರಣರು ಕಾಣತೀರಿ ಹೇಳೂದು ಏನ ಕಾರಣ ॥ ಹಾಂ ಜೀ ಜೀ॥

ಇಳು :

ಇಷ್ಟು ಕೇಳಿ ಅಂದ ಶಂಕರ ಕೇಳೊ ಸಾಹುಕಾರ
ದಂಪತಿಗಳೀರ್ವರು ಮಾಡಿ ಬರ್‍ರಿ ಸ್ನಾನ
ಆಮೇಲೆ ತಿಳಿದಿತ್ತೋ ನನ್ನ ಖೂನ
ಒಂದು ತೀರ್ಥ ಗುಂಡ ತ್ಯೆಯಾರ ಮಡಿದ ಈಶ್ವರ
ಹೋಗಿ ಮುಳುಗ್ಯಾರೊ ಇಬ್ಬರೂ ಆ ದಿನ
ಬದಲಾದಿತ್ತೊ ಮಾರಿಯ ಚಿನ್ನ ॥ ಹಾಂ ಜೀ ಜೀ ॥

ನಾಲ್ವತ್ತು ವರ್ಷದ ಅವ್ರು ಆಗಿನಿಂತಾರ
ಗುರುವಿನ ಅಂತರ ಇಲ್ಲರಿ ಅನುಮಾನ
ನೋಡಿ ಗಾಬರ್‍ಯಾತು ಊರಾನ ಜನಾ ॥ ಹಾಂ ಜೀ ಜೀ ॥

ಏರು :

ಸತಿ ಪತಿ ಇಬ್ಬರು ಕೂಡಿ ಸೋಮವಾರ ಸಂಜೆ ಮಾಡಿ
ಮನಕೊಂಡು ಕಂಡೆವಂತಾರ ಶಿವನ ಚರಣ
ಶುಭ ಮೂರ್ತದಲ್ಲಿ ಪಿಂಡದಲ್ಲಿ ಮೂಡಿದ ಶರಣ
ಪಿಂಡ ಮೂಡಿದ ಕೂಡಲೆ ತಾಯಿ ಮುಖ ಚಂದ್ರನ ಕಿರಣ ॥ ಹಾಂ
ಜೀಜೀ ॥

(೧ ನೇ ಚೌಕ)

ಮುಂದ ಕೇಳಿರಿ ಒಂದು ದಿವಸ ತಾಯಿ ಆದಳು ಸುಗ್ಗಲದೇವಿ
ನಿದ್ರೆ ಹತ್ತಿ ಮನಿಗಿಕೊಂಡಳು ಮಂಚದ ಮ್ಯಾಲ

ಶರಣ ಪುಟ್ಟಿದನೆಂದು ಸುದ್ದಿ ಆಯಿತು ಸ್ವರ್ಗದಾಗ
ಪೂರ್ಣ ನವಮಾಸ ತುಂಬಿದುವಣ್ಣ ಅಷ್ಟರೊಳಗ
ಲಕ್ಷಿಮಿ–ಸರಸ್ವತಿ–ಪಾರ್ವತಿ ಮೂವರು ಕೂಡಿ
ಪ್ರತ್ಯಕ್ಷ ನೋಡುದುಕ ಬಂದಿದ್ರು ತೆಳಗ
ಸಿದ್ಧರಾಮನೆಂದು ಕೂಗ್ಯಾರು ನಿಂತ ಮನಿಹೊರಗ ॥ ಹಾಂ ಜೀ, ಜೀ ॥

ಮಧ್ಯ ರಾತ್ರಿಯಲ್ಲಿ ತಾಯಿಗಿ ನಿದ್ರಿ ಹತ್ತಿದ ಸಮಯದಲ್ಲಿ
ಸಿದ್ಧರಾಮ ಗರ್ಭದಿಂದ ಬಂದಿದ್ದ ಕಡಿಗಿ
ಹಾಂಗೆ ಸುಗ್ಗಲದೇವಿ ನಿದ್ರಿಹತ್ತಿ ಮಲಗ್ಯಾಳ ಆವಾಗ
ಲಕ್ಷಿಮಿ–ಸರಸ್ವತಿ–ಪಾರ್ವತಿ ಆಗಿಂದಾಗ
ರೂಪ ಲಕ್ಷಣನೋಡಿ ಬಾಳ ಆನಂದಾಗಿತ್ತಪ್ಪ ಅವರ ಮನದಾಗ
ಮ್ಯಾಗಿನ ಪುಷ್ಪದಮಳಿ ಸುರದಿತೆಪ್ಪ ಅದೇ ಕ್ಷಣದಾಗ ॥ ಹಾಂ ಜೀ ಜೀ ॥

ಶೃಂಗಾರದ ಬಂಗಾರ ತೊಟ್ಟಿಲಲ್ಲಿ ಗಂಗಾಧರನೆ ಕಳಿಸಿ ಕೊಟ್ಟರ
ಬಂಗಾರುಂಗುರ ಅಂಗಿ ಟೊಪ್ಪಗಿ ಇಟ್ಟಿತ್ತದರಾಗ
ನೋಡಿ ಪಾರ್ವತಿದೇವಿ ತಗೊಂಡಾಳ ತನ್ನ ಉಡಿಯಾಗ
ನಾವು ಏನಂತ ನಾಮಕರಣ ಇಡಬೇಕೀತಗ
ಹುಟ್ಟಿದ ಯಾಳೆ ನಕ್ಷತ್ರನೋಡಿ
ಸಿದ್ಧರಾಮ ಕಾಯಂಮಾಡಿ
ಸ್ವಂತ ನಿಂತ ತೊಟ್ಟಿಲದಾಗ ಹಾಕ್ಯಾರ ಆತಗ
ಆಗ ಮೂವರ ಕೂಡಿ ಜೋಗುಳ ಪದ ಹಾಡ್ಯಾರವನಿಗ ॥ ಹಾಂ ಜೀಜೀ॥

ಇಳು :

ಸೊನ್ನಲಪೂರಾ ಶ್ರೀಮಂತ ನೀನೆ
ಶಿವಯೋಗಿ ಜೋ ಜೋ
ಮುದ್ದ ಗೌಡನ ಮಗನಾಗೋ
ಸಿದ್ಧರಾಮ ಜೋ ಜೋ ॥ ಹಾಂ ಜೀ ಜೀ ॥
ಗಂಗಾಧರನ ವಂಶದಲ್ಲಿ ಹಿಂದಿನ ಸುಕೃತ
ತಂದಿ ಗಳಿಸಿದಾನೋ ॥ ಹಾಂ ಜೀ ಜೀ ॥
ಮಂದರ ಗಿರಿವರ ಸುಂದರ ಪಾದಕಾಣಿಸೊ
ಸಿದ್ಧರಾಮ ॥ ಹಾಂ ಜೀ ಜೀ॥
ಬಲ್ಲಿದವನಾಗಿ ಮಲ್ಲಯ್ಯನ ಭಕ್ತನಾಗೊ ॥ ಹಾಂ ಜೀ ಜೀ ॥
ರೇವಣ ಸಿದ್ದೇಶ್ವರರ ಶಿಷ್ಯನಾಗೊ ಜೋ ಜೋ ॥ ಹಾಂ ಜೀ ಜೀ ॥

ಏರು:

ಹರುಷದಿಂದ ನಾಮ ಇಟ್ಟು ಕೈಲಾಸಕ ಹೋದರು ಹೊಂಟು
ಯಾರ್‍ಯಾರು ನೋಡಿದ್ದಿಲ್ಲ ಹೊತ್ತು ಹೊಂಡುವತಾನ
ಮುಂಜಾನೆ ಬ್ಯಂಗಯ್ಯ ಎಂಬು ಜಂಗಮ
ಅವರ ಮನೀಗ ಬಂದಾನ ಅಂವ ಯಾವತ್ತು
ಅವರ ಮನೀಗ ಬರ್‍ತಿದ್ದ ಬೇಗಾನ ॥ ಹಾಂ ಜೀ ಜೀ ॥

೨ನೇ ಚೌಕ

ಕೂಸಿನ ಮುಖ ನೋಡಿ ಬ್ಯಂಗಯ್ಯ
ಹರುಷದಿಂದ ಕುಣಿದಾಡಿಯಾನ
ಕೂಗಿ ಕೂಗಿ ಎಬ್ಬಿಸ್ತಿದ್ದ ಮಲಗೀದ ಮಂದಿನ
ಅವನ ಸಪ್ಪಳ ಕೇಳಿ ಎಚ್ಚರಾತ್ರಿ ಸುಗ್ಗಲದೇವಿಗ
ಮೈ ಹವುರಾಳಾದ ಕಾರಣ ಏನೆಂದು ಗಾಬರಿ
ಅಂವಸರ ಮಾಡಿ ಕೂಸಿಗಿ ನೋಡಿ ಈಶನ ನಾಮ ಕೊಂಡಾಡಿ
ಅದೇನಾಮ ಕರಣಬಂತು ಅವರ ಬಾಯಿಗ
ಬಾಳ ಆನಂದಾತಪ್ಪ ಅವರ ತಾಯಿ-ತಂದೀಗ
॥ ಹಾಂ ಜೀ ಜೀ ॥

ಬಡವರ ಮನೀಗಿ ಭಾಗ್ಯವು ತಾನಾಗಿ ಬಂದಂತೆ
ಹಿಡಿಸಲಾರದಷ್ಟು ಸಂತೋಷವಾಯಿತು ಅವರ ತಂದಿಗಿ
ಬಂಡಿ ಹೇರಿ ಸಕ್ಕರಿ ಹಂಚಿದಾರೋ ಸಂದಿ ಸಂದೀಗಿ
ಅವರು ಬೇಡಿದಷ್ಟು ಧಾನ್ಯ ಕೊಡತಿದ್ರು ಬಂದ ಮಂದಿಗ
ದೇಶಕ್ಕೆಲ್ಲ ಸಲುವಂತ ಈಶನ ನಾಮ ಕರಣ
ಏಸು ಕಾಲ ಆದರೂ ಮರಿಬಾರದುವಿಂದೀಗಿ
ಹೋಗು ಕಾಲಕ್ಕ ನಮ್ಮ ಕೈಯಾಗ ಕೊಟ್ಟಾನ "ಹೊನ್ನಿನ ಬಿಂದಿಗಿ"
॥ ಹಾಂ ಜೀ ಜೀ ॥

ಎಳಿ ಬಾಳಿ ಸುಳಿಯಂತೆ ಕಳೆಯುಳ್ಳ ಸಿದ್ಧರಾಮ
ಬೆಳಿತಿದ್ದ ದಿನದಿನಕ ಈ ಪರಿಯಾಗಿ
ಅವರ ತಂದೀ ಪುಣ್ಯ ನೋಡಿರಣ್ಣ ಮಂದರಗಿರಿಯಾಗಿ
ಓಂ ಶಿವಾ' ಎಂಬ ಶಬ್ದ ಬಂತು ಮೊದಲು ಬಾಯಿಗಿ
ಐದು ವರ್ಷತಾನ ಹುಡುಗಯಾರ ಜೋಡಿ ಮಾತಾಡಲಿಲ್ಲ

ಆಕಳ ತಗೊಂಡು ಹೊಲದ ಕಡೆ ಹೋಗದ್ದ ಮೊದಲ ಸುರವೀಗಿs
ಎಂದು ಕಂಡೇನೆಂದು ಮುಕ್ತಿ ಅಂವ ಬೇಡಿದ ಗುರವೀಗ ॥ ಹಾಂ ಜೀ ಜೀ ॥

ಆಕಳ ಮೈದು ಬೆಳ್ಯಾಗ ಬಿಟ್ಟು ಅಡ್ಡಾಡಕೊಂತ ತಿರಗುತಿದ್ದ
ಒಂದು ದಿವಸ ಬಂದು ನಿಂತs ಹೊಲದ ಸೀಮೀಗಿ
ಅಲ್ಲಿ ಇಷ್ಟ ಲಿಂಗ ಮೂರ್ತಿಯೊಂದು ಬಿತ್ತೊ ದೃಷ್ಟಿಗಿ
ಪೂರ್ಣ ದಿಡಾಯಿಟ್ಟು ನಡದಿದಾನೊ ತನ್ನ ನಂಬೀಗಿ
ಮನ್ಯಾಗ ಕಟ್ಟಿದ ಬುತ್ತಿ ವೈಯ್ದು ದೇವರಿಗಿ ನೈವದ್ಯ ಹಿಡಿದು
ಅದೇ ಊಟ ಮಾಡತಿದ್ದ ಆರ ತಾಸೀಗಿ
ಇಷ್ಟು ಶಾಂತ ಗುಣ ಆರು ವರ್ಷದ ಸಣ್ಣ ಕೂಸಿಗಿ ॥ ಹಾಂ ಜೀ ಜೀ ॥

ಇಳು :

ಮಲ್ಲಿಕಾರ್ಜುನನ ಆವತಾರ ತೊಟ್ಟ ಶಿವಾ
ಭಕ್ತ ಸಂಜೀವಾ
ನೋಡುದಕಾ ಅವನ ಭಾವ
ಬಂದ ಅವನ ಮಡದೀನ ಕರ್ಕೊಂಡ
ಅವನ ಹೊಲಕ ॥ ಹಾಂ ಜೀ ಜೀ ॥
ಸಿದ್ಧರಾಮನಿಗೆ ಆಗಿತ್ತೋ ಅರುವಾ
ಇವನೆ ನನ್ನ ಗುರುವಾ
ಹೋಗಿ ಬಿದ್ದಾನೊ ಅವನ ಪಾದಕ್ಕ
ಯಾ ಊರದವರು ಬಂದೀರಿ ಯಾಕ ಹಾ ಜೀ ಜೀ

ನಿಮ್ಮ ನಾಮಕರಣ ಏನ್ರಿ ದೇವಾ
ಆಗೇದೇನೊ ಹಸುವಾ
ಮಾಡ್ತ ನಿಮ್ಮ ಸೇವಾ ಕೇಳಿದ ಮೆಲ್ಲಕ
ಕಬ್ಬ ಸೀತನೀ ತರತೀನಿ ತಿಲ್ಲಾಕ

ಏರು :

ಇಷ್ಟು ಕೇಳಿ ಮಲ್ಲಯ್ಯ ಅಂದ
ಇಷ್ಟು ದಯಾಳು ಗುಣದಾವ ಹುಡುಗ
ಸೃಷ್ಟಿಯೊಳು ಕಾಣಲಿಲ್ಲ ಇಂತಹ ತರುಣ
ಪೂರ್ಣ ವಿಚಾರ ಮಾಡಿ ನೋಡಬೇಕೆಂದ ಈತನ ಗುಣ
ಆಗ ತನ್ನ ಮನಸಿನ್ಯಾಗ ಬ್ಯಾರೆ ತರದ ಕಲ್ಪನಾ ॥ ಹಾಂ ಜೀ ಜೀ ॥

(ಇನೇ ಚೌಕ)

ನನ್ನ ಹೆಸರು ಮಲ್ಲಯ್ಯನವರು
ಜಾತಿಯಿಂದ ಜಂಗಮರು
ಮಡದಿ ಹೆಸರು ಗಂಗಾದೇವಿ ಅಂತ ನುಡಿದಾನು
ಇಷ್ಟು ಕೇಳಿದ ಕೂಡಲೇ ಸಿದ್ಧರಾಮ ಪಾದಹಿಡಿದಾನು
ಅವರ ಇಬ್ಬರ ಕಡಿಯಿಂದ ಪುನಃ ಆಶೀರ್ವಾದ ಪಡದಾನು
ಕಬ್ಬ ಸೀತನಿ ಸುಲಗಾಯಿ ತಂದು ಮಾರಿ ಮುಂದ ಇಟ್ಟ ಬಿಟ್ಟು
ಮಡದಿ ಕರಕೊಂಡು ಮಲ್ಲಯ್ಯನವರು ಎಲ್ಲಾ ತಿಂದಾನು
ಕೇವಲ ಶಿಷ್ಯತಂದೀದ ಪದಾರ್ಥ ಬಹಳಸವಿ ಅಂದಾನು ॥ ಹಾಂ ಜೀ ಜೀ ॥

ತಿನ್ನುದೆಲ್ಲಿ ಆದಮ್ಯಾಲ ತಣ್ಣನ ಮಗಿ ನೀರತಂದು ಕೊಟ್ಟ
ನೀರ ಕುಡಿದ ಮಲ್ಲಯ್ಯನವರು ನೆಲಕ ಬಿದ್ದಾನು
ಹೊಟ್ಯಾಗ ಉರಪ ಇಟ್ಟದಂತ ಉರಳ್ಯಾಡತಿದ್ದಾನು
ಮಡದಿ ಗಂಗಾದೇವಿ ದುಃಖ ಅಂತು ಹೇಳಲಾರೆನು
ಗಾಬರ್‍ಯಾಗಿ ಸಿದ್ಧರಾಮ ಅರು ಹಾರಿ ಕೇಳತಾನ
ಏನು ಬೇಕರಿ ಸ್ವಾಮಿ ನಿಮಗ ತಂದು ಕೊಡುವೇನು
ನೀವು ಹೇಳದಿದ್ರ ನನ್ನ ಪ್ರಾಣ ಇಲ್ಲೆ ಬಿಡುವೆನು ॥ ಹಾಂ ಜೀ ಜೀ ॥

ಆ ಬಾಲ ಸಿದ್ಧರಾಮನ ಮಾತಕೇಳಿ ಮಲ್ಲಯ್ಯನವರು ಅಂತಾರ
ಏನು ಹೇಳಲಿ ಸಿದ್ಧರಾಮ ಹೇಳಲಾರೆನು ಹೊಟ್ಯಾಗಿಟ್ಟ ಬೆಂಕಿ
ಅಂತ ನಾನು ತಾಳಲಾರೆನು
ಸ್ವಲ್ಪ ಕೈ ಸೊನ್ನಿ ಮಾಡಿ ಅವನಿಗೆ ಮುಂದಕ ಕರದಾನು
ಅರ್ಧ ತಾಸಿನೊಳಗ ನೀನು ಅನ್ನ ಮೊಸರ ತಂದು ಕೊಟ್ರ
ಆತ್ಮ ಶಾಂತಿಯಾಗಿ ನಾನು ಉಂಡ ಏಳುವೇನು
ನೀ ತರಾಣಿದ್ದರ ನಾನು ಪ್ರಾಣ ಹೋಗಿ ಇಲ್ಲೇ ಬೀಳುವೇನು
॥ ಹಾಂ ಜೀ ಜೀ ॥

ಇಷ್ಟ ಕೇಳಿ ಸಿದ್ಧರಾಮ ಓಡಕೊಂತ ಮನಿಗಿ ಹ್ವಾದ
ಅನ್ನ ಮೊಸರ ಬುತ್ತಿ ಕಟ್ಟಂತ ತಾಯೀಗ ಹೇಳಿದನು
ಆ ಬುತ್ತಿ ಕಟ್ಟಿಸಿಕೊಂಡು ಓಡಕೊಂತ ಹೊಲಕ ಬಂದಿದ್ದನು
ಅಂವ ಬರುದ್ರಾಗ ವಲ್ಲಯ್ಯನವರು ಮಾಯ ಆಗಿದ್ರು
ಮೊದಲ ಕುಂತ ಜಾಗಾ ನೋಡಿ ಹೊಲಾಯಲ್ಲಾ ತಿರುಗಾಡಿ
ಸಣ್ಣ ಹುಡುಗ ಕಣ್ಣು ತುಂಬ ನೀರು ತಂದನು
'ಮಗನೇ, ಮಗನೆ' ಎಂದು ಜಂಗಮ ನನ್ನ ಪ್ರಾಣ ಕೊಂದಾನ
॥ ಹಾಂ ಜೀ ಜೀ ॥

ಗಾಬರ್‍ಯಾಗಿ ಸಿದ್ಧರಾಮ ನೆರಿ ಹೊಲದವರಿಗಿ ಕೇಳತಾನ
ಮಲ್ಲಯ್ಯಂಬ ಜಂಗಮ ಇಲ್ಲಿ ಬಂದಿದ್ದನೇನು
ನನಗ ಏನಂತ ಹೇಳು ಅಂದಿದ್ದನೇನು
ಮೂರ್ಖನ ಸಹವಾಸ ಬ್ಯಾಡ ಅಂತ ಹೇಳಿ ಮುನಿದಾನೇನು
ನೆರಿ ಹೊಲದವರು ಹೇಳತಾರ ಯಾಕ ಅಳತಿ ಸಿದ್ಧರಾಮ
ಇಂತಹ ಐಗೋಳು ಪನ್ನಾಸ ಬರ್ತಾರ ನಾಳಿಗಿ ನೋಡಾನು ॥ ಹಾಂ ಜೀ ಜೀ ॥

ಇಳು :

ಸಿದ್ಧರಾಮ ಹಿಡಿದ ಒಂದು ಹಟಾ
ಮಲ್ಲಯ್ಯನ ಮುಕುಟಾ
ನೋಡತಾನ ಊಟಾ ಎಂದಿಗೂ ಮಾಡುದಿಲ್ಲ
ಪ್ರಾಣ ಹ್ವಾದರ ಅವನ ಬಿಡುದಿಲ್ಲ ॥ ಹಾಂ ಜೀ ಜೀ ॥
ಕಾಂತಾರ ವನ ಸೇರಿದ
ಕೆಟ್ಟಿ ಶರೀರದ ಆಶೆ ಬಿಟ್ಟ ಬ್ಯಾಸಿಗ್ಯಾಗ ಸುಟ್ಟ
ಉರಿತಿದ್ದುರಿ ಅಂಗಾಲ ಮೂರುದಿವಸ ಕಣ್ಣಿಗಿ ನಿದ್ದಿಲ್ಲ

ಏರು :

ತಾಯಿ ತಂದಿ ಬಂದು ಬಳಗ ನನ್ನ ತನ್ನವರ ಆಶೆಯಿಲ್ಲ
ಅವರೀಗ ಬಿಟ್ಟು ಸೇರಿಕೊಂಡ ಅಟ್ಟ ಆರ್‍ಯಾಣ
ಸಣ್ಣ ವಯಸ್ಸದಂವಾ ಹುಡುಗ ಓಡ್ಯಾಡಿ ಆದ ಹೈರಣ
ಈ ಕುಂಬಿಗಿಯೊಳು ಕಾಣಬೇಕಾದ್ರ ದಿವ್ಯ ಚರಣ ॥ ಹಾಂ ಜೀ ಜೀ ॥

ಳನೇ ಚೌಕ

ಆರೇಳು ಜಂಗಮರ ಕೂಡಿ ಹೆಗಲಮ್ಯಾಲ ಕಾವಡಿಹೊತ್ತು
ಹಾದಿ ಹಿಡಿದು ಹೊಂಟಿದ್ರಣ್ಣ ಅದೇ ಯಾಳಿಕ
ಶ್ರೀ ಮಲ್ಲಯ್ಯ ಮಲ್ಲಯ್ಯ ಘೇ ಅನ್ನುತ್ತ ಬಂದ್ರ ಹಳ್ಳಕ
ಆಗ ಸಿದ್ಧರಾಮ ಓಡಿ ಹೋದ ಅವರಗಿ ಕೇಳುದಕ
ಮಲ್ಲಿಯೆಂಬು ಹೆಸರ ನೀವು ಉಸಿರಿದಂತೇನು ಕಾರಣ
ವಸ್ತಿಯಲ್ಲಿ ಮಲ್ಲಯ್ಯ ಇರತಾನ ಯಾವ ಸ್ಥಲಕ?
ನೀವು ಹೇಳಿ ಕೊಟ್ಟರ ಕೋಟಿ ಪುಣ್ಯ ನಿಮ್ಮ ಪಾಲಕ ॥ಹಾಂ ಜೀ ಜೀ ॥
ಹುಡುಗನ ಮಾತು ಕೇಳಿ ಜಂಗಮರು
ಸದ್ಯ ನಾವು ಹೋಗುದ್ಯೆತೋ ಶ್ರೀಶೈಲಕ–

ಆ ಮಹಾತ್ಮೇಕಾದ ಮಲ್ಲಯನ ದರ್ಶನ ಮಾಡೂದಕ
ನಮ್ಮ ಸಂಸಾರದಲ್ಲಿ ಸುಖಾ ನೀಡಂತ–ವರವು ಬೇಡುದಕ
ಸಿದ್ಧರಾಮ ಅಂದ ಸ್ವಾಮಿ ಸಂಸಾರ ಸುಖ ನಮಗ ಇಲ್ಲ
ಸದ್ಯ ನಾನು ಬರತೀನಿ ನಡ್ರಿ ಅವುನ್ನ ನೋಡುದಕ
ಅವರು ಬ್ಯಾಡಂದರೂ ಸುರುಮಾಡ್ಯಾನು ಹಿಂದಿಂದ ಓಡುದಕ
॥ ಹಾಂ ಜೀ ಜೀ ॥

ತಿಂಗಳ ಅವರಕೂಡ ತಿರುಗಿ ತಂಗಳ ರೊಟ್ಟಿ ಒಪ್ಪತ್ತುಂಡು
ಉಗಾದಿ ಪಾಡ್ಯಾಕ ಹೋಗಿ ನಿಂತ್ರ ಮಹಾದ್ವಾರಕ
ಅದು ದೊಡ್ಡ ಕ್ಷೇತ್ರ ಕಲಿಯುಗದಲ್ಲಿ ಕಡಿಭಾಗಕ್ಕ
ಅವನ ಶಿಖರ ಕಂಡ್ರು ನಮ್ಮ ಜಲ್ಮಕ್ಕ ಅಗೂದು ಸಾರ್ಥಕ
ಗರ್ಭ ಗುಡಿ ಮುಂದ ನಿಂತು ಸಿದ್ಧರಾಮಗ ಹೇಳತಾರ
ಜಲ್ದಿ ಮಾಡಿ ಹೋಗಿ ಬೀಳೋ ಮಲ್ಲಯ್ಯನ ಪಾದಕ
ಇಲ್ಲೆ ಪವಿತ್ರ ನೋಡೋ ಪಾತಳ ಗಂಗಿ ಹರಿಯುದಕ

ಇಳು :

ಸಿದ್ಧರಾಮ ಆಗಿ ನಿಂತ ದಂಗ
ಮಾಡಬಾರದೋ ಸಂಗ, ಜಂಗಮರ ಎಂಥ ಮಂಗ
ಇಸ್ವಾಸ ಇರುದಲ್ಲ ಇವರ ಮಾತು ಕೇಳಿ ಬರೂದಲ್ಲ
ಮಲ್ಲಯ್ಯಗ ತೋರುಸ್ತಿನಿ ಅಂದ ನನಗ ಹೇಳಿದ್ರು ಅಡವ್ಯಾಗ
ತಂದ್ರು ಗುಡಿಯೊಳಗ ಏರಿ ಗಿರಿಯಲ್ಲಿ ಇದು ದೇವರೇನ್ರಿ
ಕರಿ ಕಲ್ಲ ತೇಟ ಕರಿ ಕಲ್ಲ
॥ ಹಾಂ ಜೀ ಜೀ ॥

ಮಲ್ಲಯ್ಯ ಅಂದ್ರ ನನ್ನಂಗ
ಕೈ ಕಾಲ ಕಣ್ಣ ಮೂಗ ಶರೀರ ಆತಗ
ಕನ್ನಡ ಭಾಷೆಯಲ್ಲಿ ಹಾನ್ರಿ ಕೇಳ್ರಿ ಅಸಲ
ಅವನ ರೂಪ ಬಿದ್ದಾಂಗ ಆತ್ರಿ ಬಿಸಲ

ಏರು :

ಸಾಕು ನಿಮ್ಮ ಸಂಚಾರ ಬೇಕಾದ ಕಡಿ ಹೋಗಿ ಬಿಡ್ರಿ
ಅವರೀಗ ಬಿಟ್ಟು ಸೇರಿಕೊಂಡ ಅಟ್ಟ ಆರ್ಯಾಣ
ಸಣ್ಣ ವಯಸ್ಸದಾಂವ ಹುಡುಗ ಓಡ್ಯಾಡಿ ಆದಃ ಹೈರಾಣ
॥ ಹಾಂ ಜೀ ಜೀ ॥ ॥ ಶಿನೇ ಚೌಕ ॥

ಮಲ್ಲಯ್ಯನ ಕಾಲಾಗ ತನ್ನ ಪ್ರಾಣ ಹ್ವಾದರೂ ಚಿಂತಿಯಿಲ್ಲ
ಪೂರ್ಣ ವಿರಕ್ತ ತೊಟ್ಟ ನಿಂತ ತನ್ನ ಮನದಾಗ
ಆಗ ಏಳು ದಿವಸ ಸಂಚಾರ ಮಾಡಿದ ಕೆಟ್ಟವನದಾಗ
ಅಲ್ಲಿ ಅನೇಕ ಕಲ್ಪನಾ ಬರಲಾಕ ಹತ್ತಿದು ಆತನ ಮನದಾಗ
ಹೊಸ ಮನಸ್ಯಾನ ನಾತಿಗಾಗಿ ಹುಲಿ ಕರಡಿ ಸಿಂಹಗಳು
ಗುಡುಗು ಹೊಡಕೊಂತ ಬರ್ತೀವು ಸನೆ ದಾಗ
ಹುಡುಗನ ರೂಪ ನೋಡಿ ಒಂದು ಬರಲಿಲ್ಲ ಹುಡುಗನ ಮೈಮ್ಯಾಗ
ಮೂರು ದಿವಸ ಸಿದ್ಧರಾಮ ನೀರು ಸಹಿತ ಕುಡಿಲಾರ್ದೆ
ಗಿರಿ ಏರಿ ಶಿಖರ ಮ್ಯಾಲಿಂದೆ ನೋಡಿದ ತೆಳಗ
ಓಂದು ಕಲ್ಲು ಬಂದು ಬಿತ್ತೊ ತಾಸಿನ ಮ್ಯಾಗ
ಕಂದಕೊರಳದಾಂವ ಸಿಗೂದಿಲ್ಲ ಬಂದಾನು ಬಿಟ್ಟು ಸುಖ ಇಲ್ಲ
ಹಿಂದು ಮುಂದು ನೊಡಬಾರದು ನಾನು ಇದರಾಗ
ಹಿಂದಕ ಮೂರು ಮಾರ ಸರದು ಓಡಿ ಬಂದು
ಹಾರ್‍ಯಾನದರಾಗ ॥ ಹಾಂ ಜೀ ಜೀ ॥

ಕಲ್ಲಿನ ಮ್ಯಾಲಿಂದ ಹಾರುದರಾಗ
ಮಲ್ಲಯ್ಯನವರು ಅಲ್ಲೇ ಇದ್ರು
ಜಲ್ದಿ ಮಾಡಿ ಅಪ್ಪಿಕೊಂಡ ತನ್ನ ತಕ್ಯಾಗ
ಏನು ಘಾತ ಮಾಡಿದ್ಯೋ ಸಿದ್ಧರಾಮ ಅಪವಾದ ಭವದಾಗ
ಸಿದ್ಧರಾಮ ಅಂದ ಸ್ವಾಮಿ ಸಾಕು ನಿನ್ನ ಸಾದೃಶ್ಯ
ಸುಳ್ಳ ಜಂಗಮ ಏನು ಕೊಡ್ತಿ ನೀನಗ
ಮೊದಲು ಅನ್ನ ಮೊಸರಾ ಊಟಾ ಮಾಡು ಬಿಡತಾ ನಿನಗ
॥ ಹಾಂ ಜೀ ಜೀ ॥

ಸತ್ಯ ಸೇವಕ ಹೌದೆಂದು ಕಟ್ಟಿದಂತ ಬುತ್ತಿ ಬಿಚ್ಚಿ
ಹುಡುಗನ ಕರ್‍ಕೊಂಡು ಉಂಡಿದಾನೋ ತನ್ನ ಆಗಲಾಗ
ಮುಖಕ ಮುಖಾ ಹಚ್ಚಿ ಮುದ್ದಾಡಿದ ತನ್ನ ಅಗಲಾಗ
ನಿನ ತಾಯಿ, ತಂದಿ ಅಳತಿರಬೇಕು ನಿನ್ನ ಊರಾಗ
ಸೊನ್ನಲಾಪೂರಂಕ ಹೋಗಿ ಸೋಲಾಪೂರ ಶಹರಾಗಲಿ
ಸದಾ ಲಕ್ಷ್ಮೀ ವಾಸಿರಲಿ ನಿನ್ನ ಊರಾಗ
ಸುತ್ತಕೆರಿ ಆಗಿ ಗುಡಿ ಹುಟ್ಟಲಿ ನಡು ನೀರಾಗ

ಇಳು :

ದೇವರ್ನ ಒಲಿಸಬೇಕಾದರ ಇಡಬೇಕ್ರಿ ಇಂತಾ ಭಕ್ತಿ
ಭಕ್ತಿ ಇಟ್ಟಾಂಗ ದೊರಿತೈತ್ರಿ ಮುಕ್ತಿ
ದುಃಖ ಬಂದಕಾಲಕ್ಕ ಬಾಯಿಲೇ ಶಿವಾ ಶಿವಾ ಅಂತಿ
ಸುಖಾ ಇಟ್ಟಾಗ ಶಿವನಿಗೆ ಮರೀತಿ
ಎರವಿನ ಸಂಸಾರವಿದು ಮಾಯಾದ ಮೂರದಿಂದ ಸಂತಿ
ಮರುವಿನೊಳಗ ಮರ್ತ ನೀ ಕುಂತಿ

ಏರು :

ಕಾಸ ಕಡಣಿ ಗ್ರಾಮದಲ್ಲಿ ಈಶಾನ ದಯದಿಂದ
ಕೂಸ ಕಲ್ಲಣ್ಣ ಮಾಡಿ ಹೇಳಿದ ಈ ಕೀರ್ತನ
ಸದ್ಯ ಹೇಳಿದವರೀಗ ದೂರ ಅಗದು ಜನನ-ಮರಣ
ಈ ಕುಂಬನಿಯೊಳಗ ಕಾಣ ಬೇಕಾದ್ರ ದಿವ್ಯ ಚರಣ

## ಲೀಲಾವತಿ

ನಾ ಗರತಿ ನೀ ಗರತಿ ಹಾಕ್ಯಾಡು ಮಂದಿ ಬಾಳ್ಕೆತಿ
ಗರತ್ಯಾರು ಕೇಳಿರಣ್ಣ ಹಕೀಕತಿ.
ಮೂರು ಲೋಕದಲ್ಲಿ ಸರಿಯಾರು? ಗುಣವಂತಿ
ಪತಿವ್ರತಾ ನಮ್ಮ ಲೀಲಾವತಿ ಹಾಂ ಗೀ ಗೀ ॥ ಪ ॥

ಗಂಡ ಭಾವ ಮೈದುನಾ ಮನ್ಯಾಗ ಕಂಡರ ಸೇರುದಿಲ್ಲಾರಿ
ಜರಾ ಅತ್ತಿ ಬೇಕಾದಷ್ಟು ಕಾಡಿದರು
ಭಕ್ತಿ ಭಾವ ಬಿಡಲಿಲ್ಲ ಗುಣವಂತಿ
ಮೂರು ದಿನದ ತಂಗಳ ರೊಟ್ಟಿ
ಮಧ್ಯಾಹ್ನಕ ಒಮ್ಮೆ ಕೊಡವರು ಎತ್ತಿ
ಎಂತಾದಿದ್ದರೂ ಅಮೃತಂತ ತಿಳಿದು ಊಟಾಮಾಡಿ
ಮನಸಾ ಶಾಂತಿ
ಆಕಿ ಭಕ್ತಿ ನೋಡುವುದಕ ಇಳಿದು ಬಂದ ಈಶ್ವರ
ತೊಟ್ಟನೋ ಜಂಗಮನ ಅವತಾರ.
ಆಕಿ ಮನಿಗಿ ಬಂದ ಭರಾಭರಾ
ಹಿಟ್ಟ ನೀಡ್ರೀ ತಾಯಿ ಅಂದಾರ
ಜೋಳಗೀಗಿ ಹಿಟ್ಟನೀಡಿ ಹೊಳ್ಳಿ ಹೊಂಟಾಳ ಸುಂದರಾ
ಕಡಕೊಂಡ ಬಿದ್ದ ಅಯ್ಯ ನೋರಾ
ಬಿದ್ದ ಹೊರಳ್ಯಾಡತಾನ ಚಿಟ್ಟನೆ ಚೀರಿ
ಹೊಳ್ಳಿ ನೋಡತಾಳ ಗುಣವಂತಿ ಪತಿವ್ರತಾ ನಮ್ಮ ಲೀಲಾವತಿ
ಹಾಂ ಗೀ ಗೀ ॥ ೧ ॥

ಎಂಥಾ ಹಿಟ್ಟ ನೀಡಿದೆ ನನ್ನ ಜೋಳಗ್ಯಾಗ
ಹಳ್ಳ ಬಿತ್ತುರಿ ನನ್ನ ಕಣ್ಣಾಗ
ತಗೀ ತೀನಿ ಬರ್ರಿ ಸ್ವಾಮಿ ಎಂದು ಹಾಕಿಕೊಂಡಾಳ
ತೊಡಿಮ್ಯಾಗ.

ಕೈ ಹಚ್ಚ ಬ್ಯಾಡ ನಾಲಿಗಿಲೆ ತೆಗಿಯೆಂದ
ಎಪ್ಪಾ ನಾಲಿಗೀನೇ ಆಡಸ್ಯಾಳ ಅವನ ಕಣ್ಣಾಗ
ಬೆವರು ಬಂದು ಆಡಸ್ಯಾಳ ಕಂಕುಮ
ಹೋಗಿ ಹತ್ತಿ ತೋ ಜಂಗಮನ ಹಣಿಮ್ಯಾಲ
ಹೊರಗ ಬರುದರಾಗ ಲೀಲಾವತಿ ಗಂಡ ಕುಂತಿದ್ದ ಅಂಗಳಾಗ
ಯಾರು ನಿನ್ನ ಹಣಿಮ್ಯಾಲ ಕುಂಕುಮ ಹಚ್ಯಾರ
ಹೇಳಿ ಹೋಗೋ ನನಗ ಹಾಂ ಗೀ ಗೀ ॥ ೨ ॥

ಜಂಗಮ ಹೇಳತಾನ ಖರೇ ಹೇಳುವೆ ನಾನು
ಈ ಮನಿ ಹೆಣಮಗಳು ಮುದ್ದು ಕೊಟ್ಟಳು
ಅದಕ ಹತ್ತೇದ ಹಣಿಮ್ಯಾಲ
ಇಷ್ಟು ಕೇಳಿ ಆಕಿ ಗಂಡಗ ಸಿಟ್ಟು ಬಂತೋ ಭಯಂಕರ
ಮನಿಯೊಳಗ ಹೋದ ಕೇಳಿ ಅಂವಸರ
ಕೂದಲ ಹಿಡಿದು ಎಳಿತಾನ ಧರಧರಾ
ಬಾರಕೋಲ ತಗೊಂಡು ನಿಂತ
ಜಂಗಮನ ಕೂಡ ನೀ ಮಾಡಿದೆ ಹಾದರ
ಅಂತ ಖಟದ ಐದಾರ
ಬಿಡಿಸವರಿಲ್ಲ ಯಾರ್‍ಯಾರ ಕೇಳಿರಿ ಯಾರ್‍ಯಾರ
ಮನಿ ಬಿಟ್ಟು ಹೊರಗ ನೂಕಿ ಬಿಟ್ಟರು
ಸುಮ್ಮನಾಗಿ ಕುಂತಾಳ್ರಿ ಗುಣವಂತಿ
ಪತಿವ್ರತಾ ನಮ್ಮ ಲೀಲಾವತಿ ಹಾಂ ಗೀಗೀ ॥ ೩ ॥

ಹನ್ನೆರಡು ವರ್ಷದ ತನ ಅಲ್ಲೆ ಕುಂತಾಳ
ಬಿಡಿಸಿ ಕೊಳ್ಳವರ ದಿಕ್ಕಿಲ್ಲ.
ಪುನಾ ಉಪಾಧ್ಯಾಯನ ವೇಶತಾಳಿ ಅಲ್ಲಿಗಿ ಬಂದನಾ
ಕೇವಲ.
ಊರ ಸುತ್ತ ಶೀಸಿನ ಕ್ವಾಟಿ ಇತ್ತು
ಒಂದೇ ಇತ್ತು ಅಗಸಿ ಬಾಗಿಲ.
ರಾತ್ರಿ ವೇಳೆಯಲ್ಲಿ ಅಗಸಿ ಕೀಲಿಮ್ಯಾಲ ಕೈ ಎಳೆದು
ಬಂದ ಕೇವಲ.
ಮುಂಜಾನೆದ್ದು ಬಾಗಿಲ ತೆಗಿಬೇಕೆಂದರೆ ಒಬ್ಬರಿಗೂ
ಬಾಗಿಲು ತೆರೆದಿಲ್ಲ.

ಅರಸ ಬಂದ ನೋಡ ಬೇಕಾದರ ಉಕ್ಕಿಂದು ಆಗಿತ್ತು
ಬಾಗಿಲ.
ದನಾ ಕರಾ ಮಂದಿ ಊರಾಗ ಕೂತ್ತಿತ್ತು
ಮೂರು ದಿವಸ ತನಕ ತಿಪ್ಪಲಾ.
ಹ್ಯಾಂಗ ಮಾಡೂನಂತ ನೆರೆದ ಕೂತಾರ ಮಂದೆಲ್ಲ
ಊರು ಕೇರೆಲ್ಲ ಹಾಂ ಗೀಗೀ ॥ ೪ ॥

ಅದೇ ವೇಳೆಯಲ್ಲಿ ಮಹಾದೇವ ಬಂದ ಉಪಾಧ್ಯಾಯನಾಗಿ
ಪಂಚಾಂಗ ಹೇಳುವ ಸಲುವಾಗಿ ಕೇಳಿ
ಮಂದಿ ಹೇಳತಾನ ಎಲ್ಲರಿಗೂ ಪತಿವ್ರತ ಬಾಲ್ಯಾರಗಿ
ಕರಕೊಂಡು ಬಂದು ಬಾಗಿಲಿಗಿ ಆರತಿ ಬೆಳಗಿರಿ ಬಾಗಲಗಿ
ಅಲ್ಲಿತನ ಬಾಗಿಲ ತೆರೆದಿಲ್ಲ ಸುಮ್ಮನೆ ಆಗಬ್ಯಾಡರಿ
ಫಜಿತಿ
ಮೂರು ಲೋಕದಲ್ಲಿ ಯಾರೂ ಇಲ್ಲ ಪತಿವ್ರತಾ ನಮ್ಮ ಲೀಲಾವತಿ
ಡಂಗುರ ಸಾರ್‍ಯಾರ ಬಾಗಿಲ ತೆರದವರಿಗಿ ಏಳೂರು ಜಾಗೀರಿ
ಕೊಡತೇನರಿ
ಸೂರ್ಯ ಹೋಂಡುದರೊಳಗ ಆರತಿ ತಗೊಂಡು ಅಗಸಿಬಾಗಿಲ
ಬರಬೇಕು.
ಊರಿಗೆ ಊರೆ ಬಂದು ಆರತಿ ಹಿಡಕೊಂಡ ಅಗಸ್ಯಾಗ ನೆರೆದರು
ಸಾಲಿಗೆಸಾಲ.
ಒಬ್ಬರಿಗೂ ಬಾಗಿಲ ತೆರಿಲಿಲ್ಲ. ಮರ್‍ಯಾದೆ ಕಳಕೊಂಡು
ಮನಿಗಿ ಹೋದರು ಒಬ್ಬರಿಗೂ ಬಾಗಿಲ ತೆರಿಲಿಲ್ಲ.
ಅಲ್ಲಿ ಕೂತಿದ್ದ ಬಡವ ಮನುಷ್ಯ ನೊಬ್ಬ ಎದ್ದು ನಿಂತು ಕೇಳತಾನ
ಲೀಲಾವತಿ ಮಾತ್ರ ಬಂದೇ ಇಲ್ಲ.
ಆ ಬಡವನ ಮಾತು ಕೇಳಿ ಮಂದೆಲ್ಲ ಬೈತಾರ
ಒಳ್ಳೇ ಒಳ್ಳೇ ಸ್ತ್ರೀಯರಿಗೆ ಆಗಲಿಲ್ಲ
ಹಾದರ ಕಾಲಾಗ ಹೊರಗ ಹಾಕ್ಯಾರ ಆಕಿಗ್ಯಾಂಗ ತೆರಿತದ ಬಾಗಿಲ.
ಆಗ ಆ ಊರ ರಾಜ್ಯಾ ಅಂತಾನ ಕರಕೊಂಡ ಬರ್‍ರಿ ನೋಡೋಣ.
ಮನದಂದು ಸಂಶೆಯ ದೂರಮಾಡೋಣ
ಅದೇ ಬಡವ ಮನುಷ್ಯಾನ ಹೋಗಿ ಲೀಲಾವತಿ ಕರದಾನ
ದಯ ಮಾಡ ತಾಯಿ ಅಂದಾನ.

ಖುಬುಲಾಗಿ ಕೈಯಾನ ಆರತಿ ಹಿಡಕೊಂಡ
ಸಭಾಕ ಬಂದಾಳ್ರಿ ಪತಿವ್ರತಿ ಲೀಲಾವತಿ.
ನೆಳ್ಳ ಹೋಗಿ ಕೀಲಿ ಮ್ಯಾಗ ಬಿದ್ದಾಗ ಖಟ್‌ಅಂತ
ತೆರೆದಿತ್ತ ಬಾಗಿಲ.

ಧನ್ಯ, ಧನ್ಯ ಅಂದು ತಾಳೀಯನ್ನು ಕೊಡದಾರ
ಹಸ್ತವಿಟ್ಟು ರಾಜ್ಯ ತೆಲಿ ಮ್ಯಾಲ
ಏನುಬೇಡತಿ ಬೇಡತಾಯಿ ನಿ ಬೇಡಿದ್ದು ಇಲ್ಲಾಂತ
ಅನುದಿಲ್ಲ.
ಲೀಲಾವತಿ ಅಂತಾಳ ನಾ ಏನ ಬೇಡಲಿ
ರಾಜಕಿ ಕೊಟ್ಟರೂ ಸಹಿತ ಜರೂರಿಲ್ಲ
ಅಗಲಿದ ಗಂಡನ ಕೂಡಿಸಿ ಹೋಗಿರಿ
ಹೆಣ್ಣು – ಗಂಡು ನೆರೆದಂತ ಜನರೆಲ್ಲ

ಆಯೇರಿ ಮಾಡಿ ಇಬ್ಬರಿಗೂ ಸತಿ – ಪತಿ ಕೂಡಿಸಿ
ಮೆರವಣಿಗಿ ತೆಗೆದರು ಆನಿ ಮ್ಯಾಲ.
ಲೀಲಾವತಿ ಗುಣಾ ಎಲ್ಲರಿಗೂ ಇರಲೆಂದು
ಹಾಡಿ ಹೇಳುವೆ ಸಣ್ಣ ಬಾಲ ॥ ಹಾಂ ಗೀಗೀ ॥

ಅಂತಹ ಬಾಲ್ಯಾರಿದ್ದರ ನಮ್ಮ ಪವಿತ್ರ ಹಿಂದುಸ್ಥಾನ
ಎಲ್ಲರಿಗೂ ಬರುವುದು ಮಾನ – ಪಾನ.
ಸರ್ವ ಕಾಲ ಮಾಡೆವಿ ಈಶ ಭೋಗೇಶನಧ್ಯಾನ
ಅವನಿಂದ ಜಲ್ಮ ಪಾವನ.

ಕಲ್ಲಣ್ಣ ಕವಿಗಳು ಕನ್ನಡ ದೇಶಕ ಕೀರ್ತನ
ವರ ಕೊಟ್ಟಾನ ಅವಗ ಭಗವಾನ
ಮುದ್ದಾಮ ಎಲ್ಲರಿಗೂ ಬುದ್ಧಿ ಬರುವುದಕಾಗಿ
ತಿದ್ದಿ ಹೇಳಿನ್ರಿ. ಇಂತಹ ಹಕೀಕತಿ
ಮೂರು ಲೋಕದಲ್ಲಿ ಸರಿಯಾಗಿ ಗುಣವಂತಿ
ಪತಿ ವ್ರತಾ ನಮ್ಮ ಲೀಲಾವತಿ.

॥ ಹಾಂ ಗೀಗೀ ॥

ಖ್ಯಾಲಿ :

ಅಹಂಕಾರ ಕೆಟ್ಟ ಮಗುವೆ ನಿಮಗೆ
ನಾ ಎಂಬ ಅಕ್ಷರ ಮೂಡಿತೇ ಕೆಟ್ಟ ॥ ಪ ॥

ಲಂಕಾದೇಶದ ರಾವಣ ಅಹಂಕಾರ ತೊಟ್ಟ
ಸರಿ ಯಾರು ಗಣನೆಂದು ಸೀತಾನ ವೈದಿಟ್ಟ
ರಾಮನ ಕರದೊಳು ಪ್ರಾಣವ ಕೊಟ್ಟ,
ಅಹಂಕಾರ ಕೆಟ್ಟ ॥ ೧ ॥

ತನ್ನಿಂದ ತಾನೇ ಭಸ್ಮಾ ಸೂರ ಸುಟ್ಟ
ಜಲಂಧರ ಧೈತ್ಯರಿಗೆ ಕೊಂದ ನೀಲಕಂಠ
ಅಹಂಕಾರ ಕೆಟ್ಟ ॥ ೨ ॥

ಕಡಣಿಯ ಪುರದೊಳು ಈಶನ ವೀರ
ಬಲ್ಲಂತ ಶರಣರಿಗೆ ಅಮೃತದ ಊಟ
ಕಲ್ಲಣ್ಣ ಬಳದಾರ ಎಂಜಲ ತಾಟಾ
ಅಹಂಕಾರ ಕೆಟ್ಟ ॥ ೩ ॥

■■■